ಭಾನುವಾರ, ಮಾರ್ಚ್ 3, 2024 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪರಿಷ್ಕರಣಾ ಸಮಿತಿ ರೂಪಿಸಿದ ಕರಡು ಪ್ರತಿ ಶೀಘ್ರವೇ ಸಲ್ಲಿಕೆ

ವಿದ್ಯಾರ್ಥಿ–ಶಿಕ್ಷಕ ಸ್ನೇಹಿ ಪಠ್ಯ ಸಿದ್ಧ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲಿ ದೀರ್ಘ ವಿವರ ಒಳಗೊಂಡ ಪಾಠಗಳಿಗೆ ಕತ್ತರಿ ಹಾಕಿದ್ದು, ವಿದ್ಯಾರ್ಥಿ–ಶಿಕ್ಷಕಸ್ನೇಹಿ ಪಠ್ಯ ಪುಸ್ತಕಗಳ ಕರಡನ್ನು ಮಂಜುನಾಥ ಜಿ. ಹೆಗಡೆ ಸಂಯೋಜಕರಾಗಿರುವ ರಾಜ್ಯ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ ಸಿದ್ಧಪಡಿಸಿದೆ. ಅಂತಿಮ ವರದಿಯನ್ನು ಸದ್ಯವೇ ಸರ್ಕಾರಕ್ಕೆ ಸಲ್ಲಿಸಲಿದೆ.

ಆರನೇ ತರಗತಿಯಿಂದ 10ನೇ ತರಗತಿವರೆಗಿನ ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಕಳೆದ ಸೆಪ್ಟೆಂಬರ್‌ನಲ್ಲಿ ಐದು ಸಮಿತಿಗಳನ್ನು ರಚಿಸಲಾಗಿತ್ತು. ಕನ್ನಡ ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆ, 6, 7ನೇ ತರಗತಿಯ ಸಮಾಜ ವಿಜ್ಞಾನ ಹಾಗೂ 8, 9, 10ನೇ ತರಗತಿಯ ಸಮಾಜ ವಿಜ್ಞಾನಕ್ಕೆ ಪ್ರತ್ಯೇಕವಾಗಿ ಸಮಿತಿಗಳನ್ನು ರಚಿಸಲಾಗಿತ್ತು. ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿತ್ತು. ನಿಗದಿತ ಅವಧಿಯ ಒಳಗೆ ಮಧ್ಯಂತರ ವರದಿ ನೀಡಿದ ನಂತರ ಮತ್ತೆ ಎರಡು ತಿಂಗಳು ಅವಧಿ ವಿಸ್ತರಿಸಲಾಗಿತ್ತು.

ಹಿಂದಿನ ಬಿಜೆಪಿ ಸರ್ಕಾರ ತಿದ್ದುಪಡಿ ಮಾಡಿದ್ದ ಪಾಠಗಳು ಹಾಗೂ ಕೆಲ ಅಂಶಗಳನ್ನು ಕಾಂಗ್ರೆಸ್ ಸರ್ಕಾರ ವಾಪಸ್ ಪಡೆದು, ಬರಗೂರು ರಾಮಚಂದ್ರಪ್ಪ ಸಮಿತಿ ರೂಪಿಸಿದ್ದ ಹಳೆಯ ಪಠ್ಯಗಳನ್ನೇ ಮುಂದುವರಿಸಿತ್ತು. 2023–24ನೇ ಸಾಲಿನ ಪಠ್ಯಪುಸ್ತಕಗಳು ಮುದ್ರಣವಾಗಿ ಆಗಲೇ ಶಾಲೆಗಳನ್ನು ತಲುಪಿದ್ದರಿಂದ ಕೈಬಿಟ್ಟ–ಸೇರಿಸಿದ ಪಾಠಗಳು, ತಿದ್ದುಪಡಿ ಮಾಡಿದ ಅಂಶಗಳನ್ನು ಒಳಗೊಂಡ ಪ್ರತ್ಯೇಕ ಕೈಪಿಡಿ ಸಿದ್ಧಪಡಿಸಿ, ಶಾಲೆಗಳಿಗೆ ಸರಬರಾಜು ಮಾಡಲಾಗಿತ್ತು. ಕರ್ನಾಟಕ ಪಠ್ಯಪುಸ್ತಕ ಸಂಘ ಮಾಡಿದ್ದ ತಿದ್ದುಪಡಿಗಳನ್ನು ಹಾಗೆ ಉಳಿಸಿಕೊಂಡಿರುವ ಸಮಿತಿ, ಹೊಸದಾಗಿ ಎಂಟು ಪಾಠಗಳನ್ನು ಸೇರ್ಪಡೆ ಮಾಡಿದೆ.

6ನೇ ಪುಟ ನೋಡಿ

2024–25ನೇ ಸಾಲಿಗಿಲ್ಲ ರಾಜ್ಯ ಶಿಕ್ಷಣ ನೀತಿ?

ರಾಜ್ಯ ಶಿಕ್ಷಣ ನೀತಿಯ ಕರಡು ರೂಪಿಸಲು ಶಿಕ್ಷಣ ತಜ್ಞ ಹಾಗೂ ಯುಜಿಸಿ ಮಾಜಿ ಅಧ್ಯಕ್ಷ ಪ್ರೊ.ಸುಖ್‌ದೇವ್ ಥೋರಟ್ ಅಧ್ಯಕ್ಷತೆಯ ರಾಜ್ಯ ಶಿಕ್ಷಣ ನೀತಿ ಆಯೋಗದ ಅವಧಿಯನ್ನು ಇದೇ ವರ್ಷದ ಆಗಸ್ಟ್‌ವರೆಗೆ ವಿಸ್ತರಿಸಲಾಗಿದೆ. ಹಾಗಾಗಿ, ಹೊಸ ಶಿಕ್ಷಣ ನೀತಿಯ ಅನುಷ್ಠಾನ ಇನ್ನೊಂದು ವರ್ಷ ವಿಳಂಬವಾಗಲಿದೆ.

ಆಯೋಗ ಈಗಾಗಲೇ ಪ್ರಥಮ ವರದಿ ಸಲ್ಲಿಸಿದ್ದು, ಇನ್ನಷ್ಟು ವಿಷಯಗಳ ಕುರಿತು ಅಧ್ಯಯನ ನಡೆಸುತ್ತಿದೆ. ಪ್ರೌಢಶಾಲಾ ಹಂತದವರೆಗಿನ ಪಠ್ಯಪುಸ್ತಕಗಳು ಮುದ್ರಣ ಹಂತದಲ್ಲಿವೆ. ಪದವಿ ಕಾಲೇಜುಗಳು ಜುಲೈ–ಆಗಸ್ಟ್ ವೇಳೆಗೆ ಪ್ರಾರಂಭವಾಗಿರುತ್ತವೆ. ಆಯೋಗ ಅಂತಿಮ ವರದಿ ನೀಡಿದ ನಂತರ ಅನುಷ್ಠಾನಕ್ಕೆ ಸಮಯಬೇಕಾಗುತ್ತದೆ. ಹಾಗಾಗಿ, ರಾಜ್ಯ ಶಿಕ್ಷಣ ನೀತಿ ಅನುಷ್ಠಾನ ವಿಳಂಬವಾಗಲಿದೆ ಎನ್ನುತ್ತಾರೆ ಉನ್ನತ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ.

ರುದ್ರೇಶ್ ಹತ್ಯೆ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತ ರುದ್ರೇಶ್ ಅವರ ಹತ್ಯೆಯ ಪ್ರಮುಖ ಸಂಚುಕೋರ ಎನ್ನಲಾದ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಕಾರ್ಯಕರ್ತ ಫೌಸ್ ನಯಾಜಿ ಎಂಬಾತನನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಮುಂಬೈ ವಿಮಾನ ನಿಲ್ದಾಣದಲ್ಲಿ ಶನಿವಾರ ಬಂಧಿಸಿದ್ದಾರೆ.

ನಯಾಜಿ ತಾಂಜಾನಿಯಾದಲ್ಲಿ ತಲೆಮರೆಸಿಕೊಂಡಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಾಂಜಾನಿಯಾದಿಂದ ಮುಂಬೈಗೆ ಬಂದ ನಯಾಜಿಯನ್ನು ಬಂಧಿಸಲಾಯಿತು. ಗುಪ್ತಚರ ಮಾಹಿತಿ ಆಧರಿಸಿ ನಯಾಜಿ ತಾಂಜಾನಿಯಾದಲ್ಲಿ ಇರುವುದನ್ನು ಪತ್ತೆ ಮಾಡಲಾಗಿತ್ತು. ಅಲ್ಲಿನ ಅಧಿಕಾರಿಗಳು ಆತನನ್ನು ಹಿಡಿದು, ಭಾರತಕ್ಕೆ ಕಳುಹಿಸಿದ್ದರು.

ಬೆಂಗಳೂರಿನ ಶಿವಾಜಿನಗರದ ಆರ್‌ಎಸ್‌ಎಸ್ ಕಾರ್ಯಕರ್ತ ರುದ್ರೇಶ್ ಅವರನ್ನು 2016ರ ಅಕ್ಟೋಬರ್ 16ರಂದು ಹತ್ಯೆ ಮಾಡಲಾಗಿತ್ತು. ಪಿಎಫ್‌ಐನ ನಾಲ್ವರು ಕಾರ್ಯಕರ್ತರು ಅವರ ಹತ್ಯೆ ಮಾಡಿದ್ದರು. ಹತ್ಯೆಯ ಪ್ರಮುಖ ಸಂಚುಕೋರ ಎಂಬ ಆರೋಪ ನಯಾಜಿ ಮೇಲಿದೆ.

ಎಸ್‌ಡಿಪಿಐ ಪಕ್ಷದ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಆಗಿದ್ದ ನಯಾಜಿ, ಆಸಿಂ ಶರೀಫ್ ಎನ್ನುವ ವ್ಯಕ್ತಿಯೊಬ್ಬನ ಜೊತೆಗೂಡಿ ರುದ್ರೇಶ್ ಕೊಲೆಗೆ ಸಂಚು ರೂಪಿಸಿದ್ದ ಎಂಬ ಆರೋಪ ಇದೆ ಎಂದು ಹೇಳಿಕೆ ತಿಳಿಸಿದೆ. ಪಿಎಫ್‌ಐ ಸಂಘಟನೆಯ ರಾಜಕೀಯ ವಿಭಾಗ ಎಸ್‌ಡಿಪಿಐ.

‘ಆರ್‌ಎಸ್‌ಎಸ್ ಸದಸ್ಯರು ಹಾಗೂ ಇಡೀ ಸಮಾಜದಲ್ಲಿ ಭೀತಿಯನ್ನು ಸೃಷ್ಟಿಸಲು ನಯಾಜಿ ಮತ್ತು ಶರೀಫ್ ಜೊತೆಗೂಡಿ, ಇತರ ನಾಲ್ವರಿಗೆ ರುದ್ರೇಶ್ ಅವರನ್ನು ಹತ್ಯೆ ಮಾಡಲು ಪ್ರೇರಣೆ ನೀಡಿದ್ದರು. ಆರ್‌ಎಸ್‌ಎಸ್ ವಿರುದ್ಧದ ಸಮರವು ಪವಿತ್ರ ಯುದ್ಧಕ್ಕೆ ಸಮ ಎಂದು ಆ ನಾಲ್ವರ ಮನವೊಲಿಸಲಾಗಿತ್ತು’ ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ನಯಾಜಿ ಬಂಧನದ ಪರಿಣಾಮವಾಗಿ ರುದ್ರೇಶ್ ಹತ್ಯೆ ಪ್ರಕರಣದ ಎಲ್ಲ ಆರೋಪಿಗಳನ್ನು ಬಂಧಿಸಿದಂತಾಗಿದೆ. ಇತರ ಆರೋಪಿಗಳ ವಿರುದ್ಧದ ವಿಚಾರಣೆಯು ಬೆಂಗಳೂರಿನಲ್ಲಿ ಇರುವ ಎನ್‌ಐಎ ವಿಶೇಷ ನ್ಯಾಯಾಲಯದಲ್ಲಿ ನಡೆಯುತ್ತಿದೆ.

ಎನ್‌ಐಎ 2017ರ ಏಪ್ರಿಲ್ 12ರಂದು ಸಲ್ಲಿಸಿದ್ದ ಆರೋಪಪಟ್ಟಿ ಪ್ರಕಾರ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪೊಲೀಸರು ಐದು ಮಂದಿಯನ್ನು ಬಂಧಿಸಿದ್ದಾರೆ. ಇರ್ಫಾನ್ ಪಾಶಾ, ವಸೀಂ ಅಹಮದ್, ಮೊಹಮ್ಮದ್ ಸಾದಿಕ್, ಮೊಹಮ್ಮದ್ ಮುಜೀಬ್ ಉಲ್ಲಾ ಮತ್ತು ಅಸೀಂ ಶರೀಫ್ ಬಂಧಿತರು.

‘ಆರೋಪಿಗಳಲ್ಲಿ ಯಾರೊಬ್ಬರಿಗೂ ರುದ್ರೇಶ್ ಬಗ್ಗೆ ವೈಯಕ್ತಿಕವಾಗಿ ದ್ವೇಷ ಇರಲಿಲ್ಲ. ರುದ್ರೇಶ್ ಅವರು ನಿರ್ದಿಷ್ಟ ಸಂಘಟನೆಯ ನಾಯಕ/ಕಾರ್ಯಕರ್ತ ಆಗಿದ್ದ ಕಾರಣಕ್ಕಾಗಿಯೇ ಹತ್ಯೆ ಮಾಡಲಾಯಿತು. ಜನರಲ್ಲಿನ ಒಂದು ವರ್ಗದಲ್ಲಿ ಭೀತಿಯನ್ನು ಸೃಷ್ಟಿಸುವ ಉದ್ದೇಶದಿಂದ ಮಾಡಿರುವ ಹತ್ಯೆಯು ಭಯೋತ್ಪಾದಕ ಕೃತ್ಯ ಎಂಬುದು ತನಿಖೆಯಲ್ಲಿ ಸ್ಪಷ್ಟವಾಗಿದೆ. ಆರ್‌ಎಸ್‌ಎಸ್‌ನ ಸದಸ್ಯರೊಬ್ಬರನ್ನು ಹಾಡಹಗಲೇ, ಮಾರಣಾಂತಿಕ ಅಸ್ತ್ರಗಳನ್ನು ಬಳಸಿ ಹತ್ಯೆ ಮಾಡುವ ಮೂಲಕ ಈ ಉದ್ದೇಶ ಈಡೇರಿಸಲಾಗಿದೆ’ ಎಂದು ಎನ್‌ಐಎ 2017ರ ಏಪ್ರಿಲ್‌ನಲ್ಲಿ ಹೇಳಿದೆ.

ಸ್ಫೋಟ: ಭದ್ರತೆ ಹೆಚ್ಚಿಸಲು ಚಿಂತನೆ

ಬೆಂಗಳೂರು: ‘ವೈಟ್‌ಫೀಲ್ಡ್ ಸಮೀಪದ ರಾಮೇಶ್ವರಂ ಕೆಫೆ ಹೋಟೆಲ್‌ನಲ್ಲಿ ನಡೆದ ಸ್ಫೋಟ ಕೃತ್ಯದ ಹಿನ್ನೆಲೆಯಲ್ಲಿ ನಗರದ ಎಲ್ಲ ಹೋಟೆಲ್‌ಗಳಲ್ಲಿ ಭದ್ರತೆ ಹೆಚ್ಚಿಸಲು ಚಿಂತನ–ಮಂಥನ ಸಭೆ ಹಮ್ಮಿಕೊಳ್ಳಲಾಗುವುದು’ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಹೇಳಿದರು.

‘ನಗರದಲ್ಲಿರುವ ಎಲ್ಲ ಹೋಟೆಲ್‌ಗಳ ಒಳಗಡೆ ಮತ್ತು ಹೊರಭಾಗದಲ್ಲಿ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿಕೊಳ್ಳುವ ಕುರಿತು ಚಿಂತನೆ ನಡೆಸಲಾಗಿದೆ. ಈ ಬಗ್ಗೆ ಭದ್ರತಾ ಪರಿಣತರೊಂದಿಗೆ ಸಭೆ ನಡೆಸಲಾಗುವುದು’ ಎಂದರು.

‘ಹೋಟೆಲ್‌ಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಹಾಗೂ ಗ್ರಾಹಕರ ಭದ್ರತೆಗೆ ಹೆಚ್ಚು ಆದ್ಯತೆ ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ನೀರು ಪೂರೈಕೆ ಟ್ಯಾಂಕರ್ ಸರ್ಕಾರದ ಸುಪರ್ದಿಗೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನಲ್ಲಿ ಕುಡಿಯುವ ನೀರಿನ ಕೊರತೆ ನೀಗಿಸಲು ಕೊಳವೆ ಬಾವಿ ನೀರು ಪೂರೈಸುವ ಟ್ಯಾಂಕರ್‌ಗಳನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲಾಗುವುದು’ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಕುಡಿಯುವ ನೀರು ಮಾರಾಟದ ದಂಧೆ ತಡೆಯಲು ಕೊಳವೆಬಾವಿ ಹಾಗೂ ಅವುಗಳಿಂದ ನೀರು ಪೂರೈಕೆ ಮಾಡುವ ಟ್ಯಾಂಕರ್‌ಗಳು ಮಾರ್ಚ್ 7ರ ಒಳಗಾಗಿ ನೋಂದಣಿ ಮಾಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ’ ಎಂದು ತಿಳಿಸಿದರು.

‘ಕೊಳವೆ ಬಾವಿಗಳ ಮೂಲಕ ಬೆಂಗಳೂರಿನ ಕುಡಿಯುವ ನೀರಿನ ಅಭಾವ ನೀಗಿಸಲಾಗುವುದು. ಈ ವಿಚಾರವಾಗಿ ಚರ್ಚಿಸಲು ಸೋಮವಾರ (ಮಾರ್ಚ್ 4) ಮಧ್ಯಾಹ್ನ 12 ಗಂಟೆಗೆ ಸಭೆ ಕರೆಯಲಾಗಿದೆ. ಬೆಂಗಳೂರಿನ ಎಲ್ಲಾ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ತಲಾ ₹ 10 ಕೋಟಿ ಅನುದಾನ ನೀಡಲಾಗಿದೆ’ ಎಂದರು. ‘ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಅಭಾವ ಎದುರಾಗಿರುವ ಹಿನ್ನೆಲೆಯಲ್ಲಿ ಜಲ ಮಂಡಳಿ ಮತ್ತು ಬಿಬಿಎಂಪಿ ಅಧಿಕಾರಿಗಳು ನಿತ್ಯವೂ ಸಭೆ ನಡೆಸಿ, ಪರಿಹಾರ ಕ್ರಮ ಕುರಿತು ಚರ್ಚಿಸುತ್ತಿದ್ದಾರೆ’ ಎಂದರು.

SSM Public School

AFFILIATED TO CBSE, NEW DELHI. NO.: 831080
NO. 1, CHENNAMA TANK BED, OPP. TO THYAGARAJA NAGAR CORPORATION OFFICE, BSK 2ND STAGE, BENGALURU 560028

CBSE ADMISSIONS 2024

HEARTY CONGRATULATIONS
TO THE CLASS TOPPERS 2023-24

LAKSHMI C
1st Grade / 99.4%

KSHITIJA
2nd Grade / 100%

SHRAVYA S SHETTY
3rd Grade / 99.5%

KHUSHI SHET
4th Grade / 99.7%

PRERANA A
5th Grade / 95.51%

VIVIKTH PUROHIT
6th Grade / 93.10%

KUSHAL P SRINIVAS
7th Grade / 95.33%

SAI RAKSHA K A
8th Grade / 97.52%

TRISHALA C
9th Grade / 98.8%

NURSERY, PRIMARY, MIDDLE AND HIGH SCHOOL
Dear Parents, admission open from Nursery to X Grade for the Session 2024-25.
ENROLL YOUR KIDS. 6 DECADES OF EXPERIENCE IN PROVIDING QUALITY EDUCATION

- Excellent Academic Ambience; Joyful Learning Atmosphere
- Enjoys academic support by reputed sister institutions of PES group
- **Mentoring system** - Teachers as Academic Parents
- 100% results since last 10 years; High number of first classes; **2nd rank in 10th Grade (2022)**
- Digitally enabled classrooms
- Focus on **extracurricular activities** for holistic development of students
- **Inculcation Social Leadership** through value education
- Well-equipped **Laboratories & Library**
- **Parent-Teacher Meetings**
- Sports Facilities
- CCTV enabled Campus Security

www.ssm.school | +91 80 26770369 / +91 9606971875 | admissions@ssm.school

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್



ಬಿಡಿಎ: ಹೊಸೂರು ರಸ್ತೆಯಿಂದ ಮೈಸೂರು ರಸ್ತೆವರೆಗೆ 'ಬ್ಯುಸಿನೆಸ್ ಕಾರಿಡಾರ್'

ಪಿಆರ್‌ಆರ್–2ಗೆ ಡಿಪಿಆರ್

• ಆರ್. ಮಂಜುನಾಥ್

ಬೆಂಗಳೂರು: ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ ಮೂಲಕ ಮೈಸೂರು ರಸ್ತೆವರೆಗೆ 'ಪೆರಿಫೆರಲ್ ವರ್ತುಲ ರಸ್ತೆ–2' (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಜ್ಜಾಗಿದೆ.

100 ಮೀಟರ್ ಅಗಲದಲ್ಲಿ 30 ಕಿ.ಮೀ ಉದ್ದ ನಿರ್ಮಾಣವಾಗುವ ಈ ಕಾರಿಡಾರ್‌ನ ಎರಡೂ ಬದಿಯಲ್ಲಿ ತಲಾ 24 ಮೀಟರ್ ವಾಣಿಜ್ಯ ನಿವೇಶನಗಳನ್ನು ರಚಿಸಲಾಗುತ್ತದೆ. ಈ ವಾಣಿಜ್ಯ ಪ್ರದೇಶವನ್ನು ಮಾರಾಟ ಮಾಡಿ ವ್ಯವಹಾರಕ್ಕೆ ಉತ್ತೇಜನ ನೀಡಲಾಗುತ್ತದೆ. ಹೀಗಾಗಿಯೇ ಇದನ್ನು 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ಎಂದು ಕರೆಯಲಾಗುತ್ತದೆ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಈ ರೀತಿಯ ಕಾರಿಡಾರ್ ನಿರ್ಮಾಣಗೊಳ್ಳಲಿದೆ.

43 ಅಂಡರ್ ಪಾಸ್, ಮೇಲ್ಸೇತುವೆ ಹಾಗೂ ಗ್ರೇಡ್ ಸೆಪರೇಟರ್‌ಗಳು ಈ ಕಾರಿಡಾರ್‌ನಲ್ಲಿ ನಿರ್ಮಾಣವಾಗಲಿವೆ. ಇವುಗಳನ್ನು ಬಿಡಿಎ ವತಿಯಿಂದ ನಿರ್ವಹಣೆ ಮಾಡಲಾಗುತ್ತದೆ. ₹ 1,569 ಕೋಟಿ ಅಂದಾಜು ವೆಚ್ಚದ ಈ ಕಾರಿಡಾರ್ ಅನ್ನು 30 ತಿಂಗಳಲ್ಲಿ ನಿರ್ಮಿಸಲು ಯೋಜಿಸಲಾಗಿದೆ. ವಿಸ್ತೃತ ಯೋಜನಾ ವರದಿ (ಡಿಪಿಆರ್) ಸೇರಿದಂತೆ ಟೆಂಡರ್ ಆಹ್ವಾನ, ಕಾರ್ಯಾದೇಶ, ಕಾಮಗಾರಿಯನ್ನು ಈ ಅವಧಿಯಲ್ಲಿ ಮುಗಿಸಲು ಬಿಡಿಎ ಯೋಜನೆ ರೂಪಿಸಿ, ಯೋಜನಾ ನಿರ್ವಹಣೆ ಸಲಹಾ (ಪಿಎಂಸಿ) ಸೇವೆಗೆ ಟೆಂಡರ್ ಆಹ್ವಾನಿಸಿದೆ.

'ಹೊಸೂರು ರಸ್ತೆಯಲ್ಲಿರುವ ಎಲೆಕ್ಟ್ರಾನಿಕ್ ಸಿಟಿ ಸಂಪರ್ಕದಿಂದ ಆರಂಭವಾಗುವ 'ಬ್ಯುಸಿನೆಸ್ ಕಾರಿಡಾರ್', ಆನೇಕಲ್‌ನ ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶಗಳಿಗೂ ಸಂಪರ್ಕ ಕಲ್ಪಿಸಲಿದೆ. ಬನ್ನೇರುಘಟ್ಟ ರಸ್ತೆ ಹಾಗೂ ಕನಕಪುರ ರಸ್ತೆಗೂ ಟ್ರಕ್ ಟರ್ಮಿನಲ್‌ಗಳನ್ನು ಒದಗಿಸಲಿದ್ದು, ಅಲ್ಲಿನ ಉದ್ಯಮಗಳಿಗೂ ಅನುಕೂಲವಾಗಲಿದೆ. ನಗರ ಕೇಂದ್ರ ಭಾಗದಲ್ಲಿ ಟ್ರಕ್‌ನಂತಹ ಸಾಗಣೆ ವಾಹನಗಳಿಂದ ಉಂಟಾಗುತ್ತಿದ್ದ ದಟ್ಟಣೆ ಇದರಿಂದ ನಿವಾರಣೆಯಾಗಲಿದ್ದು, ಪ್ರತ್ಯೇಕ ಮಾರ್ಗವನ್ನೇ ರಚಿಸಿ, ವಾಣಿಜ್ಯ ವ್ಯವಹಾರವನ್ನೂ ಉತ್ತೇಜಿಸಲಾಗುತ್ತದೆ' ಎಂದು ಬಿಡಿಎ ಎಂಜಿನಿಯರ್‌ಗಳು ಮಾಹಿತಿ ನೀಡಿದರು.

ಹೊಸೂರು ರಸ್ತೆಯಿಂದ ತುಮಕೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಉದ್ದೇಶವನ್ನು ಪಿಆರ್‌ಆರ್–2 ಯೋಜನೆ ಹೊಂದಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆವರೆಗೆ ನಿರ್ಮಾಣವಾಗುತ್ತಿರುವ 10 ಕಿ.ಮೀ ಪ್ರಮುಖ ರಸ್ತೆ (ಎಂಎಆರ್) ಈ ಪಿಆರ್‌ಆರ್–2ನ ಭಾಗವಾಗಿದೆ. ಹೊಸೂರು ರಸ್ತೆಯಿಂದ ಮೈಸೂರು ರಸ್ತೆವರೆಗಿನ 'ಬ್ಯುಸಿನೆಸ್ ಕಾರಿಡಾರ್' ಅನ್ನು ಎಂಎಆರ್‌ಗೆ ಸಂಪರ್ಕಿಸಲಾಗುತ್ತದೆ. ಈ ಎಂಎಆರ್ 9 ಕಿ.ಮೀ ನಿರ್ಮಾಣ ಕಾರ್ಯ ಅಂತಿಮ ಘಟ್ಟದಲ್ಲಿದ್ದು, ಒಂದು ಕಿ.ಮೀ ವ್ಯಾಪ್ತಿಯ ಪ್ರದೇಶದ ವ್ಯಾಜ್ಯ ನ್ಯಾಯಾಲಯದಲ್ಲಿದೆ. ಅದು ಇತ್ಯರ್ಥವಾದ ಕೂಡಲೇ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುತ್ತದೆ. ನಂತರ, ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಗೆ 'ಬ್ಯುಸಿನೆಸ್ ಕಾರಿಡಾರ್'ಗೆ ಸಂಪರ್ಕ ಕಲ್ಪಿಸಲು ಎರಡನೇ ಹಂತದಲ್ಲಿ ಯೋಜನೆಯನ್ನು ಕೈಗೊಳ್ಳಲಾಗುತ್ತದೆ ಎಂದು ಬಿಡಿಎ ಎಂಜಿನಿಯರ್‌ಗಳು ಮಾಹಿತಿ ನೀಡಿದರು.

'ಭೂಸ್ವಾಧೀನ ಪ್ರಕ್ರಿಯೆಗಳು ಮುಗಿದಿದ್ದು, ಅಂತಿಮ ಆದೇಶಗಳಾಗಬೇಕಿವೆ. ಈ ಬಗ್ಗೆ ನ್ಯಾಯಾಲಯದ ಆದೇಶವೂ ನಮ್ಮ ಪರವಾಗಿಯೇ ಇದೆ' ಎಂದು ಹೇಳಿದರು.

₹1,569 ಕೋಟಿ ಅಂದಾಜು ವೆಚ್ಚ | **854 ಎಕರೆ** ಒಟ್ಟು ಭೂಸ್ವಾಧೀನ | **58** ಹಳ್ಳಿಗಳ ವ್ಯಾಪ್ತಿ | **30 ಕಿ.ಮೀ** ಕಾರಿಡಾರ್

ಸಾಂದರ್ಭಿಕ ಚಿತ್ರ

'ರಸ್ತೆ ಬಳಕೆ ಶುಲ್ಕ ಇರುವುದಿಲ್ಲ!'

100 ಮೀಟರ್ ಅಗಲದ ಕಾರಿಡಾರ್‌ನಲ್ಲಿ 3 ಮೀಟರ್ ವಿಭಜಕ ಸೇರಿದಂತೆ 25 ಮೀಟರ್‌ನಲ್ಲಿ ಪ್ರಮುಖ ರಸ್ತೆ ನಿರ್ಮಾಣವಾಗಲಿದೆ. ತಲಾ 10 ಮೀಟರ್‌ಗಳ ಎರಡು ಸರ್ವೀಸ್ ನಿರ್ಮಿಸಲಾಗುತ್ತದೆ. ಇಕ್ಕೆಲಗಳಲ್ಲಿ 24 ಮೀಟರ್ ಅಗಲದಲ್ಲಿ ವಾಣಿಜ್ಯ ನಿವೇಶನಗಳನ್ನು ರಚಿಸಲಾಗುತ್ತದೆ. ಕಾರಿಡಾರ್ ನಿರ್ಮಾಣದ ಹಂತದಲ್ಲೇ ಈ ನಿವೇಶನಗಳನ್ನು ರಚಿಸಿ ಮಾರಾಟ ಮಾಡಲು ಉದ್ದೇಶಿಸಲಾಗಿದ್ದು, ಇದರಿಂದ ಸಾಕಷ್ಟು ಹಣವೂ ಸಂಗ್ರಹವಾಗುತ್ತದೆ. ಹೀಗಾಗಿ, ಬ್ಯುಸಿನೆಸ್ ಕಾರಿಡಾರ್‌ಗೆ ಯಾವುದೇ ರೀತಿಯ ಹಣದ ಕೊರತೆ ಉಂಟಾಗುವುದಿಲ್ಲ. ಶೀಘ್ರವಾಗಿ ನಿರ್ಮಿಸಲು ಯೋಜಿಸಲಾಗಿದೆ. ವಾಣಿಜ್ಯ ಕಾರಿಡಾರ್ ಆಗಿರುವುದರಿಂದ, ರಸ್ತೆ ಬಳಕೆಗೆ ಶುಲ್ಕವನ್ನು ವಿಧಿಸುವ ಯೋಚನೆ ಇಲ್ಲ' ಎಂದು ಬಿಡಿಎ ಎಂಜಿನಿಯರ್‌ಗಳು ತಿಳಿಸಿದರು.

ಎಲ್ಲೆಲ್ಲಿ ಭೂ ಸ್ವಾಧೀನ?

ಆನೇಕಲ್ ತಾಲ್ಲೂಕು

ಅತ್ತಿಬೆಲೆ ಹೋಬಳಿ: ಹೆಬ್ಬಗೋಡಿ, ವೀರಸಂದ್ರ, ಗೊಲ್ಲಹಳ್ಳಿ.
ಜಿಗಣಿ ಹೋಬಳಿ: ಮಾರಗೊಂಡನಹಳ್ಳಿ, ಹುಲಿಮಂಗಲ, ಬಿಂಗಿಪುರ, ಹುಲ್ಲಹಳ್ಳಿ, ಬಿಲ್ವಾರದಹಳ್ಳಿ, ಭೂತನಹಳ್ಳಿ, ಕನ್ನಿಕನ ಅಗ್ರಹಾರ.

ಬೆಂಗಳೂರು ದಕ್ಷಿಣ ತಾಲ್ಲೂಕು

ಬೇಗೂರು ಹೋಬಳಿ: ಹೊಮ್ಮದೇವನಹಳ್ಳಿ, ಬಸವನಪುರ.
ಉತ್ತರಹಳ್ಳಿ ಹೋಬಳಿ: ಗೊಟ್ಟಿಗೆರೆ, ಪಿಳ್ಳಗಾನಹಳ್ಳಿ, ಗುಳಕಮಲೆ, ಕಗ್ಗಲಿಪುರ, ಉತ್ತರಿ.
ಕೆಂಗೇರಿ ಹೋಬಳಿ: ಬಿ.ಎಂ. ಕಾವಲ್, ಅಗರ, ದೇವಗೆರೆ, ಗುಡಿಮಾವು, ಕಂಬೀಪುರ, ಚಲ್ಲಘಟ್ಟ, ಕೆ. ಕೃಷ್ಣಸಾಗರ, ಭೀಮನಕುಪ್ಪೆ, ಕೊಮ್ಮಘಟ್ಟ, ಸೂಲಿಕೆರೆ, ಕೆಂಚನಪುರ.
ಯಶವಂತಪುರ ಹೋಬಳಿ: ಕನ್ನಲ್ಲಿ, ಸೀಗೇಹಳ್ಳಿ.
ದಾಸನಪುರ ಹೋಬಳಿ: ಮಾಚೋಹಳ್ಳಿ, ವಡ್ಡರಹಳ್ಳಿ, ಲಕ್ಷ್ಮಿಪುರ, ಕದರೇನಹಳ್ಳಿ, ಹಾರೊಕ್ಯಾತನಹಳ್ಳಿ, ದೊಂಬರಹಳ್ಳಿ, ಸಿದ್ದನಹೊಸಹಳ್ಳಿ, ಮಾದನಾಯಕನಹಳ್ಳಿ.

ಸನ್ಮಾನ, ಸಂಭ್ರಮ

ರಂಗಮ್ಮ ಭೀಮಪ್ಪ ಚೆಟ್ಟಿ ಲಲಿತಕಲಾ ಟ್ರಸ್ಟ್ ಮತ್ತು ಕಲಾ ಪ್ರದರ್ಶಿನಿ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಘಂಟಸಾಲ ಶತಮಾನೋತ್ಸವ ಸಂಭ್ರಮ' ಕಾರ್ಯಕ್ರಮದಲ್ಲಿ ಹಂಸಲೇಖ, ಟಿ.ಎಸ್. ಸತ್ಯವತಿ, ಲಲಿತಾ ಶ್ರೀನಿವಾಸನ್ ಮತ್ತು ಚಿತ್ರಾ ವಿಶ್ವೇಶ್ವರನ್ ಅವರಿಗೆ 'ಕಲಾ ಪ್ರದರ್ಶಿನಿ ಘಂಟಸಾಲ ಪುರಸ್ಕಾರ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಿ.ಎನ್. ಗುಪ್ತ, ಕೆ.ಸಿ. ರಾಮಮೂರ್ತಿ, ಮಂಜುಳಾ ಚೆಲ್ಲೂರ್ ಮತ್ತು ಪಾರ್ವತಿ ರವಿ ಘಂಟಸಾಲ ಪಾಲ್ಗೊಂಡಿದ್ದರು
– ಪ್ರಜಾವಾಣಿ ಚಿತ್ರ

ಮತ ಎಣಿಕೆ ಕೇಂದ್ರಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಶನಿವಾರ ಮೂರು ಮತ ಎಣಿಕೆ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮತ ಎಣಿಕೆ ಕೇಂದ್ರಗಳ ಬಳಿ ಇರಬೇಕಾದ ಸಿದ್ದತೆಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗ ನೀಡುವ ನಿರ್ದೇಶನಗಳನ್ನು ಚಾಚು ತಪ್ಪದೆ ಪಾಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮತ ಎಣಿಕೆ ಕೇಂದ್ರಗಳು ಇರಬೇಕಾದ ರೀತಿ, ಬ್ಯಾರಿಕೇಡ್ ಅಳವಡಿಕೆ, ಆರ್.ಒ.ಕಚೇರಿ, ಮಾಧ್ಯಮ ಕೇಂದ್ರ ಸ್ಥಾಪನೆ, ಅಧಿಕಾರಿಗಳು ಹಾಗೂ ನಾಗರಿಕರು ಹೋಗುವ–ಬರುವ ವ್ಯವಸ್ಥೆ, ಮೂರು ಹಂತದ ಭದ್ರತೆ, ಸ್ಟ್ರಾಂಗ್ ರೂಂ, ಎಣಿಕೆ ಕೊಠಡಿಗಳಲ್ಲಿ ಟೇಬಲ್ ಗಳ ಅಳವಡಿಕೆ, ಸಿಸಿಟಿವಿ ಕ್ಯಾಮೆರಾ ಅಳವಡಿಕೆ ವ್ಯವಸ್ಥೆಗಳು ಸಮರ್ಪಕವಾಗಿರಬೇಕು ಎಂದರು. ಲೋಕಸಭಾ ಚುನಾವಣೆಯು ಯಾವುದೇ ಗೊಂದಲಗಳಿಗೆ ಆಸ್ಪದ ಇರಬಾರದು. ತೊಂದರೆಗಳಿಲ್ಲದೆ ಸುಸೂತ್ರವಾಗಿ ನಡೆಯಲು ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಮೂರು ಮತ ಎಣಿಕೆ ಕೇಂದ್ರಗಳು: ಬೆಂಗಳೂರು ಕೇಂದ್ರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜು, ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಸೇಂಟ್ ಜೋಸೆಫ್ ಕಾಲೇಜು ಹಾಗೂ ಬೆಂಗಳೂರು ದಕ್ಷಿಣಕ್ಕೆ ಸಂಬಂಧಿಸಿದಂತೆ ಜಯನಗರ ಎಸ್.ಎಸ್.ಎಂ.ಆರ್.ವಿ ಕಾಲೇಜಿನಲ್ಲಿ ಮತ ಎಣಿಕೆ ನಡೆಯಲಿದೆ.

ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳಾದ ಕೆ.ಹರೀಶ್ ಕುಮಾರ್, ದಯಾನಂದ್, ವಿನೋತ್ ಪ್ರಿಯಾ, ಚುನಾವಣಾ ವಿಭಾಗದ ಅಧಿಕಾರಿಗಳು, ನೋಡಲ್ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆವೈಸಿ ಇಲ್ಲದೆ ಡೆಬಿಟ್ ಕಾರ್ಡ್‌ನಂತೆಯೂ ಬಳಸಬಹುದು

ಬಂತು 'ನಮ್ಮ ಮೆಟ್ರೊ– ಒನ್ ನೇಷನ್ ಒನ್ ಕಾರ್ಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ಪ್ರಯಾಣಿಸುವ ಸೌಲಭ್ಯದೊಂದಿಗೆ, ಡೆಬಿಟ್ ಕಾರ್ಡ್‌ನಂತೆ ವಾಣಿಜ್ಯ ಮಳಿಗೆಗಳಲ್ಲೂ ಉಪಯೋಗಿಸಬಹುದಾದ 'ಒನ್ ನೇಷನ್ ಒನ್ ಕಾರ್ಡ್' ಅನ್ನು ಪರಿಚಯಿಸಲಾಗಿದೆ.

ಆರ್‌ಬಿಎಲ್ ಬ್ಯಾಂಕ್‌ನ ಸಹಯೋಗದಲ್ಲಿ ಎಜಿಎಸ್ ಟ್ರಾನ್ಸಾಕ್ಟ್ ಟೆಕ್ನಾಲಜಿ ಕಾರ್ಡ್ ಅನ್ನು ಸಿದ್ಧಪಡಿಸಿದ್ದು, ನಮ್ಮ ಮೆಟ್ರೊದ ಕೌಂಟರ್‌ನಲ್ಲಿ ಕಾರ್ಡ್‌ಗಳನ್ನು ಖರೀದಿಸಬಹುದಾಗಿದೆ. ಮೆಟ್ರೊ ಕೌಂಟರ್ ಸೇರಿದಂತೆ ಆನ್‌ಲೈನ್, ನೆಟ್ ಬ್ಯಾಂಕಿಂಗ್ ಹಾಗೂ ವ್ಯಾಲೆಟ್‌ಗಳಿಂದಲೂ ಈ ಕಾರ್ಡ್‌ಗೆ ಹಣವನ್ನು ಟಾಪ್ ಅಪ್ ಮಾಡಿಕೊಳ್ಳಬಹುದು.

'ಬೆಂಗಳೂರಿನ 'ನಮ್ಮ ಮೆಟ್ರೊ'ದಲ್ಲಿ ಈ ಕಾರ್ಡ್ ಬಳಸುವ ಜೊತೆಗೆ, ಚೆನ್ನೈ, ದೆಹಲಿ ಮೆಟ್ರೊಗಳಲ್ಲೂ ಬಳಸಬಹುದಾಗಿದೆ. ಕೆವೈಸಿ ಸಲ್ಲಿಸದೆ ಹೆಸರು ಹಾಗೂ ಮೊಬೈಲ್ ಸಂಖ್ಯೆ ನೀಡುವ ಮೂಲಕ 'ಒನ್ ನೇಷನ್ ಒನ್ ಕಾರ್ಡ್' ಪಡೆಯಬಹುದು. ಆಗ ಅದನ್ನು ಮೆಟ್ರೊದಲ್ಲಿ ಮಾತ್ರ ಉಪಯೋಗಿಸಬಹುದು. ಡೆಬಿಟ್ ಕಾರ್ಡ್‌ನಂತೆ ಎಲ್ಲೆಡೆ ಬಳಸುವ ಮೊದಲು ಕೆವೈಸಿಯನ್ನು ಆನ್‌ಲೈನ್ ಅಥವಾ 'BMRCL RBLBankNCMC' ಮೊಬೈಲ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬಹುದು' ಎಂದು ಎಜಿಎಸ್ ಟ್ರಾನ್ಸಾಕ್ಟ್ ಟೆಕ್ನಾಲಜಿಯ ಡಿಜಿಟಲ್ ವ್ಯವಹಾರದ ಕಾರ್ಯಕಾರಿ ಉಪಾಧ್ಯಕ್ಷ ಅಲೋಕ್ ಸಿಂಗ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕೆವೈಸಿ ಇಲ್ಲದೆ ಸಾರಿಗೆ ವ್ಯವಸ್ಥೆಗಳಲ್ಲಿ ಪ್ರೀಪೇಯ್ಡ್ ಕಾರ್ಡ್‌ಗಳನ್ನು ಬ್ಯಾಂಕ್‌ಗಳು ಒದಗಿಸಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸುತ್ತೋಲೆ ಹೊರಡಿಸಿದೆ. ಹೀಗಾಗಿ ಈ ಮೊದಲು ಕೆವೈಸಿ ಇಲ್ಲದೆ ನಮ್ಮ ಮೆಟ್ರೊದಲ್ಲಿ ಈ ಕಾರ್ಡ್ ಲಭ್ಯ ಇರುತ್ತಿರಲಿಲ್ಲ. ಈಗ ಸುಲಭವಾಗಿ ಪಡೆಯಬಹುದಾಗಿದೆ. ಹಣವನ್ನು ಟಾಪ್‌ಅಪ್ ಮಾಡಿಕೊಂಡು ಅದರಲ್ಲಿ ಎಷ್ಟು ಅಗತ್ಯವೋ ಅಷ್ಟನ್ನು ನಮ್ಮ ಮೆಟ್ರೊ ಪ್ರಯಾಣದ ಸೌಲಭ್ಯಕ್ಕೆ ವರ್ಗಾಯಿಸಿಕೊಳ್ಳಬಹುದು. ಉಳಿದ ಹಣವನ್ನು ಡೆಬಿಟ್ ಕಾರ್ಡ್ ಆಗಿ ಎಲ್ಲೆಡೆಯೂ ಬಳಸಿಕೊಳ್ಳಬಹುದು. ಮೆಟ್ರೊ ಬಳಕೆಯಲ್ಲಿ ₹50 ಠೇವಣಿಯಾಗಿ ಉಳಿದುಕೊಳ್ಳಲಿದೆ. ಆರ್‌ಬಿಎಲ್ ಬ್ಯಾಂಕ್ ಖಾತೆಯನ್ನು ಸಂಪೂರ್ಣವಾಗಿ ನಿರ್ವಹಿಸಲಿದ್ದು, ನಮ್ಮ ಮೆಟ್ರೊದೊಂದಿಗೆ ಎಲ್ಲ ಒಪ್ಪಂದಗಳನ್ನು ಮಾಡಿಕೊಂಡಿದೆ. ಎಜಿಎಸ್ ಟ್ರಾನ್ಸಾಕ್ಟ್ ಟೆಕ್ನಾಲಜಿ ವತಿಯಿಂದ ಬ್ಯಾಕ್ ಹ್ಯಾಂಡ್ ಸೇರಿದಂತೆ ಎಲ್ಲ ರೀತಿಯ ತಂತ್ರಜ್ಞಾನವನ್ನು ಒದಗಿಸಲಾಗಿದೆ' ಎಂದು ಮಾಹಿತಿ ನೀಡಿದರು.

ನಮ್ಮ ಮೆಟ್ರೊ ಕಾರ್ಡ್

'ನಮ್ಮ ಮೆಟ್ರೊದ ಸುಮಾರು 40 ಸಾವಿರ ಪ್ರಯಾಣಿಕರು ಈವರೆಗೆ ಈ ಕಾರ್ಡ್ ಅನ್ನು ಪಡೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ 'ಒನ್ ನೇಷನ್ ಒನ್ ಕಾರ್ಡ್' ಮಾತ್ರ ಚಾಲ್ತಿಯಲ್ಲಿರುವುದರಿಂದ ಎರಡು ವರ್ಷಗಳಲ್ಲಿ ಬೆಂಳೂರಿನಲ್ಲಿ ಸುಮಾರು 2 ಲಕ್ಷ ಕಾರ್ಡ್ ಹಾಗೂ ದೇಶದಾದ್ಯಂತ 25 ಲಕ್ಷ ಕಾರ್ಡ್‌ಗಳನ್ನು ವಿತರಿಸುವ ಗುರಿ ಹೊಂದಲಾಗಿದೆ' ಎಂದು ಹೇಳಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮಹಿಳಾ ದಿನಾಚರಣೆ
ಹೊಸ್ತಿಲಲ್ಲಿ ನಮ್ಮ ಸುತ್ತಮುತ್ತಲಿನ ಸಾಮಾನ್ಯ ಮಹಿಳೆಯರ ಸಂಭ್ರಮದ ಕಟ್ಟು...

ಇಂದು ಪಲ್ಸ್ ಪೋಲಿಯೊ: 62.85 ಲಕ್ಷ ಮಕ್ಕಳ ಗುರಿ 6
ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದಿಂದ ವರದಿ ಸಲ್ಲಿಕೆ
'ದಬ್ಬಾಳಿಕೆಗೆ ಮತ್ತೊಂದು ಹೆಸರೇ ಟಿಎಂಸಿ' 8
ಭೂ ಗುತ್ತಿಗೆ ಕಾನೂನಿಗೆ ಶಿಫಾರಸು 6

"THE LEADER IN RURAL EDUCATION EXCELLENCE"
ನಮ್ಮ ಎಕ್ಸೆಲ್ ಅಕಾಡೆಮಿಕ್ಸ್® ಬೆಂಗಳೂರು
IIT-Main & Advanced | NEET | BITS | AIIMS | JIPMER | CET | COMED-K
ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್, ನಂ.326, ಪೀಪಲ್ ಟೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ, ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
7676-91-7777, 9513657041, 9535656277
REG. OPEN FOR REGULAR & ONLINE
NEET, K-CET, IIT-JEE
CRASH COURSE
2ND PUC/12TH, +2 STUDYING / PASSED STUDENTS
POSTAL COACHING
1ST PUC & 2ND PUC, 11TH & 12, +1 & +2 STUDYING STUDENTS
BATCH STARTS FROM 19TH MARCH 2024
CELEBRATING 15 SUCCESSFUL YEARS with Hardwork & Dedication EXCEL ACADAMICS
ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು
ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ

ವೆಚ್ಚ ದುಪ್ಪಟ್ಟಾದರೂ ಪೂರ್ಣಗೊಳ್ಳದ ಕಾಮಗಾರಿ • ಬರದಿಂದ ಬಳಲಿದ ರೈತರಿಗೆ ನೀರಿಗೂ ತತ್ವಾರ

ಹಣ ಹರಿದರೂ ತುಂಬದ ಕೆರೆ

• ಮನೋಜಕುಮಾರ್ ಗುದ್ದಿ

ಒಳನೋಟ

ಕಲಬುರಗಿ: 'ದನ, ಕರುಗಳು, ರೈತರ ಹೊಲಗಳಿಗೆ ಆಸರೆಯಾಗಿದ್ದ ಕೆರೆಯಲ್ಲಿ ಹೆಚ್ಚೆಂದ್ರ ಇನ್ನೊಂದ ತಿಂಗಳ ತನಕ ನೀರು ಸಿಗಬಹುದು. ಪೂರ್ತಿ ಬತ್ತಿ ಹೋದ ಮ್ಯಾಲ ನೀರ ಕುಡಿಸಲು ದನಗಳನ್ನ ಎಲ್ಲಿಗೆ ಒಯ್ಯಬೇಕು ಅದ ಗೊತ್ತಾಗ್ತಾ ಇಲ್ರಿ. ಕಟುಕರಿಗೆ ಮಾರಾಕೂ ಮನಸ್ಸು ಬರ್ತಾ ಇಲ್ರಿ...'

ಕಲಬುರಗಿ ತಾಲ್ಲೂಕಿನ ಕುಮಸಿ ಗ್ರಾಮದ ಕೆರೆಯಂಗಳದಲ್ಲಿ ಜಾನುವಾರು ಮೇಯಿಸುತ್ತಿದ್ದ ರೈತ ನಾಗನಗೌಡ ಕೋಳೂರ ಅವರ ಈ ಮಾತು ರಾಜ್ಯದ ಹಲವು ಗ್ರಾಮಗಳ ಪರಿಸ್ಥಿತಿಗೆ ಕನ್ನಡಿ ಹಿಡಿಯುತ್ತದೆ.

ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಈ ಬಾರಿ ಬರಗಾಲದ ಛಾಯೆ ಆವರಿಸಿದೆ. ಬಯಲುಸೀಮೆ ಅಷ್ಟೇ ಅಲ್ಲ; ಮಲೆನಾಡ ಸೆರಗಿನ ಜಿಲ್ಲೆಗಳಲ್ಲಿನ ಕೆರೆಗಳೂ ಬತ್ತುವ ಹಂತ ತಲುಪಿವೆ. ಗ್ರಾಮದ ಕೆರೆಗಳಿಗೆ ಕಾಯಕಲ್ಪ ನೀಡಲು ರಾಜ್ಯದ ಪ್ರಮುಖ ನದಿಗಳಾದ ಕೃಷ್ಣಾ, ಕಾವೇರಿ, ತುಂಗಭದ್ರಾ, ಮಲಪ್ರಭಾ, ಭೀಮಾ, ಕಬಿನಿ, ವರದಾ, ಬೋರಿಹಳ್ಳ, ಬೆಣ್ಣೆತೊರಾ, ನಾಗರಾಳ ಜಲಾಶಯಗಳಿಂದ ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನೀರು ತುಂಬಿಸುವ ಯೋಜನೆಗಳನ್ನು ಸಣ್ಣ ನೀರಾವರಿ ಇಲಾಖೆ ಕೈಗೆತ್ತಿಕೊಂಡಿದೆ. ಆದರೆ, ಕಳಪೆ ಸಾಮಗ್ರಿ ಬಳಕೆ, ಸಕಾಲಕ್ಕೆ ಅನುದಾನ ಬಿಡುಗಡೆಯಾಗದಿರುವುದು, ಯೋಜನೆ ಪೂರ್ಣಗೊಳಿಸುವಲ್ಲಿ ಬದ್ಧತೆಯ ಕೊರತೆಯಿಂದಾಗಿ ಹಲವೆಡೆ ಯೋಜನೆಗಳು ವಿಫಲವಾಗಿವೆ. ರಾಜ್ಯದ ಪ್ರಮುಖ ಕೆರೆಗಳನ್ನು ತುಂಬಿಸುವ ಸರ್ಕಾರದ ಆಶಯ ಪರಿಪೂರ್ಣವಾಗಿ ಅನುಷ್ಠಾನಕ್ಕೆ ಬಂದಿಲ್ಲ.

ಉದಾಹರಣೆಗೆ, ಭದ್ರಾ ಮತ್ತು ತುಂಗಾ ಜಲಾಶಯಗಳಿಂದ ನಾಲೆಗೆ ನೀರು ಹರಿಸಲು 'ಭದ್ರಾ ಮೇಲ್ದಂಡೆ' ಯೋಜನೆ ರೂಪಿಸಿ ಎರಡು ದಶಕಗಳೇ ಕಳೆದಿವೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಯ 367 ಕೆರೆಗಳ ಒಟ್ಟು ಸಾಮರ್ಥ್ಯದ ಶೇ 50ರಷ್ಟು ತುಂಬಿಸುವುದಾಗಿ ರೈತರಿಗೆ ಆಶ್ವಾಸನೆ ನೀಡಲಾಗಿತ್ತು. ತರೀಕೆರೆ, ಹೊಸದುರ್ಗ ಹಾಗೂ ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಕೆರೆಗಳಿಗೆ ಭದ್ರೆಯ ನೀರು ಹರಿಸುವ ಕಾಮಗಾರಿ ಇನ್ನೂ ಪ್ರಗತಿಯಲ್ಲಿದೆ. ಈವರೆಗೆ ₹ 6 ಸಾವಿರ ಕೋಟಿ ಸುರಿದರೂ ಬಯಲುಸೀಮೆ ಕೆರೆಗಳಿಗೆ ನೀರು ಬಂದಿಲ್ಲ!

ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನದಿಯಿಂದ ಏತ ನೀರಾವರಿಯ ಮೂರು ಯೋಜನೆಗಳು ಜಾರಿಗೊಂಡಿವೆ. ಅದರಲ್ಲಿ ಗೂಳೂರು–ಹೆಬ್ಬೂರು ಹಾಗೂ ಹೊನ್ನವಳ್ಳಿ ಯೋಜನೆ ಪೂರ್ಣಗೊಂಡಿದ್ದರೆ, ಶ್ರೀರಂಗ ಏತ ನೀರಾವರಿ ಯೋಜನೆ 8 ವರ್ಷಗಳಿಂದ ಕುಂಟುತ್ತಾ ಸಾಗಿದೆ. ಕುಣಿಗಲ್ ಹಾಗೂ ಮಾಗಡಿ ತಾಲ್ಲೂಕಿನ ಕೆರೆಗಳಿಗೆ ನೀರು ಹರಿಸುವ ಶ್ರೀರಂಗ ಏತ ನೀರಾವರಿ ಯೋಜನೆ 2015ರಲ್ಲಿ ಆರಂಭವಾಗಿದ್ದು, 8 ವರ್ಷ ಕಳೆದಿದ್ದರೂ ತೆವಳುತ್ತಾ ಸಾಗಿದೆ. ಕುಣಿಗಲ್ ತಾಲ್ಲೂಕಿನ 17 ಕೆರೆ, ಮಾಗಡಿ ತಾಲ್ಲೂಕಿನ 66 ಕೆರೆ ಸೇರಿ ಒಟ್ಟು 83 ಕೆರೆಗಳಿಗೆ ನೀರು ಹರಿಸಲು ಉದ್ದೇಶಿಸಲಾಗಿದೆ.

ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕು ಗುಡದನಾಳ ಬಳಿ ರಾಂಪೂರ ಏತ ನೀರಾವರಿ ಯೋಜನೆಯ 11ನೇ ವಿತರಣಾ ನಾಲೆಯ ಕಾಲುವೆ ಜತೆಗೆ ರಸ್ತೆ ಕಿತ್ತು ಹೋಗಿರುವುದು

10ನೇ ಪುಟ ನೋಡಿ

'ಕೇಂದ್ರದಿಂದ ₹ 2,300 ಕೋಟಿ ಬಾಕಿ'

'ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದಲ್ಲಿ ಹಲವು ಕೆರೆ ತುಂಬಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕೇಂದ್ರದಿಂದ ಇದಕ್ಕಾಗಿ ₹ 2,300 ಕೋಟಿ ಬಾಕಿ ಬರಬೇಕಿದೆ' ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

'ಕೇಂದ್ರದಿಂದಲೂ ಹಣ ಕೊಡಿಸುವಂತೆ ಸಚಿವರಾದ ಪ್ರಲ್ಹಾದ ಜೋಶಿ, ಭಗವಂತ ಖೂಬಾ ಅವರಿಗೆ ಮನವಿ ಸಲ್ಲಿಸಿದ್ದೇನೆ' ಎಂದರು.

'ಕೃಷ್ಣಾ, ಕಾವೇರಿ, ನೇತ್ರಾವತಿ ಸೇರಿದಂತೆ ವಿವಿಧ ನದಿಗಳಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ಕೆರೆಯ ಸುತ್ತಲಿನ ಅಂತರ್ಜಲ ಹೆಚ್ಚಾಗಲಿದೆ. ಅದರಲ್ಲೂ ಬರಗಾಲದ ಈ ಸಂದರ್ಭದಲ್ಲಿ ನೀರು ತುಂಬಿಸುವ ಯೋಜನೆ ಅತ್ಯಂತ ಅಗತ್ಯವಾಗಿದೆ. ಕಾಲಮಿತಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲು ಹೆಚ್ಚುವರಿ ಅನುದಾನ ಬಿಡುಗಡೆಗೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ಹೇಳಿದರು.

ಸ್ಫೋಟ: ಸಂಘಟನೆ ಕೈವಾಡ

ರಾಮೇಶ್ವರಂ ಕೆಫೆಗೆ ಎನ್‌ಎಸ್‌ಜಿ ಕಮಾಂಡೊ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಹಿಂದೆ ನಿಷೇಧಿತ ಸಂಘಟನೆಯೊಂದರ ಕೈವಾಡವಿರುವ ಶಂಕೆ ವ್ಯಕ್ತವಾಗಿದೆ. ಆ ಆಯಾಮದಲ್ಲಿ ತನಿಖೆ ನಡೆಸುತ್ತಿರುವ ಸಿಸಿಬಿ ವಿಶೇಷ ತಂಡದ ಪೊಲೀಸರು, ನಾಲ್ವರನ್ನು ಶನಿವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಕೆಫೆ ಸ್ಥಳದಲ್ಲಿ ಸಿಕ್ಕಿರುವ ಕಚ್ಚಾ ಬಾಂಬ್ (ಐಇಡಿ) ವಸ್ತುಗಳು ಹಾಗೂ ಈ ಹಿಂದೆ ಮಂಗಳೂರಿನಲ್ಲಿ ಬಾಂಬ್ ಸ್ಫೋಟ ನಡೆದಿದ್ದ ಸ್ಥಳದಲ್ಲಿ ದೊರಕಿದ್ದ ವಸ್ತುಗಳಿಗೂ ಹೋಲಿಕೆಯಾಗುತ್ತಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

ಸಂಘಟನೆಯೊಂದರ ಪ್ರಚೋದನೆಯಿಂದ 30 ವರ್ಷದಿಂದ 35 ವರ್ಷ ವಯಸ್ಸಿನ ಶಂಕಿತ, ಕಚ್ಚಾ ಬಾಂಬ್ ತಯಾರಿಸಿ ಕೆಫೆಯಲ್ಲಿ ಇಟ್ಟು ಹೋಗಿರುವ ಅನುಮಾನ ದಟ್ಟವಾಗಿದೆ.

ಎನ್‌ಎಸ್‌ಜಿ (ರಾಷ್ಟ್ರೀಯ ಭದ್ರತಾ ಸಿಬ್ಬಂದಿ) ಬಾಂಬ್ ನಿಷ್ಕ್ರಿಯ ದಳದ ಮೂವರು ಕಮಾಂಡೊಗಳು, ಸ್ಫೋಟ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದರು. ಕೆಫೆಯ ಪ್ರತಿಯೊಂದು ಸ್ಥಳದ ಫೋಟೊ ಕ್ಲಿಕ್ಕಿಸಿಕೊಂಡರು. ಸ್ಥಳೀಯ ಪೊಲೀಸರಿಂದ ಮಾಹಿತಿ ಪಡೆದರು. ಸಂಘಟನೆಯೊಂದರ ಕೈವಾಡವಿರುವುದರಿಂದಲೇ ಎನ್‌ಎಸ್‌ಜಿ ಕಮಾಂಡೊಗಳು ಪರಿಶೀಲನೆಗೆ ಬಂದಿದ್ದಾರೆಂದು ಗೊತ್ತಾಗಿದೆ.

ಬಾಂಬ್ ಸ್ಫೋಟ ನಡೆದಿದ್ದ ಸ್ಥಳ ಹಾಗೂ ಸುತ್ತಮುತ್ತ ಎನ್‌ಎಸ್‌ಜಿ ಕಮಾಂಡೊಗಳು ಶನಿವಾರ ಪರಿಶೀಲನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಪರಿಣತರಿಂದ ಬಾಂಬ್ ತಯಾರಿ'

'ಸ್ಫೋಟದ ಸ್ಥಳದಲ್ಲಿ ಸಿಕ್ಕಿರುವ ಕಚ್ಚಾ ವಸ್ತುಗಳನ್ನು ಗಮನಿಸಿದರೆ, ಪರಿಣತರು ಬಾಂಬ್ ತಯಾರಿಸುವ ಅನುಮಾನ ವ್ಯಕ್ತವಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಜ್ಯದಲ್ಲಿ ಈ ಹಿಂದೆ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣಗಳ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಜೈಲಿನಲ್ಲಿರುವ ಶಂಕಿತ ಉಗ್ರರು ಹಾಗೂ ನಿಷೇಧಿತ ಸಂಘಟನೆಗಳ ಸದಸ್ಯರ ಚಲನವಲನಗಳ ಬಗ್ಗೆಯೂ ನಿಗಾ ವಹಿಸಲಾಗಿದೆ' ಎಂದು ತಿಳಿಸಿವೆ.

4ನೇ ಪುಟ ನೋಡಿ

195 ಅಭ್ಯರ್ಥಿಗಳ ಬಿಜೆಪಿ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ 370 ಸ್ಥಾನಗಳನ್ನು ಗೆಲ್ಲಬೇಕೆಂದು ಪಣ ತೊಟ್ಟಿರುವ ಆಡಳಿತಾರೂಢ ಬಿಜೆಪಿಯು 195 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶನಿವಾರ ಪ್ರಕಟಿಸಿದೆ.

ವಾರಾಣಸಿ ಕ್ಷೇತ್ರದಿಂದ ಪ್ರಧಾನಿ ನರೇಂದ್ರ ಮೋದಿ ಹಾಗೂ ಗಾಂಧಿನಗರ ಕ್ಷೇತ್ರದಿಂದ ಗೃಹ ಸಚಿವ ಅಮಿತ್ ಶಾ ಸ್ಪರ್ಧೆ ಮಾಡಲಿದ್ದಾರೆ. ಮೊದಲ ಪಟ್ಟಿಯಲ್ಲಿ ಸಚಿವರಾದ ರಾಜನಾಥ ಸಿಂಗ್, ಸ್ಮೃತಿ ಇರಾನಿ ಅವರ ಹೆಸರಿದೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ ಹಾಗೂ ಇಬ್ಬರು ಮಾಜಿ ಮುಖ್ಯಮಂತ್ರಿಗಳು ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ಅವರ ರಾಷ್ಟ್ರ ರಾಜಕಾರಣಕ್ಕೆ ಮತ್ತೆ ಮರಳಲು ಭೂಮಿಕೆ ಸಿದ್ಧವಾಗಿದೆ. ಅವರು ಈ ಹಿಂದೆ ಸಂಸದರಾಗಿದ್ದ ವಿದಿಶಾ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯು ಗುರುವಾರ ರಾತ್ರಿ 11ರಿಂದ ಶುಕ್ರವಾರ ಬೆಳಿಗ್ಗೆ 4 ಗಂಟೆಯವರೆಗೆ ಸಭೆ ನಡೆಸಿ ಮೊದಲ ಪಟ್ಟಿಗೆ ಅಂತಿಮ ರೂಪ ನೀಡಿತ್ತು.

8ನೇ ಪುಟ ನೋಡಿ

0% EMI @ 2099 Only
EXCHANGE OFFER ALSO AVAILABLE
Distributor enquiries
Contact Us: 83101 61426

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹ 5875/gm
ಬೆಳ್ಳಿ ದರ: ₹ 72/gm
ವೇಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

'ಸಂವಿಧಾನದ ಪ್ರಾಣ ಪ್ರತಿಷ್ಠಾಪನೆ ಅಗತ್ಯ' 5
'ಹೆಸರಷ್ಟೇ ಪ್ರಧಾನಮಂತ್ರಿ ಆವಾಸ್...' 6

ಚಿನಕುರಳಿ
ಪ್ರಕಾಶ್ ಶೆಟ್ಟಿ

Birthday Remembrance

Sri B.S.Narayan
03rd March

You will live forever in our hearts
Your ideals are always there as beacons of inspiration

Fondly Remembered by :
Dr.B. S. Ragini Narayan
Donor Trustee & Chairperson, BMS Educational Trust
Life Trustee, BMS Hospital Trust

ಆನ್‌ಲೈನ್‌ನಲ್ಲೂ ಲಭ್ಯ
ಎಲ್‌ಐಸಿಯ ಧನ ವೃದ್ಧಿ
UIN: 512N362V02 | Plan No.: 869
ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ಇಂಡಿವಿಜ್ಯುವಲ್, ಸೇವಿಂಗ್ಸ್, ಲೈಫ್ ಇನ್ಶ್ಯೂರೆನ್ಸ್ ಪ್ಲಾನ್
ಏಕ ಕಂತಿನ ಯೋಜನೆ
ಅವಿರತ ವೃದ್ಧಿಯೊಂದಿಗೆ ಖಾತರಿಪಡಿಸಿದ ಸೇರ್ಪಡೆ
ಪಾಲಿಸಿ ಅವಧಿಯನ್ನು ಆಯ್ಕೆ ಮಾಡುವ ವಿಕಲ್ಪ (10 /15/18 ವರ್ಷಗಳು)
ಬಹು ಲಾಭಗಳು
ವಿಮಾ ಮೊತ್ತವನ್ನು ಆಯ್ಕೆ ಮಾಡುವ ವಿಕಲ್ಪ (ಕೋಷ್ಟಕ ಪ್ರೀಮಿಯಂನ 1.25 ಪಟ್ಟು ಅಥವಾ 10 ಪಟ್ಟು)
LIC/P1/2023-24/20/Kan
ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ LIC digital
ಸಂದರ್ಶಿಸಿರಿ: licindia.in
ಕಾಲ್ ಸೆಂಟರ್ ಸರ್ವಿಸ್ (022) 6827 6827
ವಿವರಗಳಿಗಾಗಿ ನಿಮ್ಮ ಏಜಂಟರನ್ನು /ಸಮೀಪದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿರಿ ಅಥವಾ ನಿಮ್ಮ ನಗರದ ಹೆಸರನ್ನು 56767474ಗೆ SMS ಮಾಡಿ
ನಮ್ಮನ್ನು ಫಾಲೋ ಮಾಡಿರಿ: LIC India Forever | IRDAI Regn No.: 512
ನಮ್ಮ ವಾಟ್ಸ್‌ಆ್ಯಪ್ ನಂ. 8976862090 'Hi' ಹೇಳಿರಿ
ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಶೂರೆನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೊಲೀಸರಲ್ಲಿ ದೂರು ನೀಡಬೇಕಾಗಿ ವಿನಂತಿ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

ಮಾಜಿ ಸಚಿವ ತಹಸೀಲ್ದಾರ್ ಬಿಜೆಪಿಗೆ ಸೇರ್ಪಡೆ

ಬೆಂಗಳೂರು: ಮಾಜಿ ಸಚಿವ ಮನೋಹರ್ ತಹಸೀಲ್ದಾರ್ ಕಾಂಗ್ರೆಸ್ ತೊರೆದು ಶನಿವಾರ ಬಿಜೆಪಿ ಸೇರಿದರು.

ಪಕ್ಷದ ಬಾವುಟ ನೀಡಿ ಅವರನ್ನು ಬರಮಾಡಿಕೊಂಡ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಹಿಂದುಳಿದ ವರ್ಗದ ನಾಯಕ ಬಿಜೆಪಿ ಸೇರಿದ್ದರಿಂದ ಹಾವೇರಿ ಜಿಲ್ಲೆಗೆ ದೊಡ್ಡ ಶಕ್ತಿ ಲಭಿಸಿದೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಲಾಭವಾಗಲಿದೆ ಎಂದರು.. ಕಾಂಗ್ರೆಸ್ ಸರ್ಕಾರ ಬಡವರು, ರೈತರು, ದಲಿತರ ಪರ ಕಾಳಜಿ ಇಲ್ಲದೇ ಜನವಿರೋಧಿಯಾಗಿದೆ ಎಂದು ಟೀಕಿಸಿದರು.

ಮನೋಹರ್ ತಹಸೀಲ್ದಾರ್ ಅವರು, ಬಿಜೆಪಿ ಸೇರ್ಪಡೆಗೆ ಬಸವರಾಜ ಬೊಮ್ಮಾಯಿ ಕಾರಣಕರ್ತರು. 'ಊಟ ಮಾಡಿ ಎಲೆ ಬಿಸಾಡಿದಂತೆ ಕಾಂಗ್ರೆಸ್ ನಡೆಸಿಕೊಂಡಿತು. ತಮಗಾದ ಅನ್ಯಾಯ ಗಮನಿಸಿದ ಬೊಮ್ಮಾಯಿ ಬಿಜೆಪಿಗೆ ಆಹ್ವಾನಿಸಿದರು, ಸ್ವೀಕರಿಸಿದೆ' ಎಂದರು.

ಬಸವರಾಜ ಬೊಮ್ಮಾಯಿ, ವಿಪಕ್ಷ ನಾಯಕ ಆರ್.ಅಶೋಕ ಇದ್ದರು.



ನಿಧನ

ಟಿ. ನಾರಾಯಣ ರೆಡ್ಡಿ (ವಯಸ್ಸು 94)

#6, 19ನೇ ಮುಖ್ಯ ರಸ್ತೆ, 4ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು-560102

ಇವರು ದಿ: 02.03.2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ಇವರ ಅಂತ್ಯಕ್ರಿಯೆಯನ್ನು ದಿ: 03.03.2024ರಂದು 11.30 ಗಂಟೆಗೆ ಕೂಡ್ಲು ಚಿತಾಗಾರ, ಬೆಂಗಳೂರು ಇಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು

ಟಿವಿನ್‌ಆರ್ ಕುಟುಂಬದವರು ಬಂಧುಗಳು ಮತ್ತು ಮಿತ್ರರು

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ರಾಮನಗರ ಜಿಲ್ಲೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,
ರಾಮನಗರ – 562 159 ದೂರವಾಣಿ : 080–2727 3094,
ಇ–ಮೇಲ್ : dhoramanagaram@gmail.com

ಸಂಖ್ಯೆ : ಎನ್.ಹೆಚ್.ಎಂ/ಡಿ.ಹೆಚ್.ಎಸ್/ರಾ/ಎಸ್.ಟಿ.ಎಲ್.ಎಸ್ ನೇಮಕಾತಿ/10/23–24
ದಿನಾಂಕ : 01–03–2024

ನೇಮಕಾತಿ ಪ್ರಕಟಣೆ

ರಾಮನಗರ ಜಿಲ್ಲೆಯಲ್ಲಿ 2023–24 ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಎನ್.ಟಿ.ಇ.ಪಿ ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸಲು **ಈ ಕೆಳಕಂಡ ಹುದ್ದೆಗೆ ಎನ್.ಹೆಚ್.ಎಮ್ ಮಾರ್ಗಸೂಚಿಯನ್ವಯ ನಿಯಮಾನುಸಾರವಾಗಿ ರೋಸ್ಟರ್ ಕಮ್ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ದಿನಾಂಕ : 07–03–2024 ರಂದು ಬೆಳಗ್ಗೆ 11.00 ಗಂಟೆಗೆ ಮೇಲೆ ತಿಳಿಸಿರುವ ಕಛೇರಿಯಲ್ಲಿ ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ.** ಅಗತ್ಯ ದಾಖಲಾತಿಗಳೊಂದಿಗೆ ಹಾಜರಾಗುವುದು. **ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೆ ಮೇಲೆ ತಿಳಿಸಿರುವ ಕಛೇರಿಯಲ್ಲಿ ಮಾಹಿತಿಯನ್ನು ಪಡೆಯಬಹುದು.**

1) ಹುದ್ದೆಯ ಹೆಸರು : ಹಿರಿಯ ಕ್ಷಯರೋಗ ಪ್ರಯೋಗಾಲಯ ಮೇಲ್ವಿಚಾರಕರು (Senior Tuberculosis Laboratary Supervisor), ವಿವರ : ಒಟ್ಟು ಹುದ್ದೆ – 01 (ಕನಕಪುರ), ಮಾಸಿಕ ವೇತನ : ರೂ. 21,000, ವಯೋಮಿತಿ : 40 ವರ್ಷದವರೆಗೆ, ಅರ್ಹತೆ ಮತ್ತು ಅನುಭವ : 1. ಪಿಯುಸಿ ಉತ್ತೀರ್ಣರಾಗಿರಬೇಕು. 2. ಡಿಪ್ಲೋಮಾ ಪ್ರಯೋಗಶಾಲಾ ತಂತ್ರಜ್ಞರ (ಮೆಡಿಕಲ್) ಕೋರ್ಸ್‌ನ್ನು ಮಾನ್ಯತೆ ಪಡೆದ ಸಂಸ್ಥೆಯಿಂದ ಮಾಡಿರಬೇಕು. 3. ಪ್ಯಾರಾಮೆಡಿಕಲ್ ಬೋರ್ಡಿನಲ್ಲಿ ನೊಂದಣಿಯಾಗಿರಬೇಕು. 4. ದ್ವಿಚಕ್ರ ವಾಹನ ಚಲಾಯಿಸಲು ಖಾಯಂ ಚಾಲನಾ ಪರವಾನಗಿಯನ್ನು ಹೊಂದಿರಬೇಕು. 5. ಗಣಕಯಂತ್ರದಲ್ಲಿ ಕಾರ್ಯನಿರ್ವಹಿಸುವ 02 ತಿಂಗಳ ತರಬೇತಿಯ ಪ್ರಮಾಣ ಪತ್ರ ಹೊಂದಿರಬೇಕು. ಆದ್ಯತೆ : ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಲ್ಲಿ ಕಾರ್ಯನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.

ಸಹಿ/– ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು
ರಾಮನಗರ ಜಿಲ್ಲೆ, ರಾಮನಗರ.

ಡಿಐಪಿಆರ್/ರಾಮನಗರ/540/ಮಣಿಪಾಲ್/2023–24

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ

E-mail: pdkolar@gmail.com, Phone & Fax No.08152-243555

ಸಂಖ್ಯೆ:ಜಿನಕೋ/ತಾಂತ್ರಿಕ/ಸಿಆರ್/174/2023–24 ದಿನಾಂಕ: 29.02.2024

ಟೆಂಡರ್ ಪ್ರಕಟಣೆ
(ಕರ್ನಾಟಕ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧ್ಯಾಧ್ಯೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಟೆಂಡರ್ ಸಲ್ಲಿಕೆಗಾಗಿ ಅಂತರ್ಜಾಲ **http//kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಟೆಂಡರ್ ತಿದ್ದುಪಡಿಗಳನ್ನು ಕರ್ನಾಟಕ – ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರವೇ ಪ್ರಚುರಪಡಿಸಲಾಗುತ್ತದೆ. **(1) ಇಂಡೆಂಟ್ ನಂಬರ್: DMA/2023-24/WS/WORK_INDENT16584,** ಟೆಂಡರ್‌ಗಿಟ್ಟ ಮೊತ್ತ: **ರೂ. 45.82 ಲಕ್ಷಗಳು. (2) ಇಂಡೆಂಟ್ ನಂಬರ್: DMA/2023-24/BD/WORK_INDENT16601,** ಟೆಂಡರ್‌ಗಿಟ್ಟ ಮೊತ್ತ: **ರೂ. 8.47 ಲಕ್ಷಗಳು. (3) ಇಂಡೆಂಟ್ ನಂಬರ್: DMA/2023-24/WS/WORK_INDENT16479,** ಟೆಂಡರ್‌ಗಿಟ್ಟ ಮೊತ್ತ: **ರೂ. 45.68 ಲಕ್ಷಗಳು.** ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಇತರೆ ಮಾಹಿತಿ ವೆಬ್‌ಸೈಟ್ ಮೂಲಕ ಪಡೆದುಕೊಳ್ಳುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:389/ಕೆಎಸ್‌ಎಂಸಿಎ/2023–24

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವ ನಾಳೆ

156 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 58ನೇ ಘಟಿಕೋತ್ಸವವು ಇದೇ 4ರಂದು ನಡೆಯಲಿದ್ದು, ಈ ವರ್ಷ 156 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ಚಿನ್ನದ ಪದಕ ಪ್ರಶಸ್ತಿ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ಮಾಹಿತಿ ನೀಡಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, '63 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ 53 ಚಿನ್ನದ ಪದಕ ಹಾಗೂ ದಾನಿಗಳ 81 ಚಿನ್ನದ ಪದಕ, 22 ವಿದ್ಯಾರ್ಥಿಗಳಿಗೆ ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು' ಎಂದು ತಿಳಿಸಿದರು.

'ಬೆಳಿಗ್ಗೆ 11.30ಕ್ಕೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ವಹಿಸಲಿದ್ದಾರೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಪದಕ ಪ್ರದಾನ ಮಾಡಲಿದ್ದು, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮಹಾನಿರ್ದೇಶಕ ಹಿಮಾಂಶು ಪಾಠಕ್ ಅವರು ಘಟಿಕೋತ್ಸವದ ಪ್ರಧಾನ ಭಾಷಣ ಮಾಡಲಿದ್ದಾರೆ' ಎಂದು ತಿಳಿಸಿದರು.

'ಪಿಎಚ್.ಡಿಯಲ್ಲಿ ಒಟ್ಟು 29 ಚಿನ್ನದ ಪದಕಗಳು ಪ್ರದಾನ ಮಾಡಲಿದ್ದು, ಅದರಲ್ಲಿ 12 ವಿದ್ಯಾರ್ಥಿನಿಯರು ಹಾಗೂ 4 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾಲಯದ 15 ಚಿನ್ನದ ಪದಕಗಳನ್ನು, 10 ದಾನಿಗಳ ಚಿನ್ನದ ಪದಕಗಳು ಹಾಗೂ 4 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಹಂಚಿಕೊಂಡಿದ್ದಾರೆ. ಸ್ನಾತಕೋತ್ತರ ಪದವಿಯಲ್ಲಿ 69 ಚಿನ್ನದ ಪದಕಗಳನ್ನು ಪ್ರದಾನ ಮಾಡಲಿದ್ದು, ಅದರಲ್ಲಿ 24 ವಿದ್ಯಾರ್ಥಿನಿಯರು ಹಾಗೂ 6 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾಲಯ ನೀಡುವ 22 ಚಿನ್ನದ ಪದಕಗಳು ಹಾಗೂ 5 ಆವರಣದ ಚಿನ್ನದ ಪದಕಗಳನ್ನು, 31 ದಾನಿಗಳ ಚಿನ್ನದ ಪದಕಗಳು ಹಾಗೂ 11 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದಾರೆ' ಎಂದು ಹೇಳಿದರು.

'ಸ್ನಾತಕ ಪದವಿಯಲ್ಲಿ 58 ಚಿನ್ನದ ಪದಕಗಳನ್ನು ಪ್ರದಾನ ಮಾಡಲಿದ್ದು, ಅದರಲ್ಲಿ 13 ವಿದ್ಯಾರ್ಥಿನಿಯರು ಹಾಗೂ 4 ವಿದ್ಯಾರ್ಥಿಗಳು ಕೃಷಿ ವಿಶ್ವವಿದ್ಯಾಲಯ ನೀಡುವ 6 ಚಿನ್ನದ ಪದಕಗಳು, 4 ಆವರಣದ ಚಿನ್ನದ ಪದಕಗಳು, 40 ದಾನಿಗಳ ಚಿನ್ನದ ಪದಕಗಳು, 1 ಕೃಷಿ ವಿಶ್ವವಿದ್ಯಾಲಯದ ಕ್ರೀಡಾ ಚಿನ್ನದ ಪದಕ ಹಾಗೂ 7 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು' ಎಂದರು.

ಶಿಕ್ಷಣ ನಿರ್ದೇಶಕ ಕೆ.ಸಿ. ನಾರಾಯಣಸ್ವಾಮಿ, ಕುಲಸಚಿವ ಬಸವೇಗೌಡ, ವಿಸ್ತರಣಾ ನಿರ್ದೇಶಕ ವಿ.ಎಲ್. ಮಧುಪ್ರಸಾದ್ ಭಾಗವಹಿಸಿದ್ದರು.

ರೈತ ರಂಗಸ್ವಾಮಿಗೆ ಗೌರವ ಡಾಕ್ಟರೇಟ್

'ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ದೊಡ್ಡಮಗೆ ಗ್ರಾಮದ ಪ್ರಗತಿಪರ ರೈತ ಎಂ.ಸಿ. ರಂಗಸ್ವಾಮಿ ಅವರು ಕೃಷಿಯಲ್ಲಿ ಅಳವಡಿಸಿಕೊಂಡಿರುವ ನೂತನ ತಂತ್ರಜ್ಞಾನ ಮತ್ತು ಸಮಗ್ರ ಕೃಷಿ ಬೇಸಾಯ ಪದ್ಧತಿಯನ್ನು ಗುರುತಿಸಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗುವುದು' ಎಂದು ಎಸ್.ವಿ. ಸುರೇಶ ಮಾಹಿತಿ ನೀಡಿದರು.

ಎಸ್. ಸ್ನೇಹಶ್ರೀಗೆ 13 ಚಿನ್ನದ ಪದಕ

ಬಿಎಸ್‌ಸಿ (ಆನರ್ಸ್) ಕೃಷಿಯಲ್ಲಿ ಎಸ್. ಸ್ನೇಹಶ್ರೀ ಅವರಿಗೆ ಒಟ್ಟು 13 ಪದಗಳನ್ನು ಗಳಿಸಿದ್ದಾರೆ. ಕೃಷಿ ವಿಶ್ವವಿದ್ಯಾಲಯದ 1 ಚಿನ್ನದ ಪದಕ, ದಾನಿಗಳ 9 ಚಿನ್ನದ ಹಾಗೂ ದಾನಿಗಳ 3 ಚಿನ್ನದ ಪದಕಗಳ ಪ್ರಮಾಣ ಪತ್ರಗಳನ್ನು ಗಳಿಸಿದ್ದಾರೆ.

ಪದವಿ ವಿವರ	
ಸ್ನಾತಕ ಪದವಿ	870
ಸ್ನಾತಕೋತ್ತರ ಪದವಿ	291
ಪಿಎಚ್.ಡಿ	83
ಒಟ್ಟು ವಿದ್ಯಾರ್ಥಿಗಳು	1,244
ಚಿನ್ನದ ಪದಕ	
ಪಿ.ಎಚ್‌ಡಿ	29
ಸ್ನಾತಕೋತ್ತರ ಪದವಿ	69
ಪದವಿ ವಿಭಾಗ	58

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ

ಉಪನಿರ್ದೇಶಕರ ಕಛೇರಿ, ರಾಮನಗರ – 562 159.
ದೂರವಾಣಿ: 080–27271343. ಇ–ಮೇಲ್: gcmramanagara@gmail.com

ಸಂಖ್ಯೆ : ರೇ.ಗೂ.ಮಾ./ರಾಂ./ಎಫ್.ಆರ್.ಬಯೋಮೆಟ್ರಿಕ್ ಡಿ/ಟೆಂಡರ್/13/2023–24
ದಿನಾಂಕ : 02–03–2024

ತಿದ್ದುಪಡಿ ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ, ಇಲ್ಲಿಗೆ 2023–24 ನೇ ಸಾಲಿಗೆ Face Recognition Biometric Device ನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದ್ದು, **ಟೆಂಡರ್ ಸಲ್ಲಿಸಲು ದಿನಾಂಕ : 11–03–2024 ಕೊನೆಯ ದಿನವಾಗಿರುತ್ತದೆ. ಇದರೊಂದಿಗೆ 2.5% ಇ.ಎಂ.ಡಿ. ಮೊತ್ತ ಸಲ್ಲಿಸುವುದು.** ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

ಸಹಿ/– ರೇಷ್ಮೆ ಉಪನಿರ್ದೇಶಕರು,
ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ.

ಡಿಐಪಿಆರ್/ರಾಮನಗರ/549/ಮಣಿಪಾಲ್/23–24

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ

ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561203,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 080–29799416
ಇ–ಮೇಲ್: apmc.dbpur@gmail.com

ಸಂಖ್ಯೆ: ಕೃಉಮಾಸ/ದೊ/569/2023–24 ದಿನಾಂಕ: 02–03–2024

ಪ್ರಕಟಣೆ

ಈ ಮೂಲಕ ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕ್ಷೇತ್ರದ ರೈತ ಬಾಂಧವರು, ಪೇಟೆಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಂಚಿಕೆಯಾದ ನಿವೇಶನ ಸಂಖ್ಯೆ: 18 ರ ಪೇಟೆಕಾರ್ಯಕರ್ತರಾದ **ಶ್ರೀ ಎನ್. ಶಿವಪ್ರಕಾಶ್ (ವಿಜಯಪುರ)** ಇವರು ಸದರಿ ನಿವೇಶನದಲ್ಲಿ ನಿರ್ಮಿಸಿರುವ ಕಟ್ಟಡವನ್ನು ನಿವೇಶನ ಸಹಿತ ಖರೀದಿದಾರರ ಪರವಾನಗಿ ಪಡೆದಿರುವ **ಶ್ರೀ ಬದ್ರೀಶ್. ಎ.ವಿ. ಬಿನ್ ಲೇ. ವಿಶ್ವನಾಥಶೆಟ್ಟಿ,** ನಂ.3072, ಕುಂಬಾರಪೇಟೆ, 25 ನೇ ವಾರ್ಡ್ ದೊಡ್ಡಬಳ್ಳಾಪುರ ಇವರಿಗೆ ಮಾರಾಟ ಮಾಡುತ್ತಿದ್ದು, ಮಾರಾಟ ಮಾಡಲು ಅನುಮತಿಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಸದರಿ ಸ್ವತ್ತನ್ನು ಮಾರಾಟ ಮಾಡುವ ಬಗ್ಗೆ ತಮ್ಮಿಂದ ಯಾವುದೇ ಆಕ್ಷೇಪಣೆ, ಸಲಹೆ, ಸೂಚನೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ನಿಮ್ಮ ಆಕ್ಷೇಪಣೆ, ಸಲಹೆ ಸೂಚನೆಗಳನ್ನು ಲಿಖಿತ ಮೂಲಕವಾಗಿ **ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ** ಇವರಿಗೆ ಸಲ್ಲಿಸತಕ್ಕದ್ದು. ಅವಧಿ ನಂತರ ಬಂದ ಯಾವುದೇ ಆಕ್ಷೇಪಣೆ, ಸಲಹೆ, ಸೂಚನೆಗಳನ್ನು ಸ್ವೀಕರಿಸುವುದಿಲ್ಲ.

ಸಹಿ/– ಕಾರ್ಯದರ್ಶಿ, ಕೃಉಮಾಸ, ದೊಡ್ಡಬಳ್ಳಾಪುರ | ಸಹಿ/– ಆಡಳಿತಾಧಿಕಾರಿಗಳು, ಕೃಉಮಾಸ, ದೊಡ್ಡಬಳ್ಳಾಪುರ

ವಾಸಾಸಂಇ/ವಾ.ಪ್ರ/4028/ಅಡ್ವರ್ಟೋ/2023–24

ಸೌಜನ್ಯಾ ಪ್ರಕರಣ: ದೆಹಲಿಯಲ್ಲಿ ಪ್ರತಿಭಟನೆ

ನವದೆಹಲಿ: ಸೌಜನ್ಯಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ನೈಜ ಆರೋಪಿಗಳನ್ನು ಬಂಧಿಸಬೇಕು ಹಾಗೂ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಆಕೆಯ ತಾಯಿ ಹಾಗೂ ದಕ್ಷಿಣ ಕನ್ನಡದ ಹೋರಾಟಗಾರರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನಿವಾಸದ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನಂತರ, ಗಾಂಧಿಯವರ ಆಪ್ತ ಸಹಾಯಕರೊಬ್ಬರು ಅತ್ಯಾಚಾರ ಸಂತ್ರಸ್ತೆಯ ತಾಯಿಯನ್ನು ಭೇಟಿಯಾಗಿ ಅಗತ್ಯ ನೆರವಿನ ಭರವಸೆ ನೀಡಿದರು.

'ಸೋನಿಯಾ ಗಾಂಧಿಯವರು ಅಸ್ವಸ್ಥರಾಗಿದ್ದರಿಂದ ಅವರ ಆಪ್ತರೊಬ್ಬರು ನಮ್ಮ ಕಷ್ಟವನ್ನು ಆಲಿಸಿದರು. ಪ್ರಕರಣದ ಮರುತನಿಖೆ ಮತ್ತು ನಮಗೆ ನ್ಯಾಯ ದೊರಕಿಸಿಕೊಡಲು ಕರ್ನಾಟಕದ ಮುಖ್ಯಮಂತ್ರಿಗಳೊಂದಿಗೆ ಮಾತನಾಡುವುದಾಗಿ ಭರವಸೆ ನೀಡಿದರು' ಎಂದು ತಾಯಿ ಕುಸುಮಾವತಿ ಗೌಡ ತಿಳಿಸಿದರು.

'ಮಗಳನ್ನು ಅತ್ಯಾಚಾರವೆಸಗಿ ಘೋರವಾಗಿ ಕೊಲೆ ಮಾಡಲಾಗಿದೆ. ಸೋನಿಯಾ ಅವರ ಭರವಸೆಯು ಮಗಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸಕಾರಾತ್ಮಕ ಹೆಜ್ಜೆಯಾಗಿದೆ. ಆದರೆ, ಇಷ್ಟಕ್ಕೆ ನಾವು ಮೈಮರೆಯುವುದಿಲ್ಲ. ನ್ಯಾಯ ಸಿಗುವವರೆಗೆ ನಿರಂತರ ಹೋರಾಟ ಮಾಡಲಿದ್ದೇವೆ' ಎಂದು ಅವರು ಹೇಳಿದರು. ಹೋರಾಟಗಾರರಾದ ಮಹೇಶ ಶೆಟ್ಟಿ ತಿಮರೋಡಿ, ಭಾವನಾ ಮತ್ತಿತರರು ಹಾಜರಿದ್ದರು.

ನಗರದಲ್ಲಿ ಇಂದು

ಭಕ್ತಿ ಭಾವಾನಂದ ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಬೆಳಿಗ್ಗೆ 9

ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಚಾಲನೆ: ತುಷಾರ್ ಗಿರಿನಾಥ್, ಆಯೋಜನೆ: ಬಿಬಿಎಂಪಿ, ಸ್ಥಳ: ಪ್ರಾಥಮಿಕ ಆರೋಗ್ಯ ಕೇಂದ್ರ, ಅಮೃತಹಳ್ಳಿ, ಬ್ಯಾಟರಾಯನಪುರ, ಬೆಳಿಗ್ಗೆ 9

ಮಹಾಗಣಪತಿ, ವೆಂಕಟೇಶ್ವರ ಮತ್ತು ಅಭಯ ಆಂಜನೇಯ ಸ್ವಾಮಿ ದೇವಸ್ಥಾನದ ಲೋಕಾರ್ಪಣೆ, ದೇವರುಗಳ ಪ್ರಾಣಪ್ರತಿಷ್ಠೆ ಸಮಾರಂಭ: ಅತಿಥಿಗಳು: ಕೃಷ್ಣ ಬೈರೇಗೌಡ, ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ, ಕೆ.ಎ. ಮುನೀಂದ್ರಕುಮಾರ್, ವಿ.ವಿಶ್ವನಾಥ, ಎಚ್.ಎನ್. ಆರತಿಕೃಷ್ಣ, ಜಯಗೋಪಾಲಗೌಡ, ಎನ್. ವೇಣುಗೋಪಾಲ, ಆಯೋಜನೆ: ಬಾಲಾಜಿ ಮಹಾಗಣಪತಿ ದೇವಸ್ಥಾನ ಸೇವಾ ಸಮಿತಿ, ಸ್ಥಳ: ಬಾಲಾಜಿ ಕೃಪಾ ಬಡಾವಣೆ, ಆರ್.ಕೆ. ಹೆಗಡೆ ನಗರ, ಶಿವರಾಮ ಕಾರಂತ ನಗರ, ಬೆಳಿಗ್ಗೆ 9.15ರಿಂದ

'ಪ್ರಭಾ ಅತ್ರೆ' ಅವರಿಗೆ ನಮನ: ಗಾಯನ: ಸಾವನಿ ಶಿಂಧೆ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ಕೇಶವ್ ಜೋಶಿ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ ಬಸವನಗುಡಿ, ಬೆಳಿಗ್ಗೆ 9.45

ವಿಶ್ವ ಶ್ರವಣ ದಿನಾಚರಣೆ: ಅತಿಥಿ: ಬಿ.ದಯಾನಂದ, ಆಯೋಜನೆ: ನಾಯಕ್ಸ್ ಸ್ಪೀಚ್ ಆ್ಯಂಡ್ ಹಿಯರಿಂಗ್ ಕ್ಲಿನಿಕ್ ಎನ್ರಿಚ್ ರಿಹ್ಯಾಬಿಲಿಟೇಶನ್ ಟ್ರಸ್ಟ್, ಸ್ಥಳ: ನಾಯಕ್ಸ್ ಸ್ಪೀಚ್ ಆ್ಯಂಡ್ ಹಿಯರಿಂಗ್ ಕ್ಲಿನಿಕ್, ಜೆ.ಪಿ. ನಗರ, ಬೆಳಿಗ್ಗೆ 10

ವಿಶ್ವ ಮಹಿಳಾ ದಿನಾಚರಣೆ: ಅತಿಥಿಗಳು: ಅಂಬುಜಾ ಪ್ರಕಾಶ್, ಆರ್. ಅಂಬುಜಾಕ್ಷಿ, ವಾಣಿಶ್ರೀ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ರಾವ್ ಬಹದ್ದೂರ್ ಸಿ.ಹಯವಧನ ರಾವ್, ರಾವ್ ಬಹದ್ದೂರ ಆರ್. ನರಸಿಂಹಚಾರ್ ಸ್ಮಾರಕ ದತ್ತಿ ಉಪನ್ಯಾಸ: ಸಹನಾ ಸಿಂಗ್, ಸ್ಪಂದನ್ ಮಿಶ್ರಾ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11ರಿಂದ

ಮಾಸದ ಮಂಥನ: ಭಾಗವಹಿಸುವವರು: ಕೃಷ್ಣಕುಮಾರ, ಚೂಡಾರತ್ನ, ಸ್ಥಳ: ನಂ. 17, ಸಾನ್ನಿಧ್ಯ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಲಿಂಗಮ್ಮ, ಚಿಕ್ಕಕೊಮಾರಿಗೌಡ ಹಾರೋಕೊಪ್ಪ ದತ್ತಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಪಿ.ಎಸ್. ದಿನೇಶ್ ಕುಮಾರ್, ಅತಿಥಿ: ಸಿ. ನಾರಾಯಣ ಸ್ವಾಮಿ, ಉಪಸ್ಥಿತಿ: ಚಿಕ್ಕಕೊಮಾರಿಗೌಡ, ಪ್ರಶಸ್ತಿ ಪುರಸ್ಕೃತರು: ಡಿ.ಆರ್.ಪಾಟೀಲ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 12

ಸಂಗೀತ ಮಹೋತ್ಸವ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಗುರುದತ್ತ ಪ್ರಭು, ಪ್ರಶಸ್ತಿ ಪ್ರದಾನ: ಭಾರತಿ ಪ್ರತಾಪ, 'ಲಯ ಸಂಸ್ಕಾರ, ಸ್ವರ ಸಂಸ್ಕಾರ' ಪ್ರಶಸ್ತಿ ಪುರಸ್ಕೃತರು: ಅಂಬರೀಷ ಶೀಲವಂತ, ಸರಸ್ವತಿ ಭೂರಗಾಂವಕರ ಶೀಲವಂತ, ಅತಿಥಿಗಳು: ರಂಗನಾಥ ಜಿ. ಅಂಬಗೇರ, ಸುಧಾ ಗಡಿಯಾರ, ಶರವಣ ರಾಮಕೃಷ್ಣ, ಆಯೋಜನೆ: ಸಂಗೀತ ಸ್ವರ ಸಂಸ್ಕಾರ ಸೇವಾ ಟ್ರಸ್ಟ್, ಸ್ಥಳ: ಕೆಪಿಟಿಸಿಎಲ್, ಅಕೌಂಟ್ಸ್ ಆಫೀಸರ್ಸ್ ಅಸೋಸಿಯೇಷನ್, ಆನಂದರಾವ್ ವೃತ್ತ, ಮಧ್ಯಾಹ್ನ 2.30

ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ–2024: ಅಧ್ಯಕ್ಷತೆ: ಕೃಷ್ಣ ಎಸ್. ದಿಕ್ಷೀತ್, ಎಂ. ನಾಗಪ್ರಸನ್ನ, ವಿಜಯಕುಮಾರ್ ಎ. ಪಾಟೀಲ್, ಆಯೋಜನೆ: ಆರ್‌ವಿ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಸ್ಥಳ: ಮಂಗಳಾ ಮಂಟಪ, ಆರ್‌ವಿ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಮಧ್ಯಾಹ್ನ 3



ಬಿ.ಎಸ್. ಪಾಟೀಲ

ಕೆಂಗಲ್ ಹನುಮಂತಯ್ಯ ದತ್ತಿ, 2022ನೇ ಸಾಲಿನ ವಿವಿಧ ಪುಸ್ತಕ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎನ್.ಎಸ್. ರಾಮೇಗೌಡ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಬಿ.ಎಸ್. ಪಾಟೀಲ, ಪ್ರಶಸ್ತಿ ಪುರಸ್ಕೃತರು: ವಿ.ಜಿ. ಜೋಸೆಫ್, ಅತಿಥಿಗಳು: ಯೋಗಣ್ಣ ಎಸ್.ಪಿ., ನಾಗೇಂದ್ರ ಪ್ರಸಾದ್, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 6

ನೈಜ ಅಥವಾ ನಕಲಿ? ವ್ಯತ್ಯಾಸವನ್ನು ಗುರುತಿಸಿ

ನಮ್ಮ ಸ್ಥಳೀಯ ಫ್ಯಾಕ್ಟ್ ಚೆಕಿಂಗ್ ಪಾಲುದಾರರೊಂದಿಗೆ

ಡೀಪ್‌ಫೇಕ್‌ಗಳನ್ನು ಒಳಗೊಂಡಂತೆ ತಪ್ಪುಮಾಹಿತಿ ಪ್ರಸಾರವಾಗುವುದನ್ನು ನಿಲ್ಲಿಸುವುದಕ್ಕೆ ಸಹಾಯ ಮಾಡಲು, ಸಂದೇಶಗಳನ್ನು ಪರಿಶೀಲಿಸುವುದಕ್ಕೆ ಸಹಾಯ ಮಾಡಲು 13 ಭಾಷೆಗಳಲ್ಲಿ ಭಾರತದಾದ್ಯಂತ 10 ಸ್ವತಂತ್ರ ಫ್ಯಾಕ್ಟ್-ಚೆಕಿಂಗ್ ಸಂಸ್ಥೆಗಳೊಂದಿಗೆ WhatsApp ಪಾಲುದಾರಿಕೆ ಹೊಂದಿದೆ. WhatsApp ಚಾನಲ್‌ಗಳು ಮತ್ತು ಟಿಪ್‌ಲೈನ್‌ಗಳ ಮೂಲಕ ಸುಲಭವಾಗಿ ಅವರೊಂದಿಗೆ ಸಂಪರ್ಕ ಸಾಧಿಸಿ.

WhatsApp.com/INfactcheck ನಲ್ಲಿ ಇನ್ನಷ್ಟು ತಿಳಿಯಿರಿ

ತನಿಖೆಗೆ ಏಳೆಂಟು ತಂಡಗಳ ರಚನೆ, ಆರೋಪಿಯ ಸುಳಿವು ಸಿಕ್ಕಿದೆ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ

‘ಕೆಫೆ ಸ್ಫೋಟ: ಮಂಗಳೂರು ಸ್ಫೋಟದ ಲಿಂಕ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮೇಶ್ವರಂ ಕೆಫೆ ಹೋಟೆಲ್‌ನಲ್ಲಿ ಶುಕ್ರವಾರ (ಮಾರ್ಚ್ 1) ನಡೆದ ಸ್ಫೋಟಕ್ಕೂ ಮಂಗಳೂರಿನ ನಾಗುರಿ ಎಂಬಲ್ಲಿ ನ. 19ರಂದು ರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಿದ ಘಟನೆಗೂ ಲಿಂಕ್ ಇರುವಂತೆ ಕಾಣಿಸುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಎರಡೂ ಕಡೆ ಬಳಸಿದ ಸ್ಫೋಟಕ ಸಾಮಗ್ರಿಗಳಲ್ಲಿ ಸಾಮ್ಯತೆ ಇದೆ. ಹೀಗಾಗಿ, ಮಂಗಳೂರು ಮತ್ತು ಶಿವಮೊಗ್ಗ ಪೊಲೀಸರು ಕೂಡ ಬಂದು ಪರಿಶೀಲನೆ ನಡೆಸುತ್ತಿದ್ದಾರೆ’ ಎಂದರು.

‘ರಾಮೇಶ್ವರಂ ಕೆಫೆಯಲ್ಲಿ ನಡೆದ ಘಟನೆಯ ತನಿಖೆಗೆ ಏಳೆಂಟು ತಂಡಗಳನ್ನು ರಚಿಸಲಾಗಿದೆ. ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ. ದುಷ್ಕರ್ಮಿ ಹೇಗೆ ಬಂದ, ಯಾವ ರೀತಿ ಸ್ಫೋಟಕ ಇಟ್ಟು ಹೋದ ಎಂಬ ವಿಡಿಯೊ ತುಣುಕು ಸಿಕ್ಕಿದೆ. ಅವನ ಚಹರೆಯ ಸುಳಿವು ಸಿಕ್ಕಿದೆ. ಈ ಹಂತದಲ್ಲಿ ಈ ತನಿಖೆಯ ಮಾಹಿತಿ ಬಹಿರಂಗಪಡಿಸುವುದಿಲ್ಲ. ತನಿಖೆ ಮಾಡಲು ಪೊಲೀಸ್ ಅಧಿಕಾರಿಗಳಿಗೆ ಸ್ವಾತಂತ್ರ್ಯ ನೀಡಿದ್ದೇವೆ. ಘಟನೆಗೆ ಕಾರಣರಾಗಿರುವವರು ಯಾರೇ ಆಗಿದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಬಿಜೆಪಿ ನಾಯಕರು ಏನೇ ಟೀಕೆ ಮಾಡಿದರೂ ತಲೆಕೆಡಿಸಿಕೊಳ್ಳುವುದಿಲ್ಲ. ಬೆಂಗಳೂರಿನ ಹೆಸರು ಹಾಳು ಮಾಡಲು ಬಿಜೆಪಿಯವರು ಪ್ರಯತ್ನಿಸುತ್ತಿರುವುದು ನಮ್ಮ ಗಮನದಲ್ಲಿದೆ. ನಾವು ಮಾತ್ರ ಎಲ್ಲ ಆಯಾಮಗಳಲ್ಲಿ ಪ್ರಕರಣದ ತನಿಖೆ ನಡೆಸುತ್ತೇವೆ’ ಎಂದು ತಿಳಿಸಿದರು.

‘ಘಟನೆಯಲ್ಲಿ ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಬಿಬಿಎಂಪಿ ವತಿಯಿಂದ ಭರಿಸಲಾಗುವುದು. ಪರಿಹಾರ ನೀಡುವ ಸಂದರ್ಭ ಬಂದರೆ ಅದನ್ನೂ ನೀಡುತ್ತೇವೆ’ ಎಂದೂ ತಿಳಿಸಿದರು.

ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ನಡೆದ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಭೇಟಿ ನೀಡಿದರು

ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತವು ಮೂಲಭೂತವಾದಿಗಳು, ಉಗ್ರಗಾಮಿಗಳಿಗೆ ಸ್ವರ್ಗವಾಗಿದೆ. ಮತ ಬ್ಯಾಂಕ್‌ಗಾಗಿ ಕಾಂಗ್ರೆಸ್‌ನವರು ರಾಜ್ಯವನ್ನು ಉಗ್ರರ ತಾಣ ಮಾಡದಿರಲಿ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಭಯೋತ್ಪಾದಕರಿಗೆ ರಾಜ್ಯ ಪ್ರಯೋಗ ಶಾಲೆಯಾಗಿದೆ ಎಂಬುದಕ್ಕೆ ಬೆಂಗಳೂರು ಬಾಂಬ್ ಸ್ಫೋಟ ಪ್ರಕರಣವೇ ಸಾಕ್ಷಿ. ಇದೆಲ್ಲವೂ ನಿಭಾಯಿಸಲು ಆಗದಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲಿ

ಬಸನಗೌಡ ಪಾಟೀಲ ಯತ್ನಾಳ, ಶಾಸಕ

‘ತನಿಖೆಗೆ ತಂತ್ರಜ್ಞಾನ ಬಳಸಿ’

‘ತಂತ್ರಜ್ಞಾನದ ಸಾಧ್ಯತೆಗಳನ್ನು ತನಿಖೆಯಲ್ಲಿ ಪರಿಣಾಮಕಾರಿಯಾಗಿ ಬಳಸಿ ರಾಮೇಶ್ವರ ಕೆಫೆ ಹೋಟೆಲ್‌ನಲ್ಲಿ ನಡೆದ ಘಟನೆಯ ಸತ್ಯ ಹೊರಗೆಳೆಯಬೇಕು’ ಎಂದು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಗೃಹ ಇಲಾಖೆಯ ಅಧಿಕಾರಿಗಳ ಜೊತೆ ಶನಿವಾರ ಸಭೆ ನಡೆಸಿದ ಅವರು, ‘ಗುಪ್ತಚರ ವ್ಯವಸ್ಥೆ ಜಾಗೃತವಾಗಿರಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವ ಸಮಾಜ ದ್ರೋಹಿಗಳ ಮೇಲೆ ಯಾವುದೇ ಸಹಾನುಭೂತಿ ಇಲ್ಲದೆ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಚರ್ಚಿಸಲು ಪ್ರತ್ಯೇಕ ಸಭೆ ಕರೆಯಲಾಗುವುದು’ ಎಂದರು.

ರಾಮೇಶ್ವರ ಕೆಫೆಯಲ್ಲಿ ನಡೆದ ಸ್ಫೋಟ ಪ್ರಕರಣದ ತನಿಖೆಯನ್ನು ಚುರುಕುಗೊಳಿಸುವಂತೆ ಸೂಚಿಸಿದ ಮುಖ್ಯಮಂತ್ರಿ, ‘ಜನ ದಟ್ಟಣೆ ಸ್ಥಳಗಳನ್ನು ಗುರುತಿಸಿ ಪೊಲೀಸ್ ಗಸ್ತು ಹೆಚ್ಚಿಸಬೇಕು. ಇಂಥ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಜನರ ದಾರಿ ತಪ್ಪಿಸುವ ಕೆಲಸವನ್ನು ಮಟ್ಟ ಹಾಕಬೇಕು’ ಸೂಚಿಸಿದರು.

ಗೃಹ ಸಚಿವ ಜಿ. ಪರಮೇಶ್ವರ, ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕಾರ್ಯದರ್ಶಿ ತ್ರಿಲೋಕ್ ಚಂದ್ರ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಸಭೆಯಲ್ಲಿದ್ದರು.

ಸ್ಫೋಟ: ಗಾಯಾಳುಗಳಿಗೆ ಚಿಕಿತ್ಸೆ ಮುಂದುವರಿಕೆ

ಬೆಂಗಳೂರು: ಇಲ್ಲಿನ ರಾಮೇಶ್ವರಂ ಕೆಫೆಯಲ್ಲಿ ನಡೆದಿದ್ದ ಸ್ಫೋಟದಲ್ಲಿ ಗಾಯಗೊಂಡಿದ್ದವರಿಗೆ ವೈದೇಹಿ ಆಸ್ಪತ್ರೆ ಹಾಗೂ ಬ್ರೂಕ್ ಫೀಲ್ಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದ್ದು, ಕೆಲವರು ಚೇತರಿಸಿಕೊಂಡಿದ್ದಾರೆ.

ಗಾಯಗೊಂಡವರಲ್ಲಿ ಶುಕ್ರವಾರ ಒಂಬತ್ತು ಮಂದಿ ಆಸ್ಪತ್ರೆಗೆ ದಾಖಲಾಗಿದ್ದರು. ಬ್ರೂಕ್ ಫೀಲ್ಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರಲ್ಲಿ ದೀಪಾಂಶು ಅವರು ಶನಿವಾರ ಚೇತರಿಸಿಗೊಂಡು, ಮನೆಗೆ ತೆರಳಿದರು. ಅವರ ಕಿವಿಗೆ ಹಾನಿಯಾಗಿತ್ತು. ಸ್ವರ್ಣಾಂಬಾ ಹಾಗೂ ಫಾರೂಕ್ ಅವರಿಗೆ ಅಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ. ವೈದೇಹಿ ಆಸ್ಪತ್ರೆಗೆ ದಾಖಲಾಗಿದ್ದವರಲ್ಲಿ ಶ್ರೀನಿವಾಸ್ ಹಾಗೂ ಮೋನಿ ಎನ್ನುವವರು ಶುಕ್ರವಾರವೇ ಚೇತರಿಸಿಕೊಂಡಿದ್ದರು. ಸದ್ಯ ಅಲ್ಲಿ ನಾಲ್ವರು ಚಿಕಿತ್ಸೆ ಪಡೆಯುತ್ತಿದ್ದು, ನಾಗಶ್ರೀ ಎಂಬುವವರಿಗೆ ದೃಷ್ಟಿ ಮರಳುವ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

‘ಸ್ವರ್ಣಾಂಬಾ ಅವರಿಗೆ ಶುಕ್ರವಾರವೇ ಪ್ಲಾಸ್ಟಿಕ್ ಸರ್ಜರಿ ಮಾಡಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಒದಗಿಸಲಾಗುತ್ತಿದೆ. ಅವರ ಕಿವಿ ಕೆಳಗಿನ ಭಾಗಕ್ಕೆ ಗಾಜಿನ ತುಂಡುಗಳು ಹಾನಿ ಮಾಡಿದ್ದವು. ಅವರಿಗೆ ಮಧುಮೇಹ ಇರುವುದರಿಂದ ಗಾಯಗಳು ಒಣಗಲು ಸಮಯ ಬೇಕಾಗುತ್ತದೆ. ಉಳಿದವರು ಚೇತರಿಸಿಕೊಂಡಿದ್ದಾರೆ’ ಎಂದು ಬ್ರೂಕ್ ಫೀಲ್ಡ್ ಆಸ್ಪತ್ರೆಯ ಡಾ. ಪ್ರದೀಪ್ ತಿಳಿಸಿದರು.

‘ನಾಗಶ್ರೀ ಅವರನ್ನು ಆಸ್ಪತ್ರೆಗೆ ಕರೆತಂದ ಎರಡು ಗಂಟೆಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಬಲ ಕಣ್ಣಿನ ಗುಡ್ಡೆಗೆ ಗಂಭೀರ ಹಾನಿಯಾಗಿದ್ದು, ಸ್ಫೋಟದ ದೂಳು ಕೂಡ ಕಣ್ಣಿನ ಒಳಗಡೆ ಸೇರಿದೆ. ಹರಿದ ಕಣ್ಣಿನ ಗುಡ್ಡೆಗೆ ಹೊಲಿಗೆ ಹಾಕಲಾಗಿದೆ. ದೃಷ್ಟಿ ಮರಳಿಸಲು ಎಲ್ಲ ರೀತಿಯ ಪ್ರಯತ್ನ ಮಾಡಲಾಗುತ್ತಿದೆ. ಕನಿಷ್ಠ ಒಂದು ವಾರ ಅವರಿಗೆ ಚಿಕಿತ್ಸೆ ನೀಡಬೇಕಾಗುತ್ತದೆ. ಇನ್ನುಳಿದ ಮೂವರಿಗೆ ಕಿವಿ ಭಾಗದಲ್ಲಿ ಹಾನಿಯಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ವೈದೇಹಿ ಆಸ್ಪತ್ರೆಯ ಡಾ. ಸೀಮಾ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಸಜ್ಜನಿಕೆ ಸೋಗಿನ ಬಿಜೆಪಿಯವರಿಂದ ಹಾನಿ: ಅನಂತಕುಮಾರ ಆರೋಪ

ಶಿರಸಿ: ‘ದೇಶ, ಧರ್ಮ ವಿರೋಧಿ ಚಟುವಟಿಕೆಗಳನ್ನು ಟೀಕಿಸದೇ, ಸಜ್ಜನಿಕೆಯ ಸೋಗು ಹಾಕಿಕೊಂಡ ಕೆಲ ಬಿಜೆಪಿಯವರಿಂದ ದೇಶಕ್ಕೆ ಹೆಚ್ಚು ಹಾನಿ ಆಗುತ್ತಿದೆ’ ಎಂದು ಸಂಸದ ಅನಂತಕುಮಾರ ಹೆಗಡೆ ಆರೋಪಿಸಿದರು.

ತಾಲ್ಲೂಕಿನ ಹುಲೇಕಲ್ ವ್ಯಾಸರಾಯ ಮಠದ ಸಭಾಂಗಣದಲ್ಲಿ ಶನಿವಾರ ಬಿಜೆಪಿ ಶಕ್ತಿ ಕೇಂದ್ರದ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಏಕವಚನ ಪದ ಬಳಸಿದ್ದಕ್ಕೆ ನಮ್ಮ ಪಕ್ಷದ ಕೆಲವರು ಬೇಸರ ವ್ಯಕ್ತಪಡಿಸಿದರು. ದೇಶದ್ರೋಹದಂಥ ಚಟುವಟಿಕೆಯನ್ನು ಟೀಕಿಸಿದ್ದಕ್ಕೂ ವಿರೋಧಿಸಿದರು’ ಎಂದರು.

‘ಹಿಂದೂಗಳ ಪರ ಮಾತನಾಡಿದ್ದಕ್ಕೆ ಆಕ್ಷೇಪಿಸಿದ ಕೆಲವರು ಹಾಗೆ ಮಾತನಾಡುವುದು ಸರಿಯಲ್ಲ ಎಂದರು. ಪಕ್ಷ, ಸಿದ್ಧಾಂತದ ವಿರೋಧಿಗಳಾದರೆ ಮಟ್ಟ ಹಾಕಬಹುದು. ಆದರೆ, ನಮ್ಮ ಪಕ್ಷದಲ್ಲಿ ಕೆಲವರು ಸಜ್ಜನಿಕೆಯ ಸೋಗು ಹಾಕಿಕೊಂಡಿದ್ದು, ಅವರಿಂದ ಪಕ್ಷ ಮತ್ತು ಸಮಾಜಕ್ಕೆ ನಷ್ಟ’ ಎಂದರು.

ಗ್ರಾಮ ಪಂಚಾಯಿತಿಗಳಿಗೆ ಬರುವ ಶೇಕಡಾ 80 ರಷ್ಟು ಅನುದಾನ ಕೇಂದ್ರ ಸರ್ಕಾರದ ಅನುದಾನವಾಗಿದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ನಿರಂತರ ಮಾಡುತ್ತಿದೆ. ಮುಂದಾಲೋಚನೆಯಿಲ್ಲದ ಸಿದ್ದರಾಮಯ್ಯ ನೀಡಿದ ಗ್ಯಾರಂಟಿಯಿಂದ ರಾಜ್ಯದ ಬೊಕ್ಕಸ ಬರಿದಾಗುತ್ತಿದೆ. ಸರ್ಕಾರಿ ನೌಕರರಿಗೆ ಸಂಬಳ ನೀಡಲು ಸರ್ಕಾರದಲ್ಲಿ ಹಣವಿಲ್ಲ. ಸ್ಟ್ಯಾಂಪ್ ಡ್ಯೂಟಿ ಹೆಚ್ಚಿದೆ. ಸಂಪಾದನೆ ಮೀರಿದ ದಾನ ಸರಿಯಲ್ಲ ಎಂದ ಅವರು, ಮುಂಬರುವ ಲೋಕಸಭಾ ಚುನಾವಣೆ ಹಿಂದೂಗಳು ಹಾಗೂ ಅಹಿಂದೂಗಳ ನಡುವೆ ನಡೆಯಲಿದೆ’ ಎಂದರು.



ತಹಶೀಲ್ದಾರ್ ಹತ್ಯೆಗೆ ಯತ್ನ: ಬಂಧನ

ಹಾರೋಹಳ್ಳಿ: ಕೆರೆಯಿಂದ ಅಕ್ರಮವಾಗಿ ಮಣ್ಣು ಸಾಗಿಸುತ್ತಿರುವ ಮಾಹಿತಿ ಮೇರೆಗೆ, ಸ್ಥಳ ಪರಿಶೀಲನೆಗೆ ಹೋದ ಹಾರೋಹಳ್ಳಿ ತಹಶೀಲ್ದಾರ್ ವಿಜಯಣ್ಣ ಅವರ ಮೇಲೆ ಚಾಲಕ ಲಾರಿ ಹತ್ತಿಸಿ ಹತ್ಯೆ ಮಾಡಲು ಯತ್ನಿಸಿದ ಘಟನೆ ನಡೆದಿದೆ.

ತಹಶೀಲ್ದಾರ್ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿರುವ ಹಾರೋಹಳ್ಳಿ ಠಾಣೆ ಪೊಲೀಸರು ಅಂಚಿಬಾರೆ ಗ್ರಾಮದ ಚಾಲಕ ಮಹೇಶ್ ಕುಮಾರ್ ಎಂಬಾತನನ್ನು ಬಂಧಿಸಿದ್ದಾರೆ.

‘ತಾಲ್ಲೂಕಿನ ಭೀಮಸಂದ್ರದ ಸರ್ಕಾರಿ ಗೋಮಾಳದಲ್ಲಿ ಮಣ್ಣನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆ ಮಾಹಿತಿ ದೊರೆತಿತ್ತು. ಪರಿಶೀಲನೆಗಾಗಿ ಫೆ. 29ರಂದು ಬೆಳಿಗ್ಗೆ 10.50ರ ಸುಮಾರಿಗೆ ಸ್ಥಳಕ್ಕೆ ತಹಶೀಲ್ದಾರ್ ಹೋಗಿದ್ದರು. ಮಣ್ಣು ಸಾಗಿಸುತ್ತಿದ್ದ ಲಾರಿ ನಿಲ್ಲಿಸಲು ಚಾಲಕನಿಗೆ ಸೂಚನೆ ನೀಡಿದ್ದಾರೆ. ಆದರೆ, ಚಾಲಕ ವೇಗವಾಗಿ ಬಂದು ಲಾರಿಯನ್ನು ತಹಶೀಲ್ದಾರ್ ಮೇಲೆ ಹತ್ತಿಸಲು ಯತ್ನಿಸಿದ್ದಾನೆ. ತಕ್ಷಣ ಪಕ್ಕಕ್ಕೆ ಸರಿದು ಪಾರಾದ ತಹಶೀಲ್ದಾರ್, ತಮ್ಮ ಸರ್ಕಾರಿ ವಾಹನದಲ್ಲಿ ಲಾರಿ ಹಿಂಬಾಲಿಸಿ ನಿಲ್ಲಿಸಿ, ಚಾಲಕನ್ನು ಹಿಡಿದಿದ್ದಾರೆ’ ಎಂದು ಹಾರೋಹಳ್ಳಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸ್ಥಳಕ್ಕೆ ಕಂದಾಯ ನಿರೀಕ್ಷಕ ಅಶೋಕ ಲಂಬಾಣಿ ಅವರನ್ನು ಕರೆಯಿಸಿಕೊಂಡು ಲಾರಿಯನ್ನು ವಶಕ್ಕೆ ಪಡೆದಿರುವ ತಹಶೀಲ್ದಾರ್, ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಕೊಲೆ ಯತ್ನ ಹಾಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಆರೋಪದ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಕಳಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ’ ಎಂದು ಅವರು ಮಾಹಿತಿ ನೀಡಿದರು.

ಬಿಜೆಪಿ ನಾಯಕರು ತುಷ್ಟೀಕರಣ ಮಾಡಿದ್ದರೇ?: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಿಜೆಪಿ ಸರ್ಕಾರವಿದ್ದಾಗ ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟವಾಗಿತ್ತು. ಆಗ, ಆ ಪಕ್ಷದ ನಾಯಕರು ಅಲ್ಪಸಂಖ್ಯಾತರ ತುಷ್ಟೀಕರಣ ಮಾಡಿದ್ದರೇ?’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಕೇಳಿದರು.

‘ಅಲ್ಪಸಂಖ್ಯಾತರ ತುಷ್ಟೀಕರಣದಿಂದಾಗಿ ಬಾಂಬ್ ಸ್ಫೋಟದಂತಹ ಕೃತ್ಯ ನಡೆದಿದೆ’ ಎಂಬ ಬಿಜೆಪಿಯವರ ಆರೋಪಕ್ಕೆ ಇಲ್ಲಿ ಶನಿವಾರ ತಿರುಗೇಟು ನೀಡಿದ ಅವರು, ‘ಬಿಜೆಪಿ ಅಧಿಕಾರದಲ್ಲಿದ್ದ ಕಾಲದಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣಗಳಿಗೆ ಏನು ಕಾರಣ, ಅದು ಅಲ್ಪಸಂಖ್ಯಾತರ ತುಷ್ಟೀಕರಣವೇ, ಬಿಜೆಪಿಯವರು ರಾಜಕೀಯಕ್ಕಾಗಿ ಇಂತಹ ಹೇಳಿಕೆ ನೀಡುತ್ತಿದ್ದಾರೆ. ಅಲ್ಪಸಂಖ್ಯಾತರ ಪರ ಇರುವುದಕ್ಕೂ– ಈ ಪ್ರಕರಣಕ್ಕೂ ಏನು ಸಂಬಂಧ’ ಎಂದು ಪ್ರಶ್ನಿಸಿದರು.

‘ರಾಮೇಶ್ವರಂ ಕೆಫೆಯಲ್ಲಿ ಸ್ಫೋಟಕ ಇಟ್ಟು ಹೋಗಿದ್ದ ಆರೋಪಿಯ ಪತ್ತೆ ಕಾರ್ಯ ಚುರುಕಾಗಿ ನಡೆಯುತ್ತಿದೆ. ಮಾಸ್ಕ್ ಹಾಗೂ ಟೋಪಿ ಹಾಕಿಕೊಂಡು ಬಂದ ವ್ಯಕ್ತಿ ಸ್ಫೋಟಕ್ಕೆ ಕಾರಣವಾಗಿದ್ದಾನೆ’ ಎಂದು ತಿಳಿಸಿದರು.

‘ಆತ ಹೋಟೆಲ್‌ನಲ್ಲಿ ತಿಂಡಿಯ ಟೋಕನ್ ತೆಗೆದುಕೊಂಡು, ಅಲ್ಲೇ ಕುಳಿತು ಟೈಮರ್ ಫಿಕ್ಸ್ ಮಾಡಿ ಬ್ಲಾಸ್ಟ್ ಮಾಡಿ ನಂತರ ಹೋಗಿದ್ದಾನೆ. ಅವನು ಬಸ್‌ನಿಂದ ಇಳಿಯುವುದು, ಬರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆ ವ್ಯಕ್ತಿಯ ಗುರುತು ಪತ್ತೆ ಹಚ್ಚುವ ಕಾರ್ಯ ನಡೆಯುತ್ತಿದೆ’ ಎಂದು ಅವರು ಹೇಳಿದರು.

‘ಇದು ಒಬ್ಬ ವ್ಯಕ್ತಿಯ ಕೃತ್ಯವಾ ಅಥವಾ ಸಂಘಟನೆಯದ್ದಾ ಎಂಬುದು ಗೊತ್ತಾಗಿಲ್ಲ. ಇದು ಭಯೋತ್ಪಾದಕರ ಕೃತ್ಯವಾ ಎನ್ನುವುದೂ ಸ್ಪಷ್ಟವಾಗಿಲ್ಲ. ಎಲ್ಲವೂ ಇನ್ನೂ ತನಿಖೆಯ ಹಂತದಲ್ಲಿದೆ. ಒಟ್ಟು 9 ಮಂದಿ ಗಾಯಗೊಂಡಿದ್ದಾರೆ. ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ’ ಎಂದರು.

‘ಮಂಗಳೂರಿನ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಕ್ಕೂ– ಈ ಸ್ಫೋಟಕ್ಕೂ ಸಾಮ್ಯತೆ ಇಲ್ಲ. ಇಲ್ಲಿ ಯಾವ ಕುಕ್ಕರ್ ಕೂಡ ಸ್ಫೋಟವಾಗಿಲ್ಲ.’ ಎಂದು ತಿಳಿಸಿದರು.

‘ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ’

‘ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆಯೋ ಇಲ್ಲವೋ ಎನ್ನುವುದು ಇನ್ನೂ ದೃಢಪಟ್ಟಿಲ್ಲ. ಎಫ್‌ಎಸ್‌ಎಲ್ ವರದಿ ಬಂದಿಲ್ಲ. ವರದಿ ಬಂದ ಮೇಲೆ, ತಪ್ಪು ನಡೆದಿದ್ದು ಸಾಬೀತಾದರೆ ಕ್ರಮ ಕೈಗೊಳ್ಳಲಾಗುವುದು. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದು ಪ್ರತಿಕ್ರಿಯಿಸಿದರು.

‘ವರದಿಯೇ ಬಂದಿಲ್ಲವಾದ್ದರಿಂದ ಬಿಜೆಪಿಯ ಆರೋಪಗಳಿಗೆ ಏನೆಂದು ಉತ್ತರ ಕೊಡಲಿ?’ ಎಂದು ಕೇಳಿದರು.

ರಾಮೇಶ್ವರಂ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣದ ಹಿಂದೆ ದೊಡ್ಡ ಷಡ್ಯಂತ್ರ ಅಡಗಿದೆ. ರಾಜ್ಯ ಸರ್ಕಾರ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು

ಬಸವರಾಜ ಬೊಮ್ಮಾಯಿ, ಶಾಸಕ

ಅದು ಭಯೋತ್ಪಾದಕರ ಕೃತ್ಯವಲ್ಲದೇ ಮತ್ತೇನು? ಆ ಹೋಟೆಲ್‌ನಲ್ಲಿ ಯಾರೋ ಮಕ್ಕಳು ಪಟಾಕಿ ಸಿಡಿಸಿದ್ದಾರೆಯೇ ಅಥವಾ ಬಲೂನ್‌ನಲ್ಲಿ ಆಡಿದ್ದಾರೆಯೇ? ಅಲ್ಲಿ ಆಗಿರುವುದು ಬಾಂಬ್ ಸ್ಫೋಟ

ಕೆ.ಎಸ್. ಈಶ್ವರಪ್ಪ, ಬಿಜೆಪಿ ಮುಖಂಡ

‘ಈ ಘಟನೆಯನ್ನು ಖಂಡಿಸುತ್ತೇನೆ. ಇದರಲ್ಲಿ ಪ್ರತಿಪಕ್ಷದವರು ರಾಜಕಾರಣ ಮಾಡಬಾರದು’ ಎಂದು ಮತ್ತೊಮ್ಮೆ ಕೋರಿದರು.

ಬೆಂಗಳೂರಿನ ಎಕ್ಸೆಲ್ ಅಕಾಡೆಮಿಕ್ಸ್‌ನಲ್ಲಿ ಕ್ರ್ಯಾಶ್ ಕೋರ್ಸ್ 2023–24

ಎನ್‌ಇಇಟಿ, ಐಐಟಿ, - ಜೆಇಇ, ಸಿಇಟಿನಲ್ಲಿ ರ್‍ಯಾಂಕ್ ಬೇಕೆ?!

ಬನ್ನಿ ಎಕ್ಸೆಲ್ ಅಕಾಡೆಮಿಕ್ಸ್‌ಗೆ

ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆಯು 15 ವರ್ಷಗಳಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಶೈಕ್ಷಣಿಕವಾಗಿ ಎನ್‌ಇಇಟಿ, ಐಐಟಿ, ಸಿಇಟಿ ತರಬೇತಿಯಲ್ಲಿ ಪ್ರತಿಷ್ಠಿತ ಹಾಗೂ ಉನ್ನತ ಕೋಚಿಂಗ್ ಸೆಂಟರ್ ಆಗಿ ಪ್ರಸಿದ್ಧಿಯಾಗಿದೆ. ಇದು ಉನ್ನತ ರ್‍ಯಾಂಕುಗಳ ಕಣಜವಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆ ಮತ್ತು ಆಧುನಿಕ ಪ್ರಪಂಚದ ಬೇಡಿಕೆಗಳಿಗೆ ಅನುಗುಣವಾಗಿ, ಶಿಕ್ಷಣ ಕ್ಷೇತ್ರದಲ್ಲಿ ಹೊಸ ವಿಚಾರಗಳನ್ನು ಅಳವಡಿಸಿಕೊಂಡಿದೆ. ಉತ್ತಮ ಸಾಮಗ್ರಿಗಳು ಮತ್ತು ವಿವಿಧ ರಾಜ್ಯಗಳ ನುರಿತ ಉಪನ್ಯಾಸಕರ ಮಾರ್ಗದರ್ಶನದಿಂದ ಈ ಸಂಸ್ಥೆ ಅಭಿವೃದ್ಧಿಯಾಗುತ್ತಾ ಹೊಸ ಮೈಲುಗಲ್ಲನ್ನು ಸೃಷ್ಟಿಸಿ, ಮುಂದೆ ಸಾಗಿದೆ.

ನಮ್ಮ ಸಂಸ್ಥೆಯ ಮೂಲಕ ಕರ್ನಾಟಕದಾದ್ಯಂತ ಅನೇಕ ಪ್ರತಿಭಾವಂತ ಹಾಗೂ ಬಡ ಮಕ್ಕಳು ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಮತ್ತು ಐಐಟಿ ರ್‍ಯಾಂಕುಗಳನ್ನು ಪಡೆದಿದ್ದಾರೆ. ಮಕ್ಕಳ ಉಜ್ವಲ ಭವಿಷ್ಯವನ್ನು ರೂಪಿಸುವ ಏಕೈಕ ಸಂಸ್ಥೆಗಳಲ್ಲಿ ಎಕ್ಸೆಲ್ ಅಕಾಡೆಮಿಕ್ಸ್ ಕೂಡ ಒಂದು. ನೆರೆಯ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕೇರಳ, ಗೋವಾ, ದೆಹಲಿ, ಗುಜರಾತ್ ಮುಂತಾದ ಹೊರ ರಾಜ್ಯಗಳಿಂದಲೂ ಸಾವಿರಾರು ವಿದ್ಯಾರ್ಥಿಗಳು ಬಂದು ಸೇರುತ್ತಿರುವುದು ನಮ್ಮ ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ.

ಎನ್‌ಇಇಟಿ, ಜೆಇಇ ಮೇನ್, ಸಿಇಟಿ, ಕಾಮೆಡ್‌-ಕೆ ಇನ್ನೂ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಸಾಧಕರಾಗಲು ನಮ್ಮ ಸಂಸ್ಥೆ ದಾರಿದೀಪವಾಗಿದೆ. ಈಗಾಗಲೇ ಅನೇಕ ಮಕ್ಕಳ ಭವಿಷ್ಯವನ್ನು ರೂಪಿಸಿದೆ. ಅಕ್ಕ-ಪಕ್ಕ ರಾಜ್ಯಗಳಲ್ಲಿ ಹಾಗೂ ನಮ್ಮ ರಾಜ್ಯದ ವಿವಿಧ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗಗಳಲ್ಲಿ ಅಧ್ಯಯನ ಮಾಡುತ್ತಿರುವ ಸಾವಿರಾರು ವಿದ್ಯಾರ್ಥಿಗಳು ಕ್ರ್ಯಾಶ್ ಕೋರ್ಸ್ ಮೂಲಕ ರ್‍ಯಾಂಕುಗಳನ್ನು ಪಡೆದಿರುತ್ತಾರೆ. ಪ್ರತಿ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆ ಮುಗಿದ ನಂತರ ನಮ್ಮಲ್ಲಿ 50 ದಿನದ ಕ್ರ್ಯಾಶ್ ಕೋರ್ಸ್ ತರಗತಿಗಳು ಪ್ರಾರಂಭವಾಗುತ್ತವೆ. ಈ ಕ್ರ್ಯಾಶ್ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೇರೆ ಬೇರೆ ಬ್ಯಾಚ್‌ಗಳನ್ನಾಗಿ (ಎನ್‌ಇಇಟಿ, ಐಐಟಿ, ಸಿಇಟಿ) ಮಾಡಿ ತರಬೇತಿ ನೀಡಲಾಗುತ್ತಿದೆ. ಪ್ರತಿದಿನವೂ ಪರೀಕ್ಷೆಗಳನ್ನು ನಡೆಸಿ, ಫಲಿತಾಂಶವನ್ನು ಅದೇ ದಿನವೇ ಪ್ರಕಟಿಸುವ ಏಕೈಕ ಸಂಸ್ಥೆ ನಮ್ಮದು. ದ್ವಿತೀಯ ಪಿಯುಸಿ, ಸಿ.ಬಿ.ಎಸ್.ಇ +2 ವಿಜ್ಞಾನದ ವಿದ್ಯಾರ್ಥಿಗಳು ಇದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಕ್ರ್ಯಾಶ್ ಕೋರ್ಸ್ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಖ್ಯಾತಿ ಹೊಂದಿದೆ. ಪ್ರತಿಷ್ಠಿತ ಕಾಲೇಜುಗಳಲ್ಲಿ ಎನ್‌ಇಇಟಿ, ಐಐಟಿ, ಸಿಇಟಿ ನಲ್ಲಿ ರ್‍ಯಾಂಕುಗಳನ್ನು ಪಡೆದು ಈಗಾಗಲೇ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳೇ ಈ ಯಶಸ್ಸಿಗೆ ಕಾರಣರಾಗಿದ್ದಾರೆ. ನಮ್ಮ ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆಯು ಒಂದು ನಿರ್ದಿಷ್ಟ ವೇಳಾಪಟ್ಟಿಯನ್ನು ತಯಾರಿಸಿಕೊಂಡು ಅದರಂತೆಯೇ ಬೋಧನೆಯನ್ನು ಮಾಡಲಾಗುತ್ತದೆ. ಉದಾಹರಣೆಗೆ ಎನ್‌ಇಇಟಿ, ಪಿಸಿಬಿ (ಫಿಸಿಕ್ಸ್, ಕೆಮಿಸ್ಟ್ರಿ, ಬಯೋಲಾಜಿ) ಈ ವಿಷಯಗಳಿಗೆ 50 ದಿನಗಳ ವೇಳಾಪಟ್ಟಿಯಿದ್ದು, ಇದು ಮಕ್ಕಳ ಭವಿಷ್ಯವನ್ನು ರೂಪಿಸಲು ಯಶಸ್ವಿಯಾಗಿದೆ.

ಪ್ರತಿನಿತ್ಯ ಬೆಳಿಗ್ಗೆ 9ರಿಂದ ಸಂಜೆ 5ರ ತನಕ ಪ್ರತಿ ವಿಷಯವನ್ನು ಒಂದೂವರೆ ಗಂಟೆಯ ಅವಧಿಯಲ್ಲಿ ಬೋಧಿಸಲಾಗುತ್ತದೆ. ಆ ದಿನವೇ ಫಲಿತಾಂಶವನ್ನು ಸಹ ಪ್ರಕಟಿಸಲಾಗುವುದು. ಜೆಇಇ ಮೇನ್ (ಪಿಸಿಎಂ) ವೇಳಾಪಟ್ಟಿಯನ್ನು ತಯಾರಿಸಿ ತರಬೇತಿಯನ್ನು ನೀಡಲಾಗುವುದು. ಅಂದರೆ ಪ್ರತಿನಿತ್ಯ ಪ್ರತಿ ವಿಷಯಕ್ಕೆ ಎರಡು ಗಂಟೆ ಫಿಸಿಕ್ಸ್, ಕೆಮಿಸ್ಟ್ರಿ ಮತ್ತು ಮೆಥಮ್ಯಾಟಿಕ್ಸ್, ಬೋಧನೆ ಮಾಡಿ, ಕಾರ್ಯಾಗಾರ ನಡೆಸಿ, ಅಂದೇ ಪರೀಕ್ಷೆ ನಡೆಸಿ, ಫಲಿತಾಂಶವನ್ನು ಪ್ರಕಟಿಸುತ್ತೇವೆ. ಸಿಇಟಿ (ಪಿಸಿಎಂ) ವಿಶೇಷವಾಗಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಈ ತರಬೇತಿ ನೀಡಲಾಗುವುದು. ಸಿಇಟಿ (ಪಿಸಿಬಿ)ಯಲ್ಲಿ ವೆಟರ್ನರಿ ಬಿಎಸ್.ಸಿ (Ag) ಹಾರ್ಟಿಕಲ್ಚರ್ ಇಲ್ಲಿ ಪ್ರತಿ ವಿಷಯವನ್ನು ಒಂದೂವರೆ ಗಂಟೆಯ ಅವಧಿಯಲ್ಲಿ ಬೋಧಿಸಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಫಲಿತಾಂಶವನ್ನು ಸಹ ಆ ದಿನವೇ ಪ್ರಕಟಿಸಲಾಗುವುದು ಹಾಗೂ ಪಿಸಿಬಿನಲ್ಲಿ ಇದೇ ರೀತಿಯ ತರಬೇತಿ ವ್ಯವಸ್ಥೆ ಇದೆ.

1) ಎನ್‌ಇಇಟಿ (ಪಿಸಿಬಿ) 2) ಜೆಇಇ ಮೇನ್ (ಪಿಸಿಎಂ) 3) ಸಿಇಟಿ (ಪಿಸಿಎಂ) ಎಂಜಿನಿಯರಿಂಗ್ 4) ಸಿಇಟಿ (ಪಿಸಿಬಿ) ವೆಟರ್ನರಿ, ಬಿಎಸ್.ಸಿ ಅಗ್ರಿಕಲ್ಚರ್ & ಹಾರ್ಟಿಕಲ್ಚರ್ 5) ಸಿಇಟಿ (ಪಿಸಿಎಂಬಿ– ಬೋತ್) ಈ ರೀತಿಯಾಗಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಮ್ಮಲ್ಲಿ ವಿಷಯವಾರು ತಂಡಗಳನ್ನು ರಚಿಸಿಕೊಂಡು ಮಕ್ಕಳಿಗೆ ಬರುವ ಸಂಶಯಗಳನ್ನು ಅತಿ ಸರಳವಾಗಿ ಪರಿಹರಿಸಲಾಗುತ್ತದೆ. ನಮ್ಮ ಎಕ್ಸೆಲ್ ಅಕಾಡೆಮಿಕ್ಸ್ ಆಗಿದೆ. ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ಪಠ್ಯಕ್ರಮಕ್ಕೆ ಅನುಗುಣವಾಗಿ ಪ್ರಶ್ನೆಪತ್ರಿಕೆಗಳನ್ನು ತಯಾರಿಸಲಾಗುತ್ತದೆ. 50 ಪರೀಕ್ಷೆಗಳನ್ನು ನಡೆಸಿ ಎನ್‌ಇಇಟಿ, ಐಐಟಿ, ಸಿಇಟಿ ನಲ್ಲಿ ಹೇಗೆ ಪ್ರಶ್ನೆಪತ್ರಿಕೆಗಳು ಬರುತ್ತವೆ ಎಂಬುದನ್ನು ಬೋಧಿಸುತ್ತಾ ಅದರಲ್ಲಿ ಬರುವ ಸಂಶಯಗಳನ್ನು ಪರಿಹರಿಸುತ್ತಾ, ಆ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸಲು ಬೇಕಾದ ಆತ್ಮಸ್ಥೈರ್ಯವನ್ನು ತುಂಬುವುದು ನಮ್ಮ ಎಕ್ಸೆಲ್ ಅಕಾಡೆಮಿಕ್ಸ್‌ನ ಧ್ಯೇಯೋದ್ದೇಶವಾಗಿದೆ.

ಹಾಸ್ಟೆಲ್ ವ್ಯವಸ್ಥೆ: ತರಬೇತಿಗಳ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಡಿಲಕ್ಸ್ ಹಾಸ್ಟೆಲ್ ವ್ಯವಸ್ಥೆ ಇದೆ. ಅಧ್ಯಯನಕ್ಕೆ ಯೋಗ್ಯವಾದ ವಾತಾವರಣವಿದೆ. ಸೆಮಿ ರೆಸಿಡೆನ್ಷಿಯಲ್ ವ್ಯವಸ್ಥೆ ಕೂಡ ನಮ್ಮಲ್ಲಿದೆ. ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ, ಕುಡಿಯಲು ಶುದ್ಧ ನೀರಿನ ವ್ಯವಸ್ಥೆ, ಬೆಳಿಗ್ಗೆ ತಿಂಡಿ, ಹಾಲು, ಮಧ್ಯಾಹ್ನದ ಚಪಾತಿಯೊಂದಿಗೆ ಊಟದ ವ್ಯವಸ್ಥೆ, ಸಂಜೆ 3 ಗಂಟೆಗೆ ಸ್ನ್ಯಾಕ್ಸ್ ರಾತ್ರಿ ಊಟಕ್ಕೆ ವಿವಿಧ ಪಲ್ಯಗಳಿಂದ ಕೂಡಿದ ರುಚಿಕರವಾದ ಊಟದ ವ್ಯವಸ್ಥೆ ಲಭ್ಯವಿದೆ.

ಅನುಭವಿ ಉಪನ್ಯಾಸಕರ ತಂಡ: ಮುಂಬೈ, ಹೈದರಾಬಾದ್, ದೆಹಲಿ, ಕೋಲ್ಕತ್ತ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮುಂತಾದೆಡೆಯಿಂದ ಅನುಭವಿ ಉಪನ್ಯಾಸಕರು ಕ್ರ್ಯಾಶ್ ಕೋರ್ಸ್ ಬೋಧಿಸುವುದು ನಮ್ಮ ಹೆಗ್ಗಳಿಕೆಯಾಗಿದೆ.

ಶೈಕ್ಷಣಿಕ ಕ್ಯಾಂಪಸ್ ವ್ಯವಸ್ಥೆ: ನಮ್ಮ ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆಯ ಕ್ಯಾಂಪಸ್, ವಿಶಾಲವಾದ ಕೊಠಡಿಗಳು, ವ್ಯವಸ್ಥಿತವಾದ ಪೀಠೋಪಕರಣಗಳು, ಇ-ಗ್ರಂಥಾಲಯ, ವ್ಯವಸ್ಥೆಯು ಇದ್ದು ಕಲಿಕೆಗೆ ಉತ್ತಮವಾದ ವಾತಾವರಣವನ್ನು ನಿರ್ಮಿಸಿದೆ.

ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆಯ ಬಹು ನಿರೀಕ್ಷಿತ ಫಲಿತಾಂಶ: ಪೂರ್ವ ನಿರ್ಧಾರಿತವಾಗಿ ತರಗತಿಗಳು ನಡೆಯುವುದರಿಂದ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ರ್‍ಯಾಂಕುಗಳನ್ನು ಪಡೆದಿರುತ್ತದೆ. ಇನ್ನು ಮುಂದೆಯೂ ಪಡೆದುಕೊಳ್ಳುವ ವಿಶ್ವಾಸ ಬೆಂಗಳೂರಿನ ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆಯದ್ದಾಗಿದೆ. ಪ್ರತಿ ವರ್ಷ ಎಕ್ಸೆಲ್ ಅಕಾಡೆಮಿಕ್ಸ್‌ನಲ್ಲಿ ಕ್ರ್ಯಾಶ್ ಕೋರ್ಸ್‌ನಲ್ಲಿ ಸಾವಿರಾರು ವಿದ್ಯಾರ್ಥಿಗಳು ಉಚಿತ ಮೆಡಿಕಲ್, ಡೆಂಟಲ್, ಎಂಜಿನಿಯರಿಂಗ್, ಆರ್ಕಿಟೆಕ್ಚರ್ (ಬಿ. ಆರ್ಕ್) ವೆಟರ್ನರಿ, ಬಿ.ಎಸ್ಸಿ, ಅಗ್ರಿಕಲ್ಚರ್ ಇನ್ನೂ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ರ್‍ಯಾಂಕುಗಳನ್ನು ಪಡೆದಿರುತ್ತಾರೆ.

ರಾಜ್ಯದ, ದೇಶದ ಸಾವಿರಾರು ವಿದ್ಯಾರ್ಥಿಗಳು ಕ್ರ್ಯಾಶ್ ಕೋರ್ಸ್‌ನಲ್ಲಿ ಕೋಚಿಂಗ್ ಪಡೆಯಲು ಈಗಾಗಲೇ ನೋಂದಾಯಿಸಿದ್ದಾರೆ. ಪೋಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಮನವಿಯೆಂದರೆ ಸೀಮಿತ ಸೀಟುಗಳು ಇರುವುದರಿಂದ ತಮ್ಮ ಮಕ್ಕಳನ್ನು ಹೆಮ್ಮೆಯ ಸಂಸ್ಥೆಯಾದ ‘ಎಕ್ಸೆಲ್ ಅಕಾಡೆಮಿಕ್ಸ್ ಕ್ರ್ಯಾಶ್ ಕೋರ್ಸ್‌ಗೆ ದಾಖಲಾತಿ ಮಾಡಿ ತಮ್ಮ ಮಕ್ಕಳ ಭವಿಷ್ಯವನ್ನು ನಿರ್ಮಿಸಿಕೊಳ್ಳಿ’

ನೀವು ರ್‍ಯಾಂಕ್ ಪಡೆಯಿರಿ ಮತ್ತು ನಿಮ್ಮ ಸ್ನೇಹಿತರನ್ನು ಕರೆತನ್ನಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕ್ರ್ಯಾಶ್ ಕೋರ್ಸ್‌ನ ಅವಧಿ ಮತ್ತು ಕೋರ್ಸಿನ ವಿವರಗಳನ್ನು ಈ ಕೆಳಕಂಡಂತೆ ಕಾಣಬಹುದು.

2023-24ನೇ ಶೈಕ್ಷಣಿಕ ವರ್ಷದ ಕೋರ್ಸ್‌ಗಳ ವಿವರ

ಎನ್‌ಇಇಟಿ (ಪಿಸಿಬಿ):	45 ದಿನಗಳು
ಜೆಇಇ (ಮೇನ್ (ಪಿಸಿಎಂ):	15 ದಿನನಗಳು
ಸಿಇಟಿ(ಪಿಸಿಎಂ) (ಇಂಜನಿಯರಿಂಗ್) :	38 ದಿನಗಳು
ಸಿಇಟಿ (ಪಿಸಿಬಿ) (ಅಗ್ರಿಕಲ್ಚರ್ & ವೆಟರ್ನರಿ):	38 ದಿನಗಳು
ಸಿಇಟಿ (ಪಿಸಿಎಂಬಿ ಬೋತ್):	38 ದಿನಗಳು

ಸಂಪರ್ಕಿಸಬೇಕಾದ ವಿಳಾಸ

ಎಕ್ಸೆಲ್ ಅಕಾಡೆಮಿಕ್ಸ್ ಸಂಸ್ಥೆ,
ಯಲಹಂಕ ಉಪನಗರ, ಶೇಷಾದ್ರಿಪುರಂ ಕಾಲೇಜು ಹತ್ತಿರ,
ಬೆಂಗಳೂರು 560064.
ಮೊ. 9513657041,7676917777

ಸ್ಫೋಟ: ಸಂಘಟನೆ ಕೈವಾಡ

ಒಂದನೇ ಪುಟದಿಂದ...

‘ಕೆಫೆಯಲ್ಲಿ ಶಂಕಿತನೊಬ್ಬ ಇಟ್ಟುಹೋಗಿದ್ದ ಬ್ಯಾಗ್‌ನಲ್ಲಿ ಬಾಂಬ್ ಇತ್ತು. ಅದೇ ಬ್ಯಾಗ್ ಸ್ಫೋಟಗೊಂಡಿದೆ. ಸ್ಫೋಟಕ್ಕೂ ಒಂದು ಗಂಟೆ ಮುನ್ನವೇ ಶಂಕಿತ ಸ್ಥಳದಿಂದ ಹೊರಟು ಹೋಗಿದ್ದಾನೆ. ಈತ ಯಾರು? ಎಲ್ಲಿಂದ ಬಂದಿದ್ದ? ಎಲ್ಲಿಗೆ ಹೋದ? ಎಂಬುದನ್ನು ಪತ್ತೆ ಮಾಡಲು ಸಿ.ಸಿ.ಸಿ.ಟಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಅನುಮಾನದ ಮೇರೆಗೆ ನಾಲ್ವರು ಯುವಕರನ್ನು ವಶಕ್ಕೆ ಪಡೆಯಲಾಗಿತ್ತು. ಇವರಲ್ಲಿ ಒಬ್ಬನನ್ನು ಬಿಟ್ಟು ಕಳುಹಿಸಲಾಗಿದೆ. ಮೂವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ. ಇವರಿಂದ ಶಂಕಿತನ ಬಗ್ಗೆ ಏನಾದರೂ ಸುಳಿವು ಸಿಗಬಹುದೆಂಬ ನಿರೀಕ್ಷೆ ಇದೆ’ ಎಂದು ತಿಳಿಸಿದರು.

400 ಕ್ಯಾಮೆರಾ ಪರಿಶೀಲನೆ: ‘ದಿ ರಾಮೇಶ್ವರಂ ಕೆಫೆ ಹಾಗೂ ಅಕ್ಕ-ಪಕ್ಕದ ಮಳಿಗೆಗಳು, ಐಟಿಪಿಎಲ್ ಮುಖ್ಯರಸ್ತೆ, ಕುಂದಲಹಳ್ಳಿ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿರುವ 400ಕ್ಕೂ ಹೆಚ್ಚು ಕ್ಯಾಮೆರಾಗಳ ಡಿವಿಆರ್‌ಗಳನ್ನು ಸುಪರ್ದಿಗೆ ಪಡೆದು, ಎಲ್ಲ ವಿಡಿಯೊ ವೀಕ್ಷಿಸಲಾಗುತ್ತಿದೆ. ಶಂಕಿತ ಓಡಾಡಿದ್ದ ಕೆಲ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ಶಂಕಿತ ಮಾಸ್ಕ್ ಹಾಗೂ ಕ್ಯಾಪ್ ಧರಿಸಿದ್ದ. ಕನ್ನಡಕ ಹಾಕಿಕೊಂಡಿದ್ದ. ಕ್ಯಾಪ್ ಮೇಲೆ ‘10’ ಸಂಖ್ಯೆ ಬರೆಯಲಾಗಿತ್ತು. ಆಗಾಗ ಕೈ ಗಡಿಯಾರ ನೋಡಿಕೊಂಡು ರಸ್ತೆಯಲ್ಲಿ ಹೊರಟಿದ್ದ. ಕೆಫೆಯಲ್ಲಿದ್ದ ವೇಳೆ, ಇಡ್ಲಿ ಪ್ಲೇಟ್ ತೆಗೆದುಕೊಂಡು ಹೋಗಿ ಕಟ್ಟೆ ಮೇಲೆ ಕುಳಿತು ತಿಂದಿದ್ದ. ಈ ಸಂದರ್ಭದಲ್ಲಿ ಆಗಾಗ ಮೊಬೈಲ್ ನೋಡಿಕೊಂಡಿದ್ದ. ಈ ಎಲ್ಲ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿವೆ’ ಎಂದು ಹೇಳಿದರು.

ಬಸ್‌ನಲ್ಲಿ ಪ್ರಯಾಣ: ‘ಕುಂದಲಹಳ್ಳಿ ಬಳಿ ಬ್ಯಾಗ್ ಹಿಡಿದು ನಿಂತಿದ್ದ ಶಂಕಿತ, ಬನಶಂಕರಿಯಿಂದ ಐಟಿಪಿಎಲ್‌ನತ್ತ ಹೊರಟಿದ್ದ ಬಿಎಂಟಿಸಿ ಬಸ್ ಹತ್ತಿದ್ದ. ಸಿಎಂಆರ್‌ಐಟಿ ಕಾಲೇಜು ತಂಗುದಾಣದಲ್ಲಿ ಇಳಿದಿದ್ದ. ನಂತರ, ಅಲ್ಲಿಂದ ನಡೆದುಕೊಂಡು ದಿ ರಾಮೇಶ್ವರಂ ಕೆಫೆಗೆ ಹೋಗಿದ್ದ. ಬಸ್ಸಿನ ಚಾಲಕ ಹಾಗೂ ನಿರ್ವಾಹಕರಿಂದ ಮಾಹಿತಿ ಪಡೆಯಲಾಗಿದೆ’ ಎಂದು ತಿಳಿಸಿದರು.

‘ಎಲ್ಲ ಆಯಾಮಗಳಲ್ಲಿ ತನಿಖೆ ಮುಂದುವರಿಸಲಾಗಿದೆ. ಎಂಟು ಪ್ರತ್ಯೇಕ ತಂಡಗಳು ಮಾಹಿತಿ ಕಲೆಹಾಕುತ್ತಿವೆ. ತಮಿಳುನಾಡು, ಕೇರಳಕ್ಕೂ ಪೊಲೀಸರು ಹೋಗಿದ್ದಾರೆ’ ಎಂದು ಅಧಿಕಾರಿ ಹೇಳಿದರು.

ಶಂಕಿತನನ್ನು ನೋಡಿದ್ದ ವ್ಯವಸ್ಥಾಪಕ: ಸ್ಫೋಟದ ಬಗ್ಗೆ ಕೆಫೆಯ ಮೇಲ್ವಿಚಾರಕ ರಾಜೇಶ್ ಅವರು ದೂರು ನೀಡಿದ್ದಾರೆ. ಅಪರಾಧಿಕ ಸಂಚು, ಹಲ್ಲೆ, ಕೊಲೆಗೆ ಯತ್ನ ಆರೋಪ ಹಾಗೂ ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆಯಡಿ (ಯುಎಪಿಎ) ಎಚ್‌ಎಎಲ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಪ್ರತಿದಿನ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 1 ಗಂಟೆಯವರೆಗೂ ಹೋಟೆಲ್ ತೆರೆದಿರುತ್ತದೆ. ಫೆ. 1ರಂದು ಮಧ್ಯಾಹ್ನ 12.50 ಗಂಟೆಯಿಂದ 1 ಗಂಟೆ ಅವಧಿಯೊಳಗೆ, ತಟ್ಟೆಗಳನ್ನು ಇರಿಸುವ ಜಾಗದ ಪಕ್ಕದಲ್ಲಿರುವ ಕಟ್ಟೆ ಮೇಲೆ ಸ್ಫೋಟ ಸಂಭವಿಸಿದೆ. ಸ್ಫೋಟದಿಂದ ದೊಡ್ಡ ಶಬ್ದ ಬಂದಿತ್ತು. ಹೋಟೆಲ್‌ನ ಕಬ್ಬಿಣದ ಚಾವಣಿ ಜಖಂಗೊಂಡಿತು. ಗಾಜುಗಳು ಒಡೆದವು. ಟಾರ್ಪಲ್ ಶೆಲ್ಟರ್ ಹರಿದು ಹೋಯಿತು. ಸ್ಥಳದಲ್ಲಿ ನಟ್, ಬೋಲ್ಟ್, ವಾಷರ್‌ಗಳು ಬಿದ್ದಿದ್ದವು. ಹೆಚ್ಚು ಜನ ಸೇರುವ ಕೆಫೆಯಲ್ಲಿ ಬಾಂಬ್ ಸ್ಫೋಟಿಸಿ ಸಾರ್ವಜನಿಕರನ್ನು ಕೊಲ್ಲುವ ಉದ್ದೇಶದಿಂದ ದುಷ್ಕರ್ಮಿಗಳು ಬಾಂಬ್ ಇಟ್ಟಿದ್ದಾರೆ. ಹೋಟೆಲ್‌ನ ವ್ಯವಸ್ಥಾಪಕ ಹರಿಹರನ್, ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಶಂಕಿತನನ್ನು ನೋಡಿದ್ದರು’ ಎಂದು ರಾಜೇಶ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮೇಲ್ಭಾಗಕ್ಕೆ ಸಿಡಿದ ಬಾಂಬ್’

ಬಾಂಬ್ ಸ್ಫೋಟ ಸ್ಥಳಕ್ಕೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದ್ದ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಸಿಸಿಬಿ ಪೊಲೀಸರ ಜೊತೆ ಪ್ರಾಥಮಿಕ ವರದಿ ಹಂಚಿಕೊಂಡಿದ್ದಾರೆ.

‘9 ವೋಲ್ಟ್ ಬ್ಯಾಟರಿ, ಮೊಬೈಲ್ ಸರ್ಕೀಟ್, ಟೈಮರ್ ಹಾಗೂ ಇತರೆ ಕಚ್ಚಾ ಸಾಮಗ್ರಿಗಳನ್ನು ಬಳಸಿ ಬಾಂಬ್ ತಯಾರಿಸಲಾಗಿದೆ. ಕೆಫೆಯಲ್ಲಿ ಮೇಲ್ಭಾಗದ ಕಡೆಗೆ ಬಾಂಬ್ ಸಿಡಿದಿದ್ದರಿಂದ, ಅಕ್ಕ-ಪಕ್ಕದಲ್ಲಿ ತೀವ್ರತೆ ಕಡಿಮೆ ಇತ್ತು. ಆಕಸ್ಮಾತ್, ಅಕ್ಕ-ಪಕ್ಕಕ್ಕೆ ಬಾಂಬ್ ಸಿಡಿದಿದ್ದರೆ ದೊಡ್ಡ ಅನಾಹುತ ನಡೆಯುವ ಸಾಧ್ಯತೆ ಹೆಚ್ಚಿತ್ತು’ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

‘ಬೆಂಗಳೂರಿನಲ್ಲಿ ಕಟ್ಟೆಚ್ಚರ: ತಪಾಸಣೆ’

ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣ, ರೈಲು ನಿಲ್ದಾಣ, ಬಸ್ ತಂಗುದಾಣಗಳು ಹಾಗೂ ಜನರು ಹೆಚ್ಚು ಸೇರುವ ಸ್ಥಳಗಳಲ್ಲಿ ಬಾಂಬ್ ನಿಷ್ಕ್ರಿಯ ದಳ ಶನಿವಾರ ತಪಾಸಣೆ ನಡೆಸಿದೆ.

ಧ್ವನಿ ಮಾದರಿ ಹೋಲಿಕೆಯಾದರೆ ಬಂಧನ ಸಾಧ್ಯತೆ

‘ಪಾಕ್ ಪರ ಘೋಷಣೆ: ವಿಡಿಯೊ ಅಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ’ ಎಂದು ಆರೋಪಿಸಲಾದ ಪ್ರಕರಣದ ವಿಡಿಯೊಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿರುವ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಪೊಲೀಸ್ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಿರುವುದಾಗಿ ಗೊತ್ತಾಗಿದೆ.

‘ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದ ಹಾಗೂ ಘಟನಾ ಸ್ಥಳದಲ್ಲಿದ್ದವರು ಚಿತ್ರೀಕರಿಸಿದ್ದ ವಿಡಿಯೊಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ವೈಜ್ಞಾನಿಕವಾಗಿ ಪರೀಕ್ಷೆ ನಡೆಸಿದ್ದ ತಜ್ಞರು, ಎಲ್ಲ ವಿಡಿಯೊಗಳು ಅಸಲಿ ಎಂಬುದಾಗಿ ವರದಿ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಡಿಯೊ ತಿರುಚಿರುವ ಬಗ್ಗೆ ಆರಂಭದಲ್ಲಿ ಅನುಮಾನವಿತ್ತು. ಎಲ್ಲ ವಿಡಿಯೊಗಳು ಅಸಲಿ ಎಂಬುದು ಇದೀಗ ಗೊತ್ತಾಗಿದೆ. ಸ್ಥಳದಲ್ಲಿದ್ದ ವ್ಯಕ್ತಿ, ‘ಪಾಕಿಸ್ತಾನ್ ಜಿಂದಾಬಾದ್’ ಘೋಷಣೆ ಕೂಗಿದ್ದು ಮೇಲ್ನೋಟಕ್ಕೆ ತಿಳಿದುಬಂದಿದೆ. ವಿಡಿಯೊದಲ್ಲಿರುವ ವ್ಯಕ್ತಿಗಳನ್ನು ಈಗಾಗಲೇ ವಿಚಾರಣೆ ನಡೆಸಲಾಗಿದೆ. ಮತ್ತೊಮ್ಮೆ ವಿಚಾರಣೆಗೆ ಕರೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿವೆ.

ಧ್ವನಿ ಮಾದರಿ ವರದಿ: ರಾಜ್ಯಸಭೆ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಅವರ ಸಂಭ್ರಮಾಚರಣೆ ವೇಳೆ ಹಾಜರಿದ್ದ ಹಾವೇರಿ ಜಿಲ್ಲೆಯ ಬ್ಯಾಡಗಿಯ ಮಹಮ್ಮದ್ ಶಫಿ ನಾಶಿಪುಡಿ ಹಾಗೂ ನಿಜಾಮ್ ಸೇರಿ ಎಂಟು ಮಂದಿಯನ್ನು ವಶಕ್ಕೆ ಪಡೆದು ಧ್ವನಿ ಮಾದರಿ ಸಂಗ್ರಹಿಸಲಾಗಿತ್ತು. ವಿಧಿವಿಜ್ಞಾನ ಪ್ರಯೋಗಾಲಯದಿಂದ ಇದರ ವರದಿ ಬರಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲ ಬೆಂಬಲಿಗರ ಧ್ವನಿಗೂ ಹಾಗೂ ವಿಡಿಯೊದಲ್ಲಿರುವ ಧ್ವನಿಗೂ ಹೋಲಿಕೆಯಾದರೆ, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿವೆ.

‘ಬೋಗಸ್ ಎಫ್‌ಎಸ್‌ಎಲ್ ವರದಿಯ ಅನುಮಾನ’

ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿರುವುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿರುವ ಮಾಹಿತಿ ಇದೆ. ಆದರೂ, ಸರ್ಕಾರ ದೇಶದ್ರೋಹಿಗಳನ್ನು ರಕ್ಷಿಸಲು ಬೋಗಸ್ ಎಫ್‌ಎಸ್‌ಎಲ್ ವರದಿ ಸಿದ್ಧಪಡಿಸುವ ಅನುಮಾನವಿದೆ ಎಂದು ಬಿಜೆಪಿ ರಾಜ್ಯ ಘಟಕದ ಬಿ.ವೈ. ವಿಜಯೇಂದ್ರ ಹೇಳಿದರು.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ದೇಶದ್ರೋಹದ ಪ್ರಕರಣಗಳಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ. ಇಂತಹ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಘೋಷಣೆಯನ್ನೇ ಕೂಗಿಲ್ಲ ಎಂದು ಕೆಲವರು ಹೇಳಿಕೆ ನೀಡಿದರು. ಮುಖ್ಯಮಂತ್ರಿ ಹಾಗೂ ಅವರ ಸಂಪುಟದ ಸಚಿವರ ಹೇಳಿಕೆಗಳು ಜನರ ವಿಶ್ವಾಸ ಮೂಡಿಸುತ್ತಿಲ್ಲ. ಶಿವಮೊಗ್ಗದಲ್ಲಿ ಟಿಪ್ಪು ಜಯಂತಿ ವೇಳೆ ಮಾಡಿದ್ದ ಅಟ್ಟಹಾಸ, ಮಂಗಳೂರಿನ ಕುಕ್ಕರ್ ಬಾಂಬ್ ಸ್ಫೋಟದ ಅಪರಾಧಿಗಳನ್ನು ಅಮಾಯಕರು ಎಂದು ಬಿಂಬಿಸುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗಳು ರಾಜ್ಯದಲ್ಲಿ ಅಶಾಂತಿ ಮೂಡಲು ಕಾರಣವಾಗುತ್ತಿದೆ ಎಂದರು.

ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಿಜೆಪಿ ರಾಜಕಾರಣ ಮಾಡುವುದಿಲ್ಲ. ಜವಾಬ್ದಾರಿಯುತ ವಿರೋಧ ಪಕ್ಷವಾಗಿ ರಾಜ್ಯ ಸರ್ಕಾರಕ್ಕೆ ಸಂಪೂರ್ಣ ಸಹಕಾರ ಕೊಡುತ್ತೇವೆ ರಾಜ್ಯದ ಜನರಲ್ಲೂ ಆತಂಕ ಕಾಡುತ್ತಿದೆ. ಇಂಥ ಘಟನೆಗಳನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಾಕಿಸ್ತಾನ ಜಿಂದಾಬಾದ್ ಘೋಷಣೆ ಆರೋಪದ ಬಗ್ಗೆ ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ಅಧಿಕೃತ ವರದಿ ಬಾರದೇ ಊಹಾಪೋಹ ಚರ್ಚೆ ಸರಿಯಲ್ಲ. ಈ ಪ್ರಕರಣಕ್ಕೆ ರಾಜಕೀಯ ಬಣ್ಣ ಬಳಿಯುವುದು ಏಕೆ?

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ.ಮಲ್ಲೇಶ್ ನೆನಪಿನ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಹೋರಾಟಗಾರ್ತಿ ಬೃಂದಾ ಕಾರಟ್ ಅಭಿಪ್ರಾಯ

‘ಸಂವಿಧಾನದ ಪ್ರಾಣ ಪ್ರತಿಷ್ಠಾಪನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಮೈಸೂರು: ‘ದೇಶದ ಸಂವಿಧಾನವು ಐಸಿಯುಗೆ ತಲುಪಿದ್ದು, ಅದರ ಪ್ರಾಣ ಪುನರ್‌ಪ್ರತಿಷ್ಠಾಪನೆಯ ಅಗತ್ಯವಿದೆ’ ಎಂದು ಹೋರಾಟಗಾರ್ತಿ ಬೃಂದಾ ಕಾರಟ್ ಅಭಿಪ್ರಾಯಪಟ್ಟರು.

ಪ್ರಗತಿಪರ ಸಂಘಟನೆಗಳ ಒಕ್ಕೂಟವು ‘ಪ. ಮಲ್ಲೇಶ್ 90’ ನೆನಪಿನಲ್ಲಿ ಇಲ್ಲಿನ ಕಲಾಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ‘ಭಾರತ ಜನತಂತ್ರದ ಸಮಕಾಲೀನ ಸವಾಲುಗಳು’ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ‘ಭಾರತದಲ್ಲಿ ಸಮಕಾಲೀನ ಮಹಿಳಾ ಚಳವಳಿಗಳು ಹಾಗೂ ಸವಾಲುಗಳು’ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ದೇಶ ಆಳುತ್ತಿರುವ ಬಿಜೆಪಿ ಹಾಗೂ ಅದರ ಬೆನ್ನೆಲುಬಾದ ಆರ್‌ಎಸ್‌ಎಸ್‌ನಿಂದ ಸಂವಿಧಾನ ಐಸಿಯು ಸ್ಥಿತಿಗೆ ತಲುಪಿದೆ. ಹಿಂದುತ್ವದ ಪ್ರತಿಪಾದನೆ ಹೆಸರಿನಲ್ಲಿ ಜಾತ್ಯತೀತ ರಾಷ್ಟ್ರವನ್ನು ಅಂಧಕಾರಕ್ಕೆ ತಳ್ಳುವ ಪ್ರಯತ್ನ ನಡೆದಿದೆ’ ಎಂದರು.

‘ಸರ್ಕಾರವೇ ಕೋಮುವಾದವನ್ನು ಪ್ರಚೋದಿಸುತ್ತಿದೆ. ಬಿಲ್ಕಿಸ್ ಬಾನು, ಶ್ರದ್ಧಾ ವಾಲ್ಕರ್ ಮೊದಲಾದ ಪ್ರಕರಣಗಳಲ್ಲಿ ಸಂತ್ರಸ್ತ ಮಹಿಳೆಯರ ಜಾತಿ- ಧರ್ಮದ ಬಗ್ಗೆ ಬಹಿರಂಗ ಹೇಳಿಕೆ ಹಾಗೂ ಲೈಂಗಿಕ ಅಪರಾಧಕ್ಕೆ ಕೋಮುವಿನ ಬಣ್ಣ ಬಳಿಯುತ್ತಿರುವುದು ವಿಷಾದದ ಸಂಗತಿ. ಬಿಜೆಪಿ ಇದನ್ನೇ ತನ್ನ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ’ ಎಂದು ದೂರಿದರು.

‘ಶೇ 90ರಷ್ಟು ಅತ್ಯಾಚಾರ ಪ್ರಕರಣಗಳು ಒಂದೇ ಕೋಮಿನ ಜನರಿಂದ ನಡೆದಿವೆ ಎಂದು ಆರ್‌ಎಸ್‌ಎಸ್ ಮುಖಂಡರು ಹೇಳುತ್ತಾರೆ. ಆದರೆ, ಹಿಂದೂ ಧರ್ಮದ ಮೇಲ್ವರ್ಗದ ಪುರುಷರು ಅತ್ಯಾಚಾರ ಮಾಡಿದಾಗ ಮಾತ್ರ ಅವರ ಧ್ವನಿ ಬದಲಾಗುತ್ತದೆ. ದಲಿತ ಮಹಿಳೆಯ ಮೇಲೆ ಮೇಲ್ವರ್ಗದವರಿಂದ ಅತ್ಯಾಚಾರ ನಡೆದಾಗ ಇವರು ಪ್ರಶ್ನಿಸುವುದಿಲ್ಲ’ ಎಂದು ಕಿಡಿಕಾರಿದರು.

‘ಕಳೆದ ಹತ್ತು ವರ್ಷದಲ್ಲಿ ಮೋದಿ ಸರ್ಕಾರ ವಿಧವಾ ವೇತನವನ್ನು ಬಿಡಿಗಾಸು ಏರಿಸಿಲ್ಲ. ಈಗಲಾದರೂ ಶೇ 33ರಷ್ಟು ಮೀಸಲಾತಿ ಕೊಡಿ ಎಂದರೆ ಜನಗಣತಿ, ಕ್ಷೇತ್ರ ಪುನರ್ ವಿಂಗಡನೆ ಹೆಸರಲ್ಲಿ ಮಸೂದೆಯನ್ನು ಹತ್ತು ವರ್ಷಕ್ಕೆ ಮುಂದೂಡಲಾಗಿದೆ’ ಎಂದು ದೂರಿದರು.

ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ‘ಭಾರತದಲ್ಲಿ ಸಮಕಾಲೀನ ಮಹಿಳಾ ಚಳವಳಿಗಳು ಹಾಗೂ ಸವಾಲುಗಳು’ ಕುರಿತ ಗೋಷ್ಠಿಯಲ್ಲಿ ಹೋರಾಟಗಾರ್ತಿ ಬೃಂದಾ ಕಾರಟ್ ಮಾತನಾಡಿದರು. ಎಂ. ಉಮಾದೇವಿ, ಸಬಿತಾ ಬನ್ನಾಡಿ ಹಾಗೂ ಆರ್. ಸುನಂದಮ್ಮ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ರೈತ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಅಡ್ಡಿ: ಆಕ್ಷೇಪ

ಮೈಸೂರು: ‘ಬೆಂಗಳೂರಿನಲ್ಲಿ ನಡೆದಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕೇಸರಿ ಹರವು ಅವರ ರೈತ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ತಡೆ ಒಡ್ಡಿರುವುದು ಖಂಡನೀಯ’ ಎಂದು ಪ್ರಗತಿಪರ ಚಿಂತಕರು ಇಲ್ಲಿ ನಿರ್ಣಯ ಕೈಗೊಂಡರು.

ವಿಚಾರ ಸಂಕಿರಣದ ಸಮಾರೋಪಕ್ಕೂ ಮುನ್ನ, ಈ ಸಂಗತಿಯನ್ನು ಚುಕ್ಕಿ ನಂಜುಂಡಸ್ವಾಮಿ ಸಭೆಯ ಗಮನಕ್ಕೆ ತಂದರು.

‘ಸರ್ಕಾರವು ಕೂಡಲೇ ನಿಷೇಧವನ್ನು ಹಿಂಪಡೆದು ಚಲನಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಬೇಕು’ ಎಂಬ ಖಂಡನಾ ನಿರ್ಣಯವನ್ನು ಸಭೆಯು ಕೈಗೊಂಡಿತು.

ಕಸದ ಬುಟ್ಟಿಯಲ್ಲಿ ಬಿದ್ದಿದ್ದ ವರದಿ ಕೊಟ್ಟಿದ್ದಾರೆ: ಶಾಮನೂರು

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಕಸದ ಬುಟ್ಟಿಯಲ್ಲಿ ಬಿದ್ದಿದ್ದ, ಹತ್ತು ವರ್ಷಗಳಷ್ಟು ಹಳೆಯದಾದ ಜಾತಿಗಣತಿ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ವರದಿಯನ್ನು ಕಾಂತರಾಜ ಸಿದ್ಧಪಡಿಸಿದ್ದಾರೋ ಅಥವಾ ಕೆ.ಜಯಪ್ರಕಾಶ ಹೆಗ್ಡೆ ಅವರು ಬರೆದಿದ್ದಾರೋ ಗೊತ್ತಿಲ್ಲ’ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

‘ರಾಜ್ಯದಲ್ಲಿ ಲಿಂಗಾಯತರು 2 ಕೋಟಿಯಷ್ಟಿದ್ದೇವೆ. ನಮ್ಮ ಬಳಿಯೂ ಹಣ ಇದೆ. ಸಿಬ್ಬಂದಿಯೂ ಇದ್ದಾರೆ. ಹೀಗಾಗಿ ಮಹಾಸಭಾದಿಂದಲೇ ಜಾತಿ ಗಣತಿ ನಡೆಸುವ ಬಗ್ಗೆ ಯೋಚಿಸಿದ್ದೇವೆ. ಯಾವಾಗ ಎಂಬುದನ್ನು ಈಗಲೇ ಹೇಳಲು ಆಗುವುದಿಲ್ಲ’ ಎಂದು ಸುದ್ದಿಗಾರರಿಗೆ ಶನಿವಾರ ತಿಳಿಸಿದರು.

‘ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಜಾತಿಗಣತಿ ವರದಿಯನ್ನು ರಾಜ್ಯ ಸರ್ಕಾರ ಸ್ವೀಕಾರ ಮಾಡಿರುವುದರಲ್ಲಿ ತಪ್ಪೇನಿಲ್ಲ. ಸಂಪುಟ ಸಭೆಯಲ್ಲಿ ಆ ಕುರಿತು ಚರ್ಚೆ ಆಗಬೇಕಲ್ಲ. ಒಂದೊಮ್ಮೆ ವರದಿ ಬಿಡುಗಡೆ ಮಾಡಿದರೆ ಒಕ್ಕಲಿಗರು, ಬ್ರಾಹ್ಮಣರು ಮತ್ತು ಲಿಂಗಾಯತರು ಸೇರಿ ದೊಡ್ಡ ಹೋರಾಟ ಮಾಡುತ್ತೇವೆ’ ಎಂದು ಎಚ್ಚರಿಸಿದರು.

ಅವೈಜ್ಞಾನಿಕ: ಕೋರೆ

ಬೆಳಗಾವಿ: ‘ಜಾತಿಗಣತಿ ವರದಿಯಲ್ಲಿನ ದತ್ತಾಂಶ ಅವೈಜ್ಞಾನಿಕವಾಗಿದೆ. ವೀರಶೈವ ಲಿಂಗಾಯತ ಸಮುದಾಯ ಇದನ್ನು ಖಂಡಿಸುತ್ತದೆ’ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಷ್ಟ್ರೀಯ ಘಟಕದ ಉಪಾಧ್ಯಕ್ಷ ಪ್ರಭಾಕರ ಕೋರೆ ತಿಳಿಸಿದ್ದಾರೆ.

‘ಜಾತಿ ವಿಚಾರದಲ್ಲಿ ರಾಜಕೀಯ ಮಾಡಬಾರದು. ನೈಜ ವರದಿಯಾಗಿದ್ದರೆ ಒಪ್ಪಿಕೊಳ್ಳಬಹುದಿತ್ತು. ಆದರೆ, ಈ ವರದಿ ಪಾರದರ್ಶಕ ಅನ್ನಿಸುವುದಿಲ್ಲ. ಇದರ ಬಗ್ಗೆ ಸಾರ್ವಜನಿಕ ಚರ್ಚೆಯಾಗಬೇಕು. ಸರಿಯಾದ ಅಂಕಿ- ಅಂಶ ಸಂಗ್ರಹಿಸಿ, ಇಂಥ ವರದಿ ರೂಪಿಸಬೇಕು’ ಎಂದು ಅವರು ತಿಳಿಸಿದ್ದಾರೆ.

‘ಯಾರಿಗೂ ಭೇಟಿಯಾಗದೆ ತರಾತುರಿಯಲ್ಲಿ ರೂಪಿಸಿದ ವರದಿಯನ್ನು ನಮ್ಮ ಸಮಾಜ ಒಪ್ಪಲ್ಲ. ಸರ್ಕಾರವು ಬದ್ಧತೆ, ಪ್ರಾಮಾಣಿಕತೆಯಿಂದ ಇದನ್ನು ರೂಪಿಸಿ, ಮತ್ತೊಮ್ಮೆ ಪರಾಮರ್ಶಿಸಲಿ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಇನ್ನೊಂದು ಆಯೋಗ ರಚನೆಗೆ ಚಿಂತನೆ’

ಅರಸೀಕೆರೆ (ಹಾಸನ): ‘ಕಾಂತರಾಜ ಆಯೋಗದ ವರದಿ ಬಗ್ಗೆ ಇನ್ನೂ ಯಾರಿಗೂ ಸ್ಪಷ್ಟ ಮಾಹಿತಿ ಇಲ್ಲ. ಸಾಧ್ಯವಿದ್ದರೆ, ಇನ್ನೊಂದು ಆಯೋಗವನ್ನು ರಚಿಸಿ ಜಾತಿ ಗಣತಿ ಕಾರ್ಯ ನಡೆಸಲು ಸರ್ಕಾರ ಚಿಂತಿಸುತ್ತಿದೆ’ ಎಂದು ಗೃಹ ಮಂಡಳಿ ಅಧ್ಯಕ್ಷ, ಶಾಸಕ ಕೆ.ಎಂ. ಶಿವಲಿಂಗೇಗೌಡ ಶನಿವಾರ ಇಲ್ಲಿ ಹೇಳಿದರು.

6 ಜನರಲ್ಲಿ ಕೆಎಫ್‌ಡಿ ದೃಢ

ಪ್ರಜಾವಾಣಿ ವಾರ್ತೆ

ಕೊಪ್ಪ (ಚಿಕ್ಕಮಗಳೂರು): ತಾಲ್ಲೂಕಿನಲ್ಲಿ ಶನಿವಾರ ಆರು ಮಂದಿಗೆ ಮಂಗನ ಕಾಯಿಲೆ (ಕೆಎಫ್‌ಡಿ) ದೃಢಪಟ್ಟಿದೆ.

ತಾಲ್ಲೂಕಿನ ನುಗ್ಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಐವರಿಗೆ, ಭುವನಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಬ್ಬರಲ್ಲಿ ಮಂಗನ ಕಾಯಿಲೆಯ ವೈರಾಣು ಇರುವುದು ಪತ್ತೆಯಾಗಿದೆ ಎಂದು ತಾಲ್ಲೂಕಿನ ಆರೋಗ್ಯ ಇಲಾಖೆಯ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

PUBLIC NOTICE

The General public are hereby informed that **M/S Ravindu Motor Pvt Ltd.,** is a authorized dealer of Toyota Brand Cars, carrying on its business in sales and service of Toyota Kirloskar Motors Pvt Ltd., (TKML) made vehicles, having its Registered Office at No.25, West of Chord Road, Opp ISKCON Temple, Rajajinagar Industrial Sub-urb, Bangalore 560 022 and having branches at (1) No.3/1, Avalahalli Village, Bidarahalli Hobli, Virgonagar Post, Hosakote Main Road, Bangalore 560 049, (2) No.14/3, Melakote Outer Ring Road, Sadashivanagara, Tumkur 572 105, (3) No.68, Near APMC Yard, Rajajinagar Industrial Sub-urb 1 & 2, Banagalore 560 022, (4) No.30, Adjacent to Saraswathi Convention Hall, Magadi Main Road, Near Vijayanagara Toll Gate Signal, Bangalore 560 040, (5) No.1064/442, Near R V School, NH 75m PC Halli bypass Road, Kolar 563 102 (6) No.30, “Vaswani Victoria”, Victoria Road, Bangalore 560 025 and (7) No.80/3, Gayathri Mansion, Bellandur Village, Marathahalli Outer Ring Road, Varthur Hobli, Bangalore 560 103, having huge number of satisfied customers.

Recently we came to know from UCO Bank, Frazer Town Branch, Bangalore that, some miscreants have opened Bank Account in the name of our company in Indian Overseas Bank and The Janatha Co-operative Bank Ltd., and have cheated the general public at large. Hence we hereby make it clear that we are not at all having bank account No.374202000000102 in Indian Overseas Bank or Account No.2005040100000467 in The Janatha Co-operative Bank Ltd., and on coming to know about the same we have made a complaint to the Jurisdictional Mahalakshmi Layout Police Station in this regard. Hence we hereby request the general public, banks and financial institutions to take all precautions and cross check before making the payment with the officials of our company and in the event if anybody loses money to the fraudsters in this regard, our company is not liable and responsible for the consequences arising out of such incident. This notice is issued in the best interest of general public at large.

Place: Bangalore
Date: 03.03.2024

M/S. Ravindu Motor Pvt.Ltd.,
Represented by its Chief Executive Officer.

PUBLIC NOTICE

Notice is hereby given to people at large and more particularly to those in Film Trade that our client is in the process of acquiring from Paramvah Pictures LLP, the below mentioned rights of the Kannada language cinematograph films as listed below (hereinafter referred to as “Said Films”).

Sr. No.	Name of the Film	Star Cast	Theatrical Release Date
01.	Sapta Sagaradaache Ello Side-A	Rakshit Shetty, Rukmini Vasanth, Chaithra J Achar, Avinash, and others	September 01, 2023
02.	Sapta Sagaradaache Ello Side-B		November 17, 2023

1. Sole and exclusive Linear Rights for transmission and/or re-transmission via all distribution platforms including but not limited to via Satellite Broadcasting, Terrestrial Television, Cable Television Networks, Internet Protocol Television Networks, Head-end In the Sky, Direct to Home, Internet, Mobile Broadcast Technology, Applications via Internet, Digital Platform Broadcast; Terrestrial Television Rights, Local Cable Distribution Rights; Catch Up TV Rights; by and all means, modes, medias, mediums and formats whether presently known or which may be discovered/ developed in future for the entire universe including India in perpetuity; AND

2. Sole and exclusive On Demand Rights via all distribution platforms (save and except digital distribution platforms) including but not limited to via Satellite Broadcasting, Terrestrial Television, Cable Television Networks, Internet Protocol Television Networks, Head-end In the Sky, Direct to Home, by and all means, modes, medias, mediums and formats whether presently known or which may be discovered/ developed in future for the entire universe including India commencing from October 12, 2033 till perpetuity for ‘Sapta Sagaradaache Ello Side-A’ and commencing immediately for ‘Sapta Sagaradaache Ello Side-B’; AND

3. Sole and exclusive Surface Transport Rights, Commercial Establishment Rights, Mechanical Reproduction Rights, Public Exhibition Rights for the entire universe including India in perpetuity commencing from October 12, 2033 for ‘Sapta Sagaradaache Ello Side-A’ and commencing immediately for ‘Sapta Sagaradaache Ello Side-B’ ; AND

4. Subtitling Rights in all languages of the world, Syndication Rights, Editing Rights, Promotion Rights and Clip Rights (whether in part or whole) for the purpose of exploiting the rights mentioned above.

The abovementioned rights shall collectively be referred to as the “said Right(s)”.

To the best of our client’s knowledge and belief, the said Films and the said Right(s) are free from any encumbrances, claims or demands of any nature whatsoever, should any person(s) have any claim in respect to the said Films and/or said Right(s) or part thereof, whether by way of assignment, gift, lease, license, pledge, reservation, sale, transfer of any kind and/or litigation of any nature related to said Films and/or any of said Right(s) or otherwise; such person(s) are hereby required to submit their claim along-with documentary proof at the addresses given herein below, within 03 (three) days from the date of publication of this notice. In the event no such claim is received, the same will be considered as if no such claim exists or that they have been waived or abandoned. Any claims or objections received thereafter shall be deemed to be forfeited/waived and shall not be entertained in any manner whatsoever.

Date: 03/03/2024

Dua Associates
116, Free Press House, 11th Floor, 215 Backbay Reclamation – III, Nariman Point, Mumbai – 400 021
Email ID of the Concerned Persons: Kunal Parekh <kunalparekh@duaassociates.com>;
Nirali Shah <nirali@duaassociates.com>

ಉತ್ಸವಕ್ಕೆ ಮೆರುಗು

ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿ ನಡೆಯುತ್ತಿರುವ ಕನಕಗಿರಿ ಉತ್ಸವದ ಮೆರವಣಿಗೆಯಲ್ಲಿ ಶನಿವಾರ ಆಂಜನೇಯನ ವೇಷ ಧರಿಸಿ ಗಮನ ಸೆಳೆದ ಕಲಾವಿದ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಗಣಿ ಪ್ರಾಧಿಕಾರ: ನಿವೃತ್ತ ಐಎಎಸ್ ಅಧಿಕಾರಿ ಬಾಲಸುಬ್ರಮಣ್ಯಂ ಸಲಹೆಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದ ಮೇಲ್ವಿಚಾರಣಾ ಪ್ರಾಧಿಕಾರಕ್ಕೆ ಸಲಹೆಗಾರರಾಗಿ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣ್ಯಂ ಅವರನ್ನು ನೇಮಿಸಲಾಗಿದೆ.

ಸುಪ್ರೀಂ ಕೋರ್ಟ್ 2022ರಲ್ಲಿ ಅಂದಿನ ಅವಿಭಜಿತ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅಕ್ರಮ ಗಣಿಗಾರಿಕೆಯಿಂದ ಉಂಟಾದ ಪರಿಸರ ಹಾನಿಯಿಂದ ಹಾಳಾದ ಪ್ರದೇಶಗಳ ಪುನಶ್ಚೇತನಕ್ಕೆ ವಿಶೇಷ ಉದ್ದೇಶಗಳ ನಿಗಮವಾಗಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ರೂಪಿಸಿ, ನಿಗಮದ ಕೆಲಸ ಕಾರ್ಯಗಳ ಮೇಲ್ವಿಚಾರಣೆಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುದರ್ಶನ್ ರೆಡ್ಡಿ ಅವರನ್ನು ನೇಮಿಸಿತ್ತು.

ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ನಿವೃತ್ತರಾಗಿದ್ದ ವಿ. ಬಾಲಸುಬ್ರಮಣ್ಯಂ, ನಂತರ ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿಯಾಗಿದ್ದ ಜಮೀನು ಗುರುತಿಸಲು ಮತ್ತು ಹಿಂಪಡೆಯಲು ಕ್ರಮಗಳನ್ನು ಶಿಫಾರಸು ಮಾಡಲು ರಚಿಸಲಾಗಿದ್ದ ಜಂಟಿ ಸದನ ಸಮಿತಿಯ ಸಲಹೆಗಾರರಾಗಿ ನೇಮಕಗೊಂಡಿದ್ದರು. ಬಳಿಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಭೂ ಮಾಫಿಯಾಗಳು ಒತ್ತುವರಿ ಮಾಡಿಕೊಂಡಿದ್ದ ಸರ್ಕಾರಿ ಭೂಮಿಯನ್ನು ಗುರುತಿಸಿ, ಹಿಂಪಡೆಯಲು ರಚಿಸಲಾಗಿದ್ದ ಕಾರ್ಯಪಡೆಯ ಅಧ್ಯಕ್ಷರಾಗಿದ್ದರು.

ಗಣಿ ಬಾಧಿತ ಪ್ರದೇಶಗಳಲ್ಲಿ ಪರಿಸರ ಪುನಶ್ಚೇತನ ಕಾರ್ಯಗಳ ಕುರಿತು ಆಸಕ್ತಿ ಹೊಂದಿರುವವರು ಅವರನ್ನು ಇ–ಮೇಲ್ (vbalu41@gmail.com) ಅಥವಾ ಮೊಬೈಲ್ ಸಂಖ್ಯೆಯಲ್ಲಿ 9845970092 ಸಂಪರ್ಕಿಸಬಹುದು. ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಖನಿಜ ಭವನದ 2ನೇ ಮಹಡಿಯಲ್ಲಿರುವ ನಿಗಮದ ಕಚೇರಿಗೆ ಪತ್ರವನ್ನೂ ಬರೆಯಬಹುದು ಎಂದು ನಿಗಮದ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.

ಕೊಳೆಗೇರಿ ನಿವಾಸಿಗಳಿಗೆ ಮನೆ ಹಸ್ತಾಂತರ ಕಾರ್ಯಕ್ರಮದಲ್ಲಿ ಸಿ.ಎಂ ಸಿದ್ದರಾಮಯ್ಯ ದೂರು

‘ಹೆಸರಷ್ಟೇ ಪ್ರಧಾನಮಂತ್ರಿ ಆವಾಸ್...’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಡವರಿಗೆ ಸೂರು ಕಲ್ಪಿಸಲು ಇರುವ ಯೋಜನೆಗೆ ಹೆಸರು ಮಾತ್ರ ಪ್ರಧಾನಮಂತ್ರಿ ಆವಾಸ್ ಯೋಜನೆ. ₹ 1.5 ಲಕ್ಷ ಸಬ್ಸಿಡಿ ನೀಡುವ ಕೇಂದ್ರ ಸರ್ಕಾರವು ಮನೆಯ ಒಟ್ಟು ವೆಚ್ಚವಾದ ₹7.5 ಲಕ್ಷಕ್ಕೆ ಜಿಎಸ್‌ಟಿ ರೂಪದಲ್ಲಿ ₹ 1.38 ಲಕ್ಷ ವಾಪಸ್ ಪಡೆಯುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನ.ನಾಗೇನಹಳ್ಳಿಯಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ರಾಜ್ಯದ ವಿವಿಧೆಡೆ 36,789 ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಿ ಅವರು ಮಾತನಾಡಿದರು.

‘ಒಂದು ಮನೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಒಟ್ಟು ತಲಾ ₹1.5 ಲಕ್ಷದಂತೆ ಭರಿಸಿ ₹ 3 ಲಕ್ಷ ಸಬ್ಸಿಡಿ ನೀಡಲಾಗುತ್ತಿತ್ತು. ಉಳಿದ ಮೊತ್ತವನ್ನು ಫಲಾನುಭವಿಗಳೇ ಭರಿಸಬೇಕಿತ್ತು. ಆದರೆ, ಆ ಶಕ್ತಿ ಇಲ್ಲದ ಕಾರಣ ಮನೆಗಳು ನನೆಗುದಿಗೆ ಬಿದ್ದಿದ್ದವು. ವಸತಿ ಸಚಿವ ಜಮೀರ್ ಅಹಮದ್ ಖಾನ್ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದರು. ಬಡವರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಕಾರಣಕ್ಕೆ ಫಲಾನುಭವಿಗಳಿಂದ ಕೇವಲ ₹ 1 ಲಕ್ಷ ವಂತಿಗೆ ಪಾವತಿ ಮಾಡಿಸಿಕೊಂಡು ಉಳಿದ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಿದೆ ಎಂದು ವಿವರಿಸಿದರು.

‘ಒಂದು ಮನೆಗೆ ₹7.5 ಲಕ್ಷ ವೆಚ್ಚವಾಗುತ್ತದೆ. ಅದಕ್ಕೆ ಜಿಎಸ್‌ಟಿ ₹ 1.38 ಲಕ್ಷ ತೆರಬೇಕಾಗುತ್ತದೆ. ಈ ಮೊತ್ತ ಕಳೆದರೆ ಕೇಂದ್ರ ಸರ್ಕಾರವು ಒಂದು ಮನೆಗೆ ಕೇವಲ ₹12 ಸಾವಿರ ನೀಡಿದಂತಾಗುತ್ತದೆ. ಆದರೂ ಅವರೇ ಹೆಸರು ಇಟ್ಟುಕೊಂಡಿದ್ದಾರೆ, ಇಟ್ಟುಕೊಳ್ಳಲಿ. ಯಾರು ಎಷ್ಟು ನೀಡಿದ್ದಾರೆ ಎಂಬುದು ಫಲಾನುಭವಿಗಳಿಗೆ ಮಾತ್ರ ಗೊತ್ತಿರಲಿ. ಇಲ್ಲದೇ ಇದ್ದರೆ ಸುಳ್ಳನ್ನೇ ಮನೆದೇವ್ರು ಮಾಡಿಕೊಂಡಿರುವ ಬಿಜೆಪಿ ದಾರಿತಪ್ಪಿಸಲಿದೆ’ ಎಂದು ಎಚ್ಚರಿಸಿದರು.

ವಸತಿ ಸಚಿವ ಬಿ.ಜೆಡ್ ಜಮೀರ್ ಅಹಮದ್ ಖಾನ್ ಮಾತನಾಡಿ, ‘ಸಿದ್ದರಾಮಯ್ಯ ಅವರು 2013ರಿಂದ 18ರವರೆಗೆ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಮನೆಗಳನ್ನು ಮಂಜೂರು ಮಾಡಿದ್ದರು. ಆನಂತರ ಮುಖ್ಯಮಂತ್ರಿಗಳಾದ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಯಾವುದೇ ಮನೆಗಳನ್ನು ಮಂಜೂರು ಮಾಡಲಿಲ್ಲ. ನಾಲ್ಕು ವರ್ಷ ವಸತಿ ಸಚಿವರಾಗಿದ್ದ ಸೋಮಣ್ಣ ಅವರಿಗೆ ಬಡವರ ಪರ ಕಾಳಜಿ ಇದ್ದರೂ ಆಗಿನ ಮುಖ್ಯಮಂತ್ರಿಗಳು ಸ್ಪಂದಿಸಲಿಲ್ಲ’ ಎಂದು ಟೀಕಿಸಿದರು.

ಈ ಯೋಜನೆಯಡಿ ರಾಜ್ಯದಾದ್ಯಂತ 1,80,253 ಮನೆಗಳು ನಿರ್ಮಾಣಗೊಳ್ಳುತ್ತಿವೆ. ಅದರಲ್ಲಿ ಇಂದು 36,789 ಮನೆಗಳು ಉದ್ಘಾಟನೆಗೊಂಡಿವೆ. ಡಿಸೆಂಬರ್ ಒಳಗೆ ಎಲ್ಲ ಮನೆಗಳು ಪೂರ್ಣಗೊಳ್ಳಲಿವೆ ಎಂದರು.

ಜಮೀರ್‌ಗೆ ಮೆಚ್ಚುಗೆ: ‘ಬಡವರಿಗೆ ಸ್ವಂತ ಮನೆ ಕನಸು ಮಾಡಿಕೊಳ್ಳಲಾಗುತ್ತಿರಲಿಲ್ಲ. ಅವರ ಆರ್ಥಿಕ ಸಂಕಷ್ಟ ನೋಡಿದ ಸಚಿವ ಜಮೀರ್, ಸರ್ಕಾರದಿಂದ ಹಣ ಕೊಡಬೇಕು ಎಂದು ಒತ್ತಡ ಹಾಕಿದರು. ಹೀಗಾಗಿ, ಫಲಾನುಭವಿಗಳ ಪಾಲನ್ನು ₹1 ಲಕ್ಷಕ್ಕೆ ಇಳಿಸಲಾಯಿತು. ಇದಕ್ಕೆ ಜಮೀರ್ ಕಾರಣ’ ಎಂದು ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸಿರುವ 36,789 ಮನೆಗಳ ಫಲಾನುಭವಿಗಳಲ್ಲಿ ಕೆಲವರಿಗೆ ಬೀಗದ ಕೀಗಳನ್ನು ಸಿದ್ದರಾಮಯ್ಯ ನೀಡಿದರು. ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಶಾಸಕ ಬೈರತಿ ಬಸವರಾಜ್, ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಸುನೀಲ್ ಕುಮಾರ್ ಶ್ಲಾಘನೆ: ಡಿಕೆಶಿ

ಗ್ಯಾರಂಟಿ ಯೋಜನೆಗಳನ್ನು ಎಲ್ಲರೂ ಶ್ಲಾಘಿಸುತ್ತಿದ್ದಾರೆ. ಮಾಜಿ ಸಚಿವರಾಗಿರುವ ಕಾರ್ಕಳ ಶಾಸಕ ಸುನೀಲ್ ಕುಮಾರ್ ಅವರು ಶ್ಲಾಘಿಸಿರುವುದು ಪತ್ರಿಕೆಗಳಲ್ಲಿ ಬಂದಿದೆ. ಗ್ಯಾರಂಟಿ ಯೋಜನೆಗಳಿಂದ ಜನರ ಬದುಕು ಸದೃಢ ಎಂಬುದಾಗಿ ಅವರು ಹೇಳಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೈರತಿ ಅಸಮಾಧಾನ: ‘ಕೇಂದ್ರ ಸರ್ಕಾರದ ಯೋಜನೆಯಾದರೂ ಎಲ್ಲಿಯೂ ಪ್ರಸ್ತಾಪಿಸಿಲ್ಲ’ ಎಂದು ಕಾರ್ಯಕ್ರಮದ ಆರಂಭದಲ್ಲಿಯೇ ಶಾಸಕ ಬೈರತಿ ಬಸವರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಮುಖ್ಯಮಂತ್ರಿಯವರಿಗೆ ಬೆಳ್ಳಿ ಕಿರೀಟ, ಬೆಳ್ಳಿ ಗದೆ ನೀಡಿ ಗೌರವ
- ಬಡವರ ಮನೆ ಪೂರ್ಣಗೊಳಿಸಲು ₹ 500 ಕೋಟಿ ಬಿಡುಗಡೆ: ಸಿಎಂ

ಭೂ ಗುತ್ತಿಗೆ ಕಾನೂನಿಗೆ ಶಿಫಾರಸು

ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದಿಂದ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 21 ಲಕ್ಷ ಹೆಕ್ಟೇರ್ ಪಾಳು ಭೂಮಿಯನ್ನು ಉಳುಮೆಗೆ ಬಳಸಿಕೊಳ್ಳಲು ಅನುಕೂಲವಾಗುವಂತೆ ‘ಭೂ ಗುತ್ತಿಗೆ ಕಾನೂನು’ ಜಾರಿಗೊಳಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಶಿಫಾರಸು ಮಾಡಿದೆ.

ಆಯೋಗ ತನ್ನ 7ನೇ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶನಿವಾರ ಸಲ್ಲಿಸಿತು.

ಕೃಷಿ ಭೂಮಿಯನ್ನು ಕೃಷಿ ಉದ್ದೇಶಗಳಿಗೆ ಗುತ್ತಿಗೆ ನೀಡುವುದನ್ನು ಕರ್ನಾಟಕ ಭೂ ಸುಧಾರಣಾ ಕಾಯ್ದೆ–1961 ನಿರ್ಬಂಧಿಸುತ್ತದೆ. ಹಿಡುವಳಿದಾರರನ್ನು ಒಕ್ಕಲೆಬ್ಬಿಸುವುದರ ವಿರುದ್ಧ ರಕ್ಷಣೆ ನೀಡುತ್ತದೆ. ಇದು ಉತ್ತಮ ಕಾನೂನಾದರೂ ಕೃಷಿ ಕ್ಷೇತ್ರದ ಹೂಡಿಕೆಗೆ ಅಡ್ಡಿಯಾಗಿದೆ. ಕೃಷಿ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಗೇಣಿದಾರ ರೈತರು ಕೃಷಿ ಭೂಮಿಯ ಮೇಲೆ ಹಕ್ಕುಗಳನ್ನು ಪಡೆಯುತ್ತಾರೆ ಎಂಬ ಕಾರಣದಿಂದ ಬಹುತೇಕ ಭೂ ಮಾಲೀಕರು ಗುತ್ತಿಗೆ ನೀಡದೇ ಭೂಮಿಯನ್ನು ಪಾಳು ಬಿಟ್ಟಿದ್ದಾರೆ. ಇದರಿಂದ ವಾರ್ಷಿಕ ₹8 ಸಾವಿರ ಕೋಟಿ ಬೆಳೆ ನಷ್ಟವಾಗುತ್ತಿದೆ ಎಂದು ಮಾಹಿತಿ ನೀಡಿದೆ.

‘ಕರ್ನಾಟಕ ಬೆಳೆ ಉತ್ಪಾದನೆ ಮತ್ತು ಭೂ ಪುನಶ್ಚೇತನ ಮಸೂದೆ’ಯನ್ನು ಕಂದಾಯ ಇಲಾಖೆ ಸಿದ್ಧಪಡಿಸಿ, ಹೊಸ ಭೂ ಗುತ್ತಿಗೆ ಕಾನೂನು ಜಾರಿಗೊಳಿಸಿದರೆ ಭೂ ಮಾಲೀಕರ ಒಪ್ಪಂದಕ್ಕೆ ಒಳಪಟ್ಟು ಪಾಳು ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸಬಹುದು. ಇದು ಸಮಾಜದ ದುರ್ಬಲ ವರ್ಗಗಳಲ್ಲಿ ಭೂ ಬಳಕೆಯ ಬದಲಾವಣೆಗೆ ದಾರಿಯಾಗುತ್ತದೆ. ಆಹಾರ ಉತ್ಪಾದನೆಯಲ್ಲೂ ಗಣನೀಯ ಹೆಚ್ಚಳವಾಗುತ್ತದೆ ಎಂದಿದೆ.

ಇ–ಆಫೀಸ್ ಬಳಕೆಯಿಂದ ಅಬಕಾರಿ ಇಲಾಖೆಯಲ್ಲಿ ವ್ಯರ್ಥವಾಗುತ್ತಿರುವ ದ್ವಿತೀಯ, ಪ್ರಥಮ ದರ್ಜೆ ಸಹಾಯಕರನ್ನು ಅಬಕಾರಿ ಕಾನ್‌ಸ್ಟೆಬಲ್‌ಗಳಾಗಿ ಪರಿವರ್ತಿಸಬೇಕು, ಕುಟುಂಬ ಕಲ್ಯಾಣ ವಂತಿಗೆಯನ್ನು ತಿಂಗಳಿಗೆ ₹1 ಸಾವಿರ ನಿಗದಿ ಮಾಡಬೇಕು. ವಿಳಂಬವಾಗುವ ಜನನ–ಮರಣ ಪ್ರಮಾಣಪತ್ರ ನೀಡುವ ಹೊಣೆಗಾರಿಕೆ ಆರೋಗ್ಯ ಇಲಾಖೆ, ಯೋಜನಾ ಇಲಾಖೆಗೆ ವಹಿಸಬೇಕು. ಗಡಿನಾಡು ಅಭಿವೃದ್ಧಿ ಪ್ರಾಧಿಕಾರವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯೋಜನಾ ಇಲಾಖೆಗೆ ವರ್ಗಾಯಿಸಬೇಕು. ಸ್ಥಳೀಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಗ್ರಾಮ ಪಂಚಾಯಿತಿ ಮತ್ತು ಪುರಸಭೆ ಪರಂಪರೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳನ್ನು ರಚಿಸಬೇಕು ಎಂದು ಶಿಫಾರಸು ಮಾಡಿದೆ.

ಸರ್ಕಾರಿ ಸೇವೆಗೂ ‘ತತ್ಕಾಲ್’

ಮಧ್ಯವರ್ತಿಗಳ ಮೂಲಕ ಸರ್ಕಾರಿ ಕೆಲಸಗಳು ತ್ವರಿತವಾಗಿ ನಡೆಯುತ್ತಿರುವ ಅಂಶವನ್ನು ಪತ್ತೆ ಹಚ್ಚಿರುವ ಆಯೋಗ, ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಲು, ಸರ್ಕಾರದ ಖಜಾನೆಗೆ ಹೆಚ್ಚಿನ ಆದಾಯ ದೊರಕಿಸಲು ‘ತತ್ಕಾಲ್ ಸೇವೆ’ ಆರಂಭಿಸುವಂತೆ ಸಲಹೆ ನೀಡಿದೆ. ಸಕಾಲ ಯೋಜನೆಯ ಅಡಿ ನೀಡುತ್ತಿರುವ ಕಾಲಮಿತಿ ಸೇವೆಗೂ ಮೊದಲು ಕೆಲಸ ಪೂರ್ಣಗೊಳಿಸಲು ಬಯಸುವ ಸಾರ್ವಜನಿಕರು ಹೆಚ್ಚುವರಿ ಶುಲ್ಕ ಪಾವತಿಸಿ, ಒಂದೆರಡು ದಿನಗಳಲ್ಲಿ ಈ ಸೇವೆ ಪಡೆಯಬಹುದು. ಸಕಾಲ ಸೇವೆಯ ವಿಳಂಬಕ್ಕೆ ನಿಗದಿ ಮಾಡಿರುವ ದಂಡದ ಪ್ರಮಾಣವನ್ನು ₹25 ಸಾವಿರದವರೆಗೂ ನಿಗದಿ ಮಾಡಲು ಆಯೋಗ ಶಿಫಾರಸು ಮಾಡಿದೆ.

ಪ್ರಮುಖ ಶಿಫಾರಸುಗಳು

- ಹೊರಗುತ್ತಿಗೆ ನೌಕರರಿಗೂ 5 ವರ್ಷಕ್ಕೊಮ್ಮೆ ವರ್ಗಾವಣೆ
- ಹೊಸದಾಗಿ ನೇಮಕಾತಿ ಹೊಂದಿದವರಿಗೆ 30 ದಿನಗಳ ತರಬೇತಿ
- ಬಡ್ತಿ ಪಡೆದವರಿಗೆ ಒಂದು ವಾರದ ತರಬೇತಿ
- ಬೆರಳಚ್ಚುಗಾರರ ಹುದ್ದೆಗಳ ರದ್ದತಿ
- ಎಲ್ಲ ಇಲಾಖೆಗಳ ಕಚೇರಿ ಪತ್ರಗಳು, ಪ್ರಸ್ತಾವಕ್ಕೆ ಇ–ಆಫೀಸ್ ಬಳಕೆ ಕಡ್ಡಾಯ
- ನೇಮಕಾತಿ ವಿಳಂಬ ತಪ್ಪಿಸಲು ಸಿಂಧುತ್ವ ಪ್ರಮಾಣಪತ್ರಕ್ಕೆ ತಿಲಾಂಜಲಿ
- ಕಂದಾಯ, ಶಿಕ್ಷಣ ಇಲಾಖೆ ದತ್ತಾಂಶ ಬಳಸಿಕೊಂಡು ಕೆಪಿಎಸ್‌ಸಿಯಿಂದ ಅಭ್ಯರ್ಥಿಗಳ ದಾಖಲೆ ಪರಿಶೀಲನೆ

‘ಕುಮಾರಸ್ವಾಮಿ ಬಿಜೆಪಿ ವಕ್ತಾರ’

ಚನ್ನಪಟ್ಟಣ (ರಾಮನಗರ): ‘ಬಿಜೆಪಿ ಜೊತೆ ಮೈತ್ರಿಯಾದ ಬಳಿಕ ಕುಮಾರಸ್ವಾಮಿ ತಮ್ಮ ಪಕ್ಷಕ್ಕಿಂತ ಬಿಜೆಪಿ ಬಗ್ಗೆಯೇ ಹೆಚ್ಚು ಮಾತನಾಡುತ್ತಿದ್ದಾರೆ. ಕುಮಾರಸ್ವಾಮಿ ಅವರನ್ನು ಬಿಜೆಪಿಯವರು ತಮ್ಮ ಪಕ್ಷದ ವಕ್ತಾರರನ್ನಾಗಿ ನೇಮಕ ಮಾಡಿಕೊಂಡಿದ್ದಾರೆ. ಜೆಡಿಎಸ್ ಈಗ ಅಸ್ತಿತ್ವದಲ್ಲಿ ಇಲ್ಲದಂತಾಗಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದ್ದಾರೆ.

ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದ ಬಳಿಕ ಮಾತನಾಡಿದ ಅವರು, ತೆನೆ ಹೊತ್ತ ಮಹಿಳೆ ಹೊರೆ ಇಳಿಸಿರುವ ಬಿಜೆಪಿಯವರು ಕಮಲದ ಹೂವು ಮುಡಿಸಿದ್ದಾರೆ ಎಂದರು. ‘ಮೋದಿಯನ್ನು ಮತ್ತೆ ಪ್ರಧಾನಿ ಮಾಡೋಣ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರೆಯೇ ಹೊರತು ಜೆಡಿಎಸ್ ಬಲಪಡಿಸುವ ಬಗ್ಗೆ ಮಾತನಾಡುತ್ತಿಲ್ಲ. ಲೋಕಸಭಾ ಚುನಾವಣೆ ಬಳಿಕ ಗೌಡರು ಕಷ್ಟಪಟ್ಟು ಕಟ್ಟಿದ ಪಕ್ಷದ ಸ್ಥಿತಿ ಏನಾಗುತ್ತದೆ ಎಂದು ನೆನಪಿಸಿಕೊಂಡರೆ ನನಗೂ ನೋವಾಗುತ್ತದೆ’ ಎಂದರು.

ನಟ–ನಿರ್ಮಾಪಕ ಒಂದಾಗಿದ್ದಾರೆ: ಈಗ ನಟ ಮತ್ತು ನಿರ್ಮಾಪಕ ಒಂದಾಗಿದ್ದಾರೆ. ಇಬ್ಬರೂ ಚೆನ್ನಾಗಿರಲಿ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಮತ್ತು ಕುಮಾರಸ್ವಾಮಿ ಹೆಸರು ಪ್ರಸ್ತಾಪಿಸಿದೆ ವಾಗ್ದಾಳಿ ನಡೆಸಿದರು.

‘ಸ್ಥಳೀಯರಿಗೆ ಟಿಕೆಟ್ ಕೊಡಿ’

ಉಡುಪಿ: ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ಸ್ಥಳೀಯ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿ ಮೀನುಗಾರ ಸಮುದಾಯದ ಮುಖಂಡರು ಶನಿವಾರ ಮಲ್ಪೆಯಿಂದ ಬಿಜೆಪಿ ಉಡುಪಿ ಜಿಲ್ಲಾ ಕಚೇರಿವರೆಗೆ ಬೈಕ್ ರ‍್ಯಾಲಿ ನಡೆಸಿದರು.

‘ಕ್ಷೇತ್ರದಲ್ಲಿ ಶೋಭಾ ಕರಂದ್ಲಾಜೆ ಅವರನ್ನು ಎರಡು ಬಾರಿ ಗೆಲ್ಲಿಸಿದ್ದೇವೆ. ಮತ್ತೊಮ್ಮೆ ಅವರಿಗೆ ಅವಕಾಶ ಕೊಡುವುದು ಬೇಡ, ಸ್ಥಳೀಯ ಅಭ್ಯರ್ಥಿ ಪ್ರಮೋದ್ ಮಧ್ವರಾಜ್ ಅವರಿಗೆ ಟಿಕೆಟ್ ನೀಡಬೇಕು’ ಎಂದು ಮೀನುಗಾರರು ಒತ್ತಾಯಿಸಿದರು.

ನೂರಾರು ಮೀನುಗಾರರು ಸಹಿ ಮಾಡಿದ ಮನವಿಯನ್ನು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಕಿಶೋರ್ ಕುಂದಾಪುರ ಅವರಿಗೆ ಸಲ್ಲಿಸಲಾಯಿತು. ಮನವಿಯನ್ನು ಪಕ್ಷದ ವರಿಷ್ಠರಿಗೆ ತಲುಪಿಸುವುದಾಗಿ ಜಿಲ್ಲಾಧ್ಯಕ್ಷರು ಭರವಸೆ ನೀಡಿದರು.

ಸುಧಾ, ಮಯೂರ ಓದಿರಿ

ಧರ್ಮಗುರು ವಿರುದ್ಧ ಎಫ್‌ಐಆರ್

ವಿಟ್ಲ (ದಕ್ಷಿಣ ಕನ್ನಡ): ಪುಣಚ ಗ್ರಾಮದ ಪರಿಯಾಲ್ತಡ್ಕ ಸಮೀಪದ ಮನೇಲ ಚರ್ಚ್‌ನ ಧರ್ಮಗುರು ತಮ್ಮದೇ ಸಮುದಾಯದ ವೃದ್ಧ ದಂಪತಿ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೊ ಜಾಲತಾಣ ಗಳಲ್ಲಿ ಹರಿದಾಡಿದ್ದು, ಈ ವಿಚಾರಕ್ಕೆ ಸಂಬಂಧಿಸಿ ಚರ್ಚ್‌ನ ಧರ್ಮಗುರು ಮತ್ತು ಮತ್ತೊಬ್ಬ ವ್ಯಕ್ತಿಯ ವಿರುದ್ಧ ವಿಟ್ಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕ್ರೈಸ್ಟ್ ಕಿಂಗ್ ಪ್ಯಾರಿಷ್‌ನ ಧರ್ಮ ಗುರು ನೆಲ್ಸನ್ ಒಲಿವೆರಾ ಮತ್ತು ಕಾರು ಚಾಲಕ ಅಲ್ಫಾನ್ಸ್ ಮೊಂತೆರೊ ವಿರುದ್ಧ ಪುಣಚ ಗ್ರಾಮದ ಎರ್ಮೆತ್ತಡ್ಕ ನಿವಾಸಿ ಗ್ರೆಗರಿ ಮೊಂತೆರೊ (79) ನೀಡಿದ ದೂರಿನಂತೆ ಮಾನಭಂಗ ಯತ್ನ ಹಾಗೂ ಹಲ್ಲೆ ಪ್ರಕರಣ ದಾಖಲಾಗಿದೆ. ಫೆ.29ರಂದು ಘಟನೆ ನಡೆದಿದ್ದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದೃಶ್ಯ ದಾಖಲಾಗಿತ್ತು. ಗ್ರೆಗರಿ ಅವರ ಕುತ್ತಿಗೆ ಪಟ್ಟಿ ಹಿಡಿದು ಎಳೆದೊಯ್ದು ಹಲ್ಲೆ ನಡೆಸಿರುವುದು ವಿಡಿಯೊದಲ್ಲಿ ದಾಖಲಾಗಿದೆ.

‘ಗ್ರೆಗರಿ ಮೊಂತೆರೊ ದಂಪತಿ ಮನೆಗೆ ನೆಲ್ಸನ್ ಒಲಿವೆರಾ, ಮನೆ ಶುದ್ಧಿ ನಿಮಿತ್ತ ತೆರಳಿದ್ದರು. ಚರ್ಚ್‌ಗೆ ಯಾವುದೇ ದೇಣಿಗೆ ನೀಡಿ ಸಹಕರಿಸುತ್ತಿಲ್ಲ ಎಂಬ ಕಾರಣಕ್ಕೆ ಅವರು ವೃದ್ಧ ದಂಪತಿಯನ್ನು ಅವಾಚ್ಯವಾಗಿ ನಿಂದಿಸಿ, ಹೊಡೆದಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಧರ್ಮಗುರು ಅಮಾನತು: ಘಟನೆ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದಂತೆಯೇ ಧರ್ಮಗುರು ನೆಲ್ಸನ್ ಒಲಿವೆರಾ ಅವರನ್ನು ಹುದ್ದೆಯಿಂದ ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯವು ತೆಗೆದು ಹಾಕಿದೆ.

‘ಘಟನೆಯಿಂದ ನೋವುಂಟಾಗಿದೆ. ತನಿಖೆಗೆ ಸಹಕರಿಸುತ್ತೇವೆ. ಧರ್ಮಪ್ರಾಂತ್ಯದಿಂದಲೂ ನ್ಯಾಯಯುತ ವಿಚಾರಣೆ ನಡೆಸುತ್ತೇವೆ. ತುರ್ತು ಕ್ರಮವಾಗಿ ಸಂಬಂಧಪಟ್ಟ ಧರ್ಮಗುರುವನ್ನು ಮನೇಲದ ಕ್ರೈಸ್ಟ್ ಕಿಂಗ್ ಚರ್ಚ್‌ನಿಂದ ತೆಗೆದು ಹಾಕುತ್ತೇವೆ. ಅಲ್ಲಿನ ಜನರ ಆಧ್ಯಾತ್ಮಿಕ ಅಗತ್ಯ ಪೂರೈಸಲು ಬೇರೊಬ್ಬರನ್ನು ನಿಯೋಜಿಸುತ್ತೇವೆ’ ಎಂದು ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯವು ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯಾರ್ಥಿ–ಶಿಕ್ಷಕ ಸ್ನೇಹಿ ಪಠ್ಯ ಸಿದ್ಧ

ಒಂದನೇ ಪುಟದಿಂದ...

ಮಕ್ಕಳ ಸುಲಭ ಹಾಗೂ ಪರಿಣಾಮಕಾರಿ ಕಲಿಕೆಗೆ ಸಹಾಯವಾಗುವಂತೆ ದೀರ್ಘ ಪಾಠಗಳಿಗೆ ಕತ್ತರಿ ಹಾಕಿದ್ದು, ಒಂದು ವಿಷಯದ ಒಟ್ಟು ಬೋಧನಾ ಅವಧಿಗೆ ಪೂರಕವಾಗಿ ಪಾಠಗಳನ್ನು ಮಿತಿಗೊಳಿಸಿದೆ. ಆ ಮೂಲಕ ಪ್ರತಿ ವಿಷಯದ ಸರಾಸರಿ ಬೋಧನಾ ಅವಧಿಯನ್ನು 15 ಗಂಟೆಗಳಷ್ಟು ಇಳಿಕೆ ಮಾಡಿದೆ. ಇಳಿಕೆಯಾದ ಅವಧಿಯನ್ನು ಮಕ್ಕಳ ಜತೆ ಸಮಾಲೋಚನೆ, ಸಂವಾದ, ಪುನರ್‌ಮನನ ತರಗತಿಗಳಿಗೆ ಬಳಸಿಕೊಳ್ಳಲು ಶಿಫಾರಸು ಮಾಡಿದೆ. ಒಂದು ತರಗತಿಯಿಂದ ಮತ್ತೊಂದು ತರಗತಿಗೆ ಇರುವ ಪಠ್ಯ ವಿಷಯಗಳ ಪುನರಾವರ್ತನೆಗೂ ತಡೆ ಹಾಕಿದೆ. ಪ್ರತಿ ವಿಷಯದಲ್ಲೂ ಮಕ್ಕಳ ಗ್ರಹಿಕಾ ಸಾಮರ್ಥ್ಯ ಹೆಚ್ಚಿಸಲು ಪರೀಕ್ಷೆಗಳಿಗೆ ಹೊರತಾದ ಪೂರಕ ಗದ್ಯ, ಪದ್ಯಗಳನ್ನು ಅಳವಡಿಸಿದೆ.

ಕನ್ನಡ ಭಾಷಾ ವಿಷಯದಲ್ಲಿ ಪ್ರಸಿದ್ಧ ಕವಿಗಳ ಅರ್ಥಪೂರ್ಣ ಪದ್ಯಗಳ ಜತೆಗೆ, ವ್ಯಾಕರಣಗಳು ಒಂದೇ ಕಡೆ ಇರುವಂತೆ, ತರಗತಿಯಿಂದ ತರಗತಿಗೆ ಮುಂದುವರಿಕೆಯಾಗುವಂತೆ ಅಳವಡಿಸಲಾಗಿದೆ. ಸಮಾಜ ವಿಜ್ಞಾನದಲ್ಲಿನ ವರ್ಗೀಕರಣದ ಬಹುಹಂತಗಳನ್ನು ಕಡಿತ ಮಾಡಲಾಗಿದೆ.

ಪಠ್ಯಪುಸ್ತಕ ವಿಳಂಬವಾಗದು

ಶಾಲಾ ಮಕ್ಕಳ ಬ್ಯಾಗ್ ಹೊರೆ ತಗ್ಗಿಸುವುದಕ್ಕಾಗಿ ಪ್ರತಿ ಪಠ್ಯಪುಸ್ತಕವನ್ನೂ ಎರಡು ಭಾಗಗಳಾಗಿ ವಿಂಗಡಿಸಿ, ಮುದ್ರಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿತ್ತು. ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ ತನ್ನ ಮಧ್ಯಂತರ ವರದಿಯ ಜತೆಗೇ, ಮೊದಲ ಕರಡು ಪ್ರತಿ ನೀಡಿತ್ತು. ಇದರಿಂದ ಸೆಮಿಸ್ಟರ್–1 ಪಠ್ಯಗಳು ಈಗಾಗಲೇ ಸಿದ್ಧವಾಗಿವೆ. ಅಂತಿಮ ಕರಡು ಪ್ರತಿ ನೀಡಿದ ನಂತರ ಸೆಮಿಸ್ಟರ್–2 ಪಠ್ಯಗಳು ಸಿದ್ಧವಾಗಲಿವೆ. ಹಾಗಾಗಿ, 2024–25ನೇ ಶೈಕ್ಷಣಿಕ ವರ್ಷದ ಆರಂಭಕ್ಕೂ ಮೊದಲೇ ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಕೈಸೇರಲಿವೆ ಎನ್ನುತ್ತಾರೆ ಮಂಜುನಾಥ ಹೆಗಡೆ.



ಮಂಜುನಾಥ ಜಿ. ಹೆಗಡೆ

ಸಮಿತಿ ಆಯ್ಕೆ ಮಾಡಿರುವ ಪಾಠ, ಪರಿಷ್ಕರಿಸಿದ ಗದ್ಯಗಳನ್ನು ಅನುಭವಿ, ಕ್ರಿಯಾಶೀಲ ಶಿಕ್ಷಕರಿರುವ ಶಾಲೆಗಳಲ್ಲಿ ಪ್ರಯೋಗಕ್ಕೆ ಒಳಪಡಿಸಲಾಗಿದೆ. ಅಭಿಪ್ರಾಯ ಸಂಗ್ರಹಣೆಯ ನಂತರ ಅಂತಿಮ ಕರಡು ಸಿದ್ಧಪಡಿಸಲಾಗಿದೆ.

ಮಂಜುನಾಥ ಜಿ. ಹೆಗಡೆ, ಸಂಯೋಜಕ, ರಾಜ್ಯ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ

ಬಡವರ ವ್ಯಾಜ್ಯ ತ್ವರಿತ ಇತ್ಯರ್ಥ ಕಾನೂನು ಜಾರಿ ನಾಳೆಯಿಂದ

ಗದಗ: ‘ಸಣ್ಣ ರೈತರು, ಆರ್ಥಿಕವಾಗಿ ದುರ್ಬಲರಾದವರು ದಾಖಲಿಸಿರುವ ವ್ಯಾಜ್ಯಗಳನ್ನು ದಿನದ ವಿಚಾರಣಾ ಪಟ್ಟಿಯಲ್ಲಿ ಆದ್ಯತೆ ಮೇಲೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ ‘ಸಿವಿಲ್ ಪ್ರಕ್ರಿಯೆ ಸಂಹಿತೆ (ಕರ್ನಾಟಕ ತಿದ್ದುಪಡಿ) ಮಸೂದೆ–2023’ಕ್ಕೆ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ. ಈ ಕಾನೂನು ಮಾ. 4ರಿಂದ ರಾಜ್ಯದಲ್ಲಿ ಜಾರಿಗೆ ಬರಲಿದೆ’ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

‘ಮಸೂದೆಯು ವಿಧಾನ ಪರಿಷತ್, ವಿಧಾನಸಭೆಯಲ್ಲಿ ಅಂಗೀಕಾರವಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ರಾಜ್ಯಪಾಲರು ರಾಷ್ಟ್ರಪತಿಯವರ ಅಂಕಿತಕ್ಕೆ ಕಳುಹಿಸಿದ್ದರು. ಫೆಬ್ರುವರಿ 18ರಂದು ರಾಷ್ಟ್ರಪತಿಯವರು ಮಸೂದೆಗೆ ಅಂಕಿತ ಹಾಕಿದ್ದು, ಸರ್ಕಾರ ರಾಜ್ಯಪತ್ರದಲ್ಲಿ ಫೆಬ್ರುವರಿ 29ರಂದು ಮಸೂದೆ ಜಾರಿಗೆ ಬರುವಂತೆ ಗೆಜೆಟ್ ನೋಟಿಫಿಕೇಶನ್ ಜಾರಿ ಮಾಡಿದೆ’ ಎಂದು ಅವರು ತಿಳಿಸಿದ್ದಾರೆ.

‘750 ಹುದ್ದೆ ಭರ್ತಿಗೆ ಕ್ರಮ’

ಬೆಂಗಳೂರು: ‘ಇಲಾಖೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಖಾಲಿ ಇರುವ 750 (100 ಕೃಷಿ ಅಧಿಕಾರಿಗಳು ಮತ್ತು 650 ಸಹಾಯಕ ಕೃಷಿ ಅಧಿಕಾರಿಗಳು) ಹುದ್ದೆಗಳನ್ನು ಭರ್ತಿ ಮಾಡಲಾಗುವುದು’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ ‘**ಪಿವಿ ಬ್ರ್ಯಾಂಡ್ ಸ್ಪಾಟ್**’ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಇಂದು ಪಲ್ಸ್ ಪೋಲಿಯೊ 62.85 ಲಕ್ಷ ಮಕ್ಕಳಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಭಾನುವಾರ (ಮಾ.3) ಪಲ್ಸ್ ಪೋಲಿಯೊ ಹನಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, 5 ವರ್ಷದೊಳಗಿನ 62.85 ಲಕ್ಷ ಮಕ್ಕಳನ್ನು ತಲುಪುವ ಗುರಿ ಹಾಕಿಕೊಂಡಿದೆ.

ದೇಶವು ಪೋಲಿಯೊ ಮುಕ್ತ ರಾಷ್ಟ್ರವಾಗಿದೆ. ಇದು ಮಹತ್ತರವಾದ ಸಾಧನೆಯಾದರೂ ಈ ಸಮಸ್ಯೆ ಜಗತ್ತಿನ ವಿವಿಧೆಡೆ ಮಕ್ಕಳನ್ನು ಬಾಧಿಸುತ್ತಿದೆ. ಇದು ಭಾರತದ ಆತಂಕಕ್ಕೆ ಕಾರಣವಾಗಿದೆ. ವೈದ್ಯಕೀಯ ತಜ್ಞರ ಶಿಫಾರಸಿನ ಅನ್ವಯ ದೇಶದಲ್ಲಿ ಐದು ವರ್ಷದೊಳಗಿನ ಎಲ್ಲ ಮಕ್ಕಳಿಗೂ ಪಲ್ಸ್ ಪೋಲಿಯೊ ಹನಿ ಹಾಕಲಾಗುತ್ತಿದೆ. ರಾಜ್ಯದಲ್ಲಿ ಪೋಲಿಯೊ ಹನಿ ವಿತರಣೆಗೆ 33,712 ಬೂತ್‌ಗಳನ್ನು ಗುರುತಿಸಲಾಗಿದೆ. 963 ಸಂಚಾರಿ ತಂಡಗಳು ರೈಲು ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಲಸಿಕೆ ವಿತರಿಸಲಿವೆ. ಈ ಕಾರ್ಯಕ್ರಮಕ್ಕೆ 1.11 ಲಕ್ಷ ಕಾರ್ಯಕರ್ತರನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಇಲಾಖೆ ತಿಳಿಸಿದೆ.

ಐದು ವರ್ಷದೊಳಗಿನ ಎಲ್ಲ ಮಕ್ಕಳೂ ಲಸಿಕೆ ಪಡೆದುಕೊಳ್ಳಬೇಕು. ಈ ಲಸಿಕೆಯು ಸಂಪೂರ್ಣ ಸುರಕ್ಷಿತವಾಗಿದ್ದು, ವದಂತಿಗಳಿಗೆ ಕಿವಿಗೊಡಬಾರದು. ಪೋಲಿಯೊ ವಿರುದ್ಧದ ಹೋರಾಟದಲ್ಲಿ ವಿಜಯ ಸಾಧಿಸುವುದನ್ನು ಮುಂದುವರಿಸಲು ಕೈಜೋಡಿಸಬೇಕು. ರಾಜ್ಯದ ಎಲ್ಲ ಆಸ್ಪತ್ರೆಗಳು, ರೈಲು ನಿಲ್ದಾಣ, ಮೆಟ್ರೊ ನಿಲ್ದಾಣ, ವಿಮಾನ ನಿಲ್ದಾಣ, ಗ್ರಾಮೀಣ ಪ್ರದೇಶ, ಗುಡ್ಡಗಾಡು ಪ್ರದೇಶ ಸೇರಿದಂತೆ ವಿವಿಧೆಡೆ ಲಸಿಕೆ ಹಾಕಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದೆ.

ಹೆಚ್ಚಿನ ಮಾಹಿತಿಗೆ ಹತ್ತಿರದ ಆರೋಗ್ಯ ಕೇಂದ್ರವನ್ನು ಭೇಟಿ ಮಾಡಬಹುದು ಅಥವಾ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಬಹುದು. ಹತ್ತಿರದ ಪೋಲಿಯೊ ಬೂತ್‌ಗಳನ್ನು ಗುರುತಿಸಲು ‘Nearby Vaccination Centre Karnataka’ ಆ್ಯಂಡ್ರಾಯ್ಡ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಜನನ 27-11-1948

ಮರಣ 01-03-2024

ಶ್ರೀ. ಎಂ. ಎಸ್. ಪರಮಶಿವಪ್ಪ

ನಿರ್ದೇಶಕರು - ಅರ್ಬನ್ ಸ್ಪೇಸ್ ಪ್ರಾಜೆಕ್ಟ್ಸ್ ಪ್ರೈ. ಲಿಮಿಟೆಡ್.
ಶುಕ್ರವಾರ 01-03-2024 ರಂದು ನಿಧನರಾದರು.
ಅಂತ್ಯಕ್ರಿಯೆಯು ಇಂದು ಮಧ್ಯಾಹ್ನ 12:30ಕ್ಕೆ
ಹಾಸನ ಜಿಲ್ಲೆಯ ಆಲೂರಿನಲ್ಲಿರುವ ಅವರ ತೋಟದಲ್ಲಿ ನಡೆಯಲಿದೆ.
Mobile: 99804 06702 / 98450 45671

ದುಃಖತಪ್ತರಾದ ಇವರಿಂದ ಸಂತಾಪ:
ಶ್ರೀಮತಿ ಮೀನಾಕ್ಷಿ, ಶ್ರೀಮತಿ ನಮಿತಾ, ಶರತ್, ನಿಹೀರ, ಸಮೈರ
ಶ್ರೀಮತಿ. ಶೈಲಜಾ ನಾಗೇಂದ್ರ, ಎಂ. ಎಸ್. ನಟರಾಜ್, ಶ್ರೀಮತಿ ಜ್ಯೋತಿ ನಟರಾಜ್,
ಸಿದ್ದೇಶ್ ನಾಗೇಂದ್ರ, ಶರಣ್ ನಾಗೇಂದ್ರ, ಹೇಮಂತ್ ಮತ್ತು ಕುಟುಂಬದ ಎಲ್ಲಾ ಸದಸ್ಯರು;
ರತೀಶ್ ನಂಬಿಯಾರ್ ಮತ್ತು ಸಹೋದರರು, ಎಂ. ಎಸ್. ಡಿ. ಗ್ರೂಪ್, ಶ್ರೀದೇವಿ ಎಂಟರ್‌ಪ್ರೈಸಸ್,
ಅರ್ಬನ್ ಸ್ಪೇಸ್ ಪ್ರಾಜೆಕ್ಟ್ಸ್ ಪ್ರೈ. ಲಿಮಿಟೆಡ್, ನಂಬಿಯಾರ್ ಬಿಲ್ಡರ್ಸ್ ಪ್ರೈ. ಲಿಮಿಟೆಡ್.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಲೋಕಲ್ ನಲ್ಲಿ ಮತ್ತು ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ (Minimum 5 Years Experience) ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9343775016/ 9886683188

General

ಕನ್ನಡ ಟೆಲಿಕಾಲರ್‌ಗಳು ಬೇಕು. (ತಾಜಾ/ ಅನುಭವಿ)ಸ್ಥಳ: ಮಲ್ಲೇಶ್ವರಂ, ಬೆಂಗಳೂರುಸಂಬಳ (ಮಾಸಿಕ ರೂ. 15000/-), ಕೆಲಸದ ಸಮಯ : ಮಧ್ಯಾಹ್ನ 2:00 ರಿಂದ ರಾತ್ರಿ 8:30, ಆಸಕ್ತರು 7669250202 ಗೆ ಮಿಸ್ಡ್ ಕಾಲ್ ನೀಡಿ

ಎಸ್ಟೇಟ್ ಮ್ಯಾನೇಜರ್ BSC ಅಗ್ರಿ ಅಥವಾ ಕೃಷಿಯಲ್ಲಿ ಯಾವುದೇ ಆಸಕ್ತಿಯುಳ್ಳ ವ್ಯಕ್ತಿ/ಕುಟುಂಬ ಹೊಸದುರ್ಗ 20000 ತಿಂಗಳಿಗೆ ನೆಗೋಶಬಲ್ 9945479966

WANTED FEMALE TELECALLERS
JOB LOCATION @ HALASURU - INDIRA NAGAR BENGALURU
NEAR : HALASURU METRO
PART TIME (10AM - 3PM)
SALARY ₹15,000/- PM
Near Murphy Town Market
99430 46899

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ಸ್ ಬೇಕಾಗಿದ್ದಾರೆ, ಬೆಂಗಳೂರಿನಲ್ಲಿ ಸಂಬಳ: 15,000+ ಊಟ+ ವಸತಿ. ಸಮಯ: ಬೆಳಿಗ್ಗೆ: 8ರಿಂದ ಸಂಜೆ: 8. ಸಂಪರ್ಕಿಸಿ: 8050666007 / 9880266007

ಕರ್ನಾಟಕದಲ್ಲಿ ಬ್ಯಾಂಕ್ ಗಳಿಗೆ ಗೋಲ್ಡ್ ಅಪ್ರೈಸರ್ ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ (15 25 ಸಾವಿರ ರೂ) ಅನುಭವೀ ಅಪ್ರೈಸರ್ ಗಳು ಸಂಪರ್ಕಿಸಿ 9591621718/ 99643 90467

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000. ಮೊದಲು ಬಂದವರಿಗೆ ಆದ್ಯತೆ. 8861041526, 9945791526

Multiple Vacancy

REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ಕಾಶಿ ದೆಹಲಿ ಆಗ್ರಾ,ಮಥುರ ಅಲಹಾಬಾದ್ ಅಯೋಧ್ಯ,ಗಯಾ ಬುದ್ಧಗಯಾ 27.03.2024 10 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್, ಮಲ್ಲೇಶ್ವರಂ, ಬೆಂಗಳೂರು. 9448294477

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕಾಯಂ ವೈದ್ಯರ ಹುದ್ದೆಗಳು ಖಾಲಿ

ನೆಫ್ರೊ ಯುರಾಲಜಿ: ನಿರ್ದೇಶಕರು, ವೈದ್ಯಕೀಯ ಅಧೀಕ್ಷಕರ ಹುದ್ದೆಗಳಿಗೂ ಪ್ರಭಾರ ನೇಮಕ

• ವರುಣ ಹೆಗಡೆ

ಬೆಂಗಳೂರು: ಮೂತ್ರಪಿಂಡ ಮತ್ತು ಮೂತ್ರಕೋಶ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವಲ್ಲಿ ಮುಂಚೂಣಿಯಲ್ಲಿರುವ ನೆಫ್ರೊ-ಯುರಾಲಾಜಿ ಸಂಸ್ಥೆಯಲ್ಲಿ ಸ್ಥಾನಿಕ ವೈದ್ಯಾಧಿಕಾರಿ ಸೇರಿ ವಿವಿಧ ಕಾಯಂ ಹುದ್ದೆಗಳು ಖಾಲಿ ಉಳಿದಿವೆ.

ಇದರಿಂದಾಗಿ ಸಂಸ್ಥೆಯು ಕಾಯಂ ವೈದ್ಯರ ಕೊರತೆಯನ್ನು ಎದುರಿಸುತ್ತಿದ್ದು, ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ, ಸೇವೆಯನ್ನು ಒದಗಿಸುವುದು ಕಷ್ಟಸಾಧ್ಯವಾಗಿದೆ. ರಾಜ್ಯದ ವಿವಿಧೆಡೆಯಿಂದ ಡಯಾಲಿಸಿಸ್ ಸೇರಿ ವಿವಿಧ ಚಿಕಿತ್ಸೆಗಳಿಗೆ ರೋಗಿಗಳು ಇಲ್ಲಿಗೆ ಬರುತ್ತಾರೆ.

ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಸಂಸ್ಥೆ, 2007ರಿಂದ ಕಾರ್ಯನಿರ್ವಹಿಸುತ್ತಿದೆ. ಇದು, ಸ್ವಾಯತ್ತ ಸಂಸ್ಥೆಯಾಗಿದ್ದು, 160 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿದೆ.

20 ಡಯಾಲಿಸಿಸ್ ಯಂತ್ರಗಳಿದ್ದು, ದಿನದ 24 ಗಂಟೆಗಳೂ ಡಯಾಲಿಸಿಸ್ ಸೇವೆಯನ್ನು ನೀಡಲಾಗುತ್ತಿದೆ. ನಿತ್ಯ ಸರಾಸರಿ 80–90 ಮಂದಿಗೆ ಡಯಾಲಿಸಿಸ್ ಮಾಡಲಾಗುತ್ತಿದೆ. ಸುಮಾರು 300 ರೋಗಿಗಳು ನಿತ್ಯ ಸಂಸ್ಥೆಗೆ ಭೇಟಿ ನೀಡುತ್ತಾರೆ. ಆದರೆ, ಮಂಜೂರಾದ ವೈದ್ಯರ ಹುದ್ದೆಗಳಿಗೆ ನೇಮಕಾತಿ ನಡೆಯದಿರುವುದು ಚಿಕಿತ್ಸೆಗೆ ತೊಡಕಾಗಿದೆ.

ನೆಫ್ರೊ–ಯುರಾಲಜಿ ಸಂಸ್ಥೆ

2013ರಿಂದ ಸಂಸ್ಥೆಗೆ ಪೂರ್ಣಾವಧಿ ನಿರ್ದೇಶಕರನ್ನು ನೇಮಕ ಮಾಡಿಲ್ಲ. ಮುಖ್ಯಮಂತ್ರಿಯವರೇ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾಗಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವರು ಉಪಾಧ್ಯಕ್ಷರಾಗಿದ್ದಾರೆ. ಆಡಳಿತ ಮಂಡಳಿಯ ಸಭೆಗಳಲ್ಲಿ ಸಂಸ್ಥೆಯ ನಿರ್ದೇಶಕ ಸ್ಥಾನದ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ, ಈವರೆಗೂ ನೇಮಕಾತಿ ಆಗಿಲ್ಲ. ಸಂಸ್ಥೆಗೆ 10 ವರ್ಷಗಳಿಂದ ಪೂರ್ಣಾವಧಿ ನಿರ್ದೇಶಕರಿಲ್ಲ. ವೈದ್ಯಕೀಯ ಅಧೀಕ್ಷಕರ ಹುದ್ದೆಯೂ ಪ್ರಭಾರದಲ್ಲಿ ಇದೆ. ಪರಿಣಾಮ ಸಂಸ್ಥೆಯ ವಾರ್ಷಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ.

30 ಹುದ್ದೆಗಳು ಖಾಲಿ: ಸಂಸ್ಥೆಯು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ಜೀವರಸಾಯನ ವಿಜ್ಞಾನ, ನೆಫ್ರೊಲಜಿ, ಯುರಾಲಜಿ, ಅರಿವಳಿಕೆ ವಿಜ್ಞಾನ ಸೇರಿ ವಿವಿಧ ವಿಷಯಗಳನ್ನು ಬೋಧಿಸಲಾಗುತ್ತಿದೆ. ಇದರಿಂದಾಗಿ ವೈದ್ಯರು ಚಿಕಿತ್ಸೆಯ ಜತೆಗೆ ಬೋಧನೆಯನ್ನೂ ಮಾಡುತ್ತಿದ್ದಾರೆ. ಸದ್ಯ ಮಂಜೂರಾಗಿದ್ದ ವೈದ್ಯರ ಹುದ್ದೆಗಳಲ್ಲಿ 30 ಹುದ್ದೆಗಳು ಖಾಲಿ ಉಳಿದಿವೆ. 46 ವೈದ್ಯರು ಪೂರ್ಣಾವಧಿ ಹುದ್ದೆಯಡಿ ಕಾರ್ಯನಿರ್ವಹಿಸುತ್ತಿದ್ದಾರೆ.

‘ವೈದ್ಯರ ಕೊರತೆಯಿಂದ ಕಾರ್ಯನಿರ್ವಹಣೆ ಕಷ್ಟಸಾಧ್ಯವಾಗಿದೆ. ಡಯಾಲಿಸಿಸ್ ಸೇರಿ ವಿವಿಧ ವೈದ್ಯಕೀಯ ಸೇವೆಗೆ ದೂರದ ಊರುಗಳಿಂದ ಬಂದವರು ಕಾಯಬೇಕಾದ ಪರಿಸ್ಥಿತಿಯಿದೆ. ಕೆಲವರು ಅನಿವಾರ್ಯವಾಗಿ ಬೇರೆಡೆಗೆ ತೆರಳುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಕ್ರಮಹಿಸಿ, ವಿವಿಧ ಹುದ್ದೆಗಳ ಭರ್ತಿಗೆ ಕ್ರಮವಹಿಸಬೇಕು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವೈದ್ಯರೊಬ್ಬರು ತಿಳಿಸಿದರು.

‘ಕಡ್ಡಾಯ ಸೇವೆಯಡಿ ನೇಮಕಾತಿ’

‘ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಒಂದು ವರ್ಷದ ಕಡ್ಡಾಯ ಸರ್ಕಾರಿ ಸೇವೆಯಡಿ ಎಂಬಿಬಿಎಸ್ ಪದವೀಧರರನ್ನು ಬಳಸಿಕೊಳ್ಳಲಾಗುತ್ತದೆ. ನಾಲ್ಕು ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಇದೇ ರೀತಿ ಹಿರಿಯ ನಿವಾಸಿ ವೈದ್ಯಾಧಿಕಾರಿ ಹಾಗೂ ಕಿರಿಯ ನಿವಾಸಿ ವೈದ್ಯಾಧಿಕಾರಿ ಹುದ್ದೆಗಳಿಗೂ ಕಡ್ಡಾಯ ಸರ್ಕಾರಿ ಸೇವೆಯಡಿ ವೈದ್ಯರನ್ನು ಬಳಸಿಕೊಳ್ಳಲಾಗುವುದು’ ಎಂದು ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿ ತಿಳಿಸಿದರು.

ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳು

ಹುದ್ದೆ	ಖಾಲಿ
ನಿರ್ದೇಶಕ	01
ವೈದ್ಯಕೀಯ ಅಧೀಕ್ಷಕ	01
ಸಹ ಪ್ರಾಧ್ಯಾಪಕ	03
ಸಹಾಯಕ ಪ್ರಾಧ್ಯಾಪಕ	12
ಹಿರಿಯ ನಿವಾಸಿ ವೈದ್ಯಾಧಿಕಾರಿ	04
ಕಿರಿಯ ನಿವಾಸಿ ವೈದ್ಯಾಧಿಕಾರಿ	07
ಸಮಾಲೋಚಕರು	02

ಡಿಸಿಪಿ ಆದ 13ರ ಬಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮವಸ್ತ್ರ ಧರಿಸಿ ಸೊಂಟದಲ್ಲಿ ಪಿಸ್ತೂಲ್ ಇಟ್ಟುಕೊಂಡು ಕೈಯಲ್ಲಿ ಲಾಠಿ ಹಿಡಿದು ಬಂದಿದ್ದ ಬಾಲಕನಿಗೆ ಪೊಲೀಸರು ಸೆಲ್ಯೂಟ್ ಹೊಡೆದರು. ಅಧಿಕಾರಿ ಬಂದಿದ್ದಾರೆಂದು ತಿಳಿದ ಡಿಸಿಪಿ ಸಹ ಸ್ಥಳಕ್ಕೆ ಬಂದು ಹೂಗುಚ್ಛ ನೀಡಿ ಬರ ಮಾಡಿಕೊಂಡರು.

ಇದು, ದಕ್ಷಿಣ ವಿಭಾಗದ (ಸಂಚಾರ) ಡಿಸಿಪಿ ಕಚೇರಿಯಲ್ಲಿ ಕಂಡು ಬಂದ ದೃಶ್ಯಗಳು. ಅನಾರೋಗ್ಯದಿಂದ ಬಳಲುತ್ತಿರುವ 13 ವರ್ಷದ ಬಾಲಕ ಮೋಸಿನ್ ರಾಜ್ ಎಂಬಾತ ಒಂದು ದಿನ ಡಿಸಿಪಿ ಆಗಿ ಸಂಭ್ರಮಪಟ್ಟನು.

‘ನಾನೊಬ್ಬ ಪೊಲೀಸ್ ಅಧಿಕಾರಿ ಆಗಬೇಕು’ ಎಂಬ ಮೋಸಿನ್ ರಾಜ್‌ನ ಆಸೆಯಂತೆ, ಆತನನ್ನು ದಕ್ಷಿಣ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜು ಅವರು ಒಂದು ದಿನದ ಡಿಸಿಪಿ ಆಗಿ ಮಾಡಿದರು. ತಮ್ಮ ಕುರ್ಚಿಯಲ್ಲಿ ಕೂರಿಸಿ, ಅಧಿಕಾರ ಚಲಾಯಿಸಲು ಅವಕಾಶ ಮಾಡಿಕೊಟ್ಟರು.

ಆಸ್ಪತ್ರೆಯಿಂದ ಬೆಳಿಗ್ಗೆ 11.30 ಗಂಟೆಗೆ ಜಯನಗರದಲ್ಲಿರುವ ಡಿಸಿಪಿ ಕಚೇರಿಗೆ ಬಂದಿದ್ದ ಮೋಸಿನ್ ರಾಜ್‌ನನ್ನು ಡಿಸಿಪಿ ಹಾಗೂ ಸಿಬ್ಬಂದಿ ಸ್ವಾಗತಿಸಿದರು. ಪ್ರತಿಯೊಬ್ಬ ಸಿಬ್ಬಂದಿಯೇ ಸೆಲ್ಯೂಟ್ ಮಾಡಿ, ತಮ್ಮ ಪರಿಚಯ ಮಾಡಿಕೊಂಡರು. ಅವರೆಲ್ಲರಿಗೂ ಬಾಲಕ ಹಸ್ತಲಾಘವ ನೀಡಿದ.

ನಂತರ, ಕಚೇರಿಯಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಸ್ಪರ್ಶಿಸಿ ಅವುಗಳ ಬಗ್ಗೆ ಮಾಹಿತಿ ಪಡೆದುಕೊಂಡ. ಆರೋಪಿಗಳನ್ನು ಇರಿಸುವ ಸೆಲ್‌ಗೂ ಹೋಗಿ ವೀಕ್ಷಿಸಿದ. ನಂತರ, ಡಿಸಿಪಿ ಅವರ ಕುರ್ಚಿಯಲ್ಲಿ ಕುಳಿತು ಅಧಿಕಾರ ಚಲಾಯಿಸಿದ. ಬಳಿಕ, ಕಚೇರಿ ವ್ಯಾಪ್ತಿಯ ಪ್ರದೇಶದಲ್ಲಿ ಜೀಪಿನಲ್ಲೇ ಗಸ್ತು ತಿರುಗಿದ. ಬಾಲಕನ ಖುಷಿ ಕಂಡು ಪೋಷಕರು ಸಂತೋಷಗೊಂಡರು.

ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜು ಅವರು ಮೋಸಿನ್ ರಾಜ್ ಅವರಿಗೆ ಹೂಗುಚ್ಛ ನೀಡಿ ಬರಮಾಡಿಕೊಂಡರು.

ಎಂಜಿನಿಯರ್‌ಗೆ ಚಪ್ಪಲಿಯಿಂದ ಹಲ್ಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಹೊಸಕೋಟೆ: ತಾಲ್ಲೂಕಿನ ಸೂಲಿಬೆಲೆಯ ಬೆಸ್ಕಾಂ ಕಚೇರಿ ಬಳಿ ಬೆಸ್ಕಾಂ ಎಂಜಿನಿಯರ್ ಮಹೇಶ್ ಅವರ ಮೇಲೆ ಮೂವರು ಸಿಬ್ಬಂದಿ ಚಪ್ಪಲಿಯಿಂದ ಹಲ್ಲೆಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಬೆಸ್ಕಾಂ ಸಿಬ್ಬಂದಿ ಸೂಲಿಬೆಲೆ ನಿವಾಸಿ ಪ್ರಶಾಂತ್, ಆಂಕೋನಹಳ್ಳಿಯ ಸತೀಶ್ ಮತ್ತು ಮಹೇಶ್ ಅವರನ್ನು ಸೂಲಿಬೆಲೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸದ್ಯ, ಆರೋಪಿಗಳು ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

‘ಕೆಲಸಕ್ಕೆ ಸರಿಯಾಗಿ ಹಾಜರಾಗದ ಕಾರಣ ಪ್ರಶಾಂತ್, ಸತೀಶ್ ಮತ್ತು ಮಹೇಶ್ ಮೂವರ ಸಂಬಳ ಕಡಿತ ಮಾಡಲಾಗಿತ್ತು. ಇದಕ್ಕೆ ಎಂಜಿನಿಯರ್ ಕಾರಣ ಎಂದು ಭಾವಿಸಿ ಹಲ್ಲೆ ನಡೆಸಿದ್ದರು ಎಂದು’ ಎಂದು ಎಂಜಿನಿಯರ್ ಪೊಲೀಸರಿಗೆ ದೂರು ನೀಡಿದ್ದರು.

ಉದ್ಘಾಟನೆ
ಜೋಸ್ ಅಲುಕ್ಕಾಸ್ ಆಭರಣದ ಹೊಸ ಮಳಿಗೆಯನ್ನು ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ನಟ ಶರ್ಮಿಳಾ ಮಾಂಡ್ರೆ ಉದ್ಘಾಟಿಸಿದರು. ಅಧ್ಯಕ್ಷ ಜೋಸ್ ಅಲುಕ್ಕಾ, ವ್ಯವಸ್ಥಾಪಕ ನಿರ್ದೇಶಕರಾದ ವರ್ಗೀಸ್ ಅಲುಕ್ಕಾ, ಪಾಲ್ ಜೆ. ಅಲುಕ್ಕಾ, ಜಾನ್ ಅಲುಕ್ಕಾ ಉಪಸ್ಥಿತರಿದ್ದರು.

‘ಗುಣಮಟ್ಟದ ಶಿಕ್ಷಣವೇ ಆದ್ಯತೆ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಭ್ರಷ್ಟಾಚಾರ ಮುಕ್ತ ಶಿಷ್ಟಾಚಾರದ ಜೀವನಕ್ಕೆ ಗುಣಮಟ್ಟದ ಶಿಕ್ಷಣ ನೀಡುವುದು ಆಮ್ ಆದ್ಮಿ ಪಕ್ಷದ ಗುರಿಯಾಗಿದೆ’ ಎಂದು ಪಕ್ಷದ ರಾಜ್ಯ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ತಿಳಿಸಿದರು.

ಪಟ್ಟಣದ ವೀರಾಂಜನೇಯ ದೇವಾಲಯದ ಬಳಿಯ ಮಾರುತಿ ಕಾಂಪ್ಲೆಕ್ಸ್‌ನಲ್ಲಿ ತಾಲ್ಲೂಕಿನ ಉಚಿತ ಆರೋಗ್ಯ ಸೇವಾ ಕೇಂದ್ರ ಮತ್ತು ಜನಜಾಗೃತಿ ಸೇವಾ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

ಜನಜಾಗೃತಿ, ದೇಶದ ಅಭಿವೃದ್ಧಿ ಹಾಗೂ ರೈತರ ಋಣ ತೀರಿಸುವುದು ಪಕ್ಷದ ಧ್ಯೇಯವಾಗಿದೆ. ಕೆಲವು ಅಪ್ರಾಮಾಣಿಕ ಪಕ್ಷಗಳು ದೇಶ ಕಡೆಗಣಿಸಿ ಪಕ್ಷ ಬೆಳವಣಿಗೆಗೆ ಮಾತ್ರ ಸೀಮಿತವಾಗಿವೆ ಎಂದು ಅವರು ದೂರಿದರು.

ಎಎಪಿ ಉಚಿತ ಆರೋಗ್ಯ ಸೇವಾ ಕೇಂದ್ರ ಮತ್ತು ಜನಜಾಗೃತಿ ಸೇವಾ ಕೇಂದ್ರವನ್ನು ‘ಮುಖ್ಯಮಂತ್ರಿ’ ಚಂದ್ರು ಉದ್ಘಾಟಿಸಿದರು.

ಸಂಘಟನಾ ಕಾರ್ಯದರ್ಶಿ ಬಿ.ಟಿ.ನಾಗಣ್ಣ ಮಾತನಾಡಿ, ಪತ್ರಿಕಾ ಸ್ವಾತಂತ್ರ್ಯದ ಹರಣವಾಗಿದ್ದು, ಭ್ರಷ್ಟ ವ್ಯವಸ್ಥೆ ತಾಂಡವವಾಡುತ್ತಿದೆ. ಸಂವಿಧಾನ ಮರುಸ್ಥಾಪನೆಗೆ ಆಮ್ ಆದ್ಮಿ ಪಕ್ಷದ ಹೋರಾಟ ಎಂದರು.

ರಾಜ್ಯ ಘಟಕದ ಉಪಾಧ್ಯಕ್ಷ ಸುರೇಶ್ ರಾಠೋಡ್, ರಾಜ್ಯ ಯುವ ಘಟಕದ ಅಧ್ಯಕ್ಷ ಲೋಹಿತ್. ಬಿ.ಹನುಮಾಪುರ, ತಾಲ್ಲೂಕು ಘಟಕದ ಅಧ್ಯಕ್ಷ ರಾಮಕೃಷ್ಣಯ್ಯ, ಪದಾಧಿಕಾರಿಗಳಾದ ಮೋನೇಶ್ ನಾಡಗೌಡ, ಮುಕುಂದ, ಲಕ್ಷ್ಮಯ್ಯ, ಸೋಮಶೇಖರ್ ಇದ್ದರು.

ಆನೇಕಲ್ ತಾಲ್ಲೂಕಿನ ಹುಸ್ಕೂರು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಕೇಂದ್ರ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಕುಮಾರ್ ಅವರು ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು

ಹುಸ್ಕೂರು ಶಾಲೆಗೆ ಶಿಕ್ಷಣ ಸಚಿವಾಲಯ ಕಾರ್ಯದರ್ಶಿ ಭೇಟಿ

ಪ್ರಜಾವಾಣಿ ವಾರ್ತೆ

ಆನೇಕಲ್: ಕೇಂದ್ರ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಕುಮಾರ್ ಅವರು ಶನಿವಾರ ಆನೇಕಲ್ ತಾಲ್ಲೂಕಿನ ಹುಸ್ಕೂರು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು.

ಶಾಲೆಯಲ್ಲಿ ಪಿಎಂಶ್ರೀ ಯೋಜನೆಯಡಿಯಲ್ಲಿ ಅನುಷ್ಠಾನಗೊಂಡಿರುವ ಕಾರ್ಯಕ್ರಮಗಳನ್ನು ಪರಿಶೀಲಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ತರಗತಿ ಕೋಣೆಯಲ್ಲಿ ಕುಳಿತು ಪಾಠ ಪ್ರವಚನ ವೀಕ್ಷಿಸಿದರು. ಕಂಪ್ಯೂಟರ್ ಶಿಕ್ಷಣ, ಗ್ರಂಥಾಲಯ, ಟಿಎಲ್‌ಎಂಗಳ ಬಳಕೆ, ಪ್ರಯೋಗ ಶಾಲೆ ಪರಿಶಿಲಿಸಿದರು.

ಸರ್ಕಾರ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಸಮಗ್ರ ಶಿಕ್ಷಣ ಕರ್ನಾಟಕದ ಯೋಜನಾ ನಿರ್ದೇಶಕ ಕೆ.ಎನ್.ರಮೇಶ್, ನಿರ್ದೇಶಕ (ಗುಣಮಟ್ಟ) ಮಾರುತಿ, ಕಾರ್ಯಾಕ್ರಮಾಧಿಕಾರಿ ಕೆ.ಸಿ.ರಮೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಜೆ.ಎಂ.ಜಯಲಕ್ಷ್ಮಿ, ಸಮಗ್ರ ಶಿಕ್ಷಣ ಡಿವೈಪಿಸಿ ನಾಗಮಣಿ ಅವರು ಇದ್ದರು.

‘ಪ್ರಧಾನ ಮಂತ್ರಿ ಸ್ಕೂಲ್ಸ್ ಫಾರ್ ರೈಸಿಂಗ್ ಇಂಡಿಯಾ’ ಕೇಂದ್ರ ಪುರಸ್ಕೃತ ಯೋಜನೆಗೆ ಆನೇಕಲ್ ತಾಲ್ಲೂಕಿನ ಹುಸ್ಕೂರು ಹಿರಿಯ ಪ್ರಾಥಮಿಕ ಶಾಲೆ ಆಯ್ಕೆಯಾಗಿದೆ.

ಭೌಥಿಕ ಮತ್ತು ಶೈಕ್ಷಣಿಕ ಸೌಲಭ್ಯ ಅಭಿವೃದ್ಧಿ, ಗುಣಮಟ್ಟದ ಬೋಧನೆ, ಕಲಿಕೆಗೆ ಮಾದರಿ ಶಾಲೆಯನ್ನಾಗಿ ರೂಪಿಸಲು ಪ್ರಯೋಗಾಲಯ, ಪೂರ್ವ ಪ್ರಾಥಮಿಕ ಶಿಕ್ಷಣ, ಹಸಿರು ಶಾಲೆ, ಕಲಿಕೋಪಕರಣಗಳು ಸೇರಿದಂತೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿದ್ದು ಇದಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

ಕೆಆರ್‌ಎಸ್ ಬೈಕ್ ಜಾಥಾ: 3 ಸಾವಿರ ಕಿ.ಮೀ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕಕ್ಕಾಗಿ ನಾವು’ ಹೆಸರಿನಲ್ಲಿ ಕೆಆರ್‌ಎಸ್ ಪಕ್ಷ ಆಯೋಜಿಸಿದ್ದ ಬೈಕ್ ಜಾಥಾವು ಶನಿವಾರ ನೆಲಮಂಗಲ ತಲುಪಿತು. ರಾಜ್ಯ ವ್ಯಾಪಿ 13 ದಿನಗಳ ಬೈಕ್ ಜಾಥಾವು 3 ಸಾವಿರ ಕಿ.ಮೀ ಅಂತರ ಕ್ರಮಿಸಿತ್ತು.

ಫೆ.19ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಆರಂಭವಾದ ಜಾಥಾವು ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ನಗರ, ರಾಮನಗರ, ಮಂಡ್ಯ, ಚಾಮರಾಜನಗರ, ಮೈಸೂರು, ಕೊಡಗು, ಮಂಗಳೂರು, ಉಡುಪಿ, ಉತ್ತರ ಕನ್ನಡ, ಧಾರವಾಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಕೊಪ್ಪಳ, ಗದಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು ಮಾರ್ಗವಾಗಿ ನೆಲಮಂಗಲ ತಲುಪಿತು.

ಕೆಆರ್‌ಎಸ್ ಪಕ್ಷದ ರಾಜ್ಯ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಮಾತನಾಡಿ, ‘ಭ್ರಷ್ಟರು, ಅಪ್ರಾಮಾಣಿಕರು, ಸ್ವಜನಪಕ್ಷಪಾತಿಗಳು ಹಾಗೂ ಕುಟುಂಬ ರಾಜಕಾರಣದ ಮೂಲಕ ಪ್ರಜಾ ಪ್ರಭುತ್ವದ ಆಶಯಗಳನ್ನು ಮಣ್ಣುಪಾಲು ಮಾಡುತ್ತಿರುವ ರಾಜಕಾರಣಿಗಳನ್ನು ಆಡಳಿತದಿಂದ ದೂರ ಇಡಬೇಕು’ ಎಂದು ಮನವಿ ಮಾಡಿದರು.

ಬೈಕ್ ಜಾಥಾದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು.

ರಾಜ್ಯ ಉಪಾಧ್ಯಕ್ಷ ಎಸ್.ಎಚ್. ಲಿಂಗೇಗೌಡ ಅವರು ಮಾತನಾಡಿ, ‘ರಾಜ್ಯದ ಜನರಿಗೆ ನಿರಂತರವಾಗಿ ದ್ರೋಹ ಮಾಡುತ್ತಿರುವ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ತಿರಸ್ಕರಿಸಿ. ರಾಜ್ಯದ ಏಕೈಕ ಪ್ರಾಮಾಣಿಕ ಮತ್ತು ಪ್ರಾದೇಶಿಕ ಪಕ್ಷವಾದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವನ್ನು ಬೆಂಬಲಿಸಿ’ ಎಂದು ಕೋರಿದರು.

ಬೈಕ್ ಜಾಥಾದಲ್ಲಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್, ರಾಜ್ಯ ಕಾರ್ಯದರ್ಶಿ ರಘು ಜಾಣಗೆರೆ, ನರಸಿಂಹಮೂರ್ತಿ, ಜಂಟಿ ಕಾರ್ಯದರ್ಶಿ ರಘುಪತಿ ಭಟ್, ಸಂಘಟನಾ ಕಾರ್ಯದರ್ಶಿ ಎಲ್.ಜೀವನ್, ಕೃಷ್ಣ ವಿ.ಬಿ., ಬಿ.ಜಿ. ಕುಂಬಾರ್, ನಂದಾರೆಡ್ಡಿ, ನೆಲಮಂಗಲ ತಾಲ್ಲೂಕು ಅಧ್ಯಕ್ಷ ಅರುಣ್ ಅವರು ಹಾಜರಿದ್ದರು.

‘ಬಾಂಬ್ ಸ್ಫೋಟ: ಲಘುವಾಗಿ ಪರಿಗಣಿಸಲಾಗದು’

ಪ್ರಜಾವಾಣಿ ವಾರ್ತೆ

ಆನೇಕಲ್: ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದಿರುವ ಬಾಂಬ್ ಸ್ಫೋಟ ಪ್ರಕರಣವನ್ನು ರಾಜ್ಯ ಸರ್ಕಾರ ಲಘುವಾಗಿ ಪರಿಗಣಿಸಬಾರದು ಎಂದು ಕೇಂದ್ರ ಸಾಮಾಜಿಕ ನ್ಯಾಯ ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅವರು ಹೇಳಿದರು.

ಎ.ನಾರಾಯಣ ಸ್ವಾಮಿ

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೃತ್ಯ ನಡೆದು 24 ಗಂಟೆಯಾದರೂ ಸರ್ಕಾರದ ಬಳಿ ಘಟನೆ ಬಗ್ಗೆ ಸಮರ್ಪಕ ಮಾಹಿತಿ ಇಲ್ಲ. ಇದು ದೇಶದ ಭದ್ರತೆಯ ವಿಚಾರ. ಹಾಗಾಗಿ ಕಠಿಣಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

‘ಬೆಂಗಳೂರು ಐ.ಟಿ ನಗರವಾಗಿದೆ. ಈ ಹೆಸರಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ. ಮುಖ್ಯಮಂತ್ರಿ, ಗೃಹ ಸಚಿವರು ಈ ಪ್ರಕರಣವನ್ನು ಲಘುವಾಗಿ ಪರಿಗಣಿಸಬಾರದು’ ಎಂದು ಅವರು ಆಗ್ರಹಪಡಿಸಿದರು.

ವಿಧಾನಸೌಧದ ಬಳಿಯೇ ನೆರೆಯ ದೇಶದ ಪರ ಘೋಷಣೆ ಕೂಗಿರುವುದು ಖಂಡನೀಯ. ಇಂತಹ ವರ್ತನೆಯನ್ನು ಖಂಡಿಸುವುದು ಪ್ರತಿ ಭಾರತೀಯರ ಕರ್ತವ್ಯವಾಗಿದೆ. ಇಂತಹ ಬೆಳವಣಿಗೆ ಸಹಿಸುವುದಿಲ್ಲ ಎಂಬ ಸಂದೇಶವನ್ನು ರವಾನಿಸಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸ್ಪರ್ಧಾತ್ಮಕ ಪರೀಕ್ಷೆ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯು ಯುಪಿಎಸ್‌ಸಿ ಹಾಗೂ ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷಾ ತರಬೇತಿ ಮತ್ತು ಮಾರ್ಗದರ್ಶನಕ್ಕೆ ಅರ್ಜಿ ಆಹ್ವಾನಿಸಿದೆ.

ಐಎಎಸ್, ಕೆಎಎಸ್, ಪರೀಕ್ಷೆಗಳ ತರಬೇ6ತಿಗಾಗಿ (ಆನ್‌ಲೈನ್/ಆಫ್‌ಲೈನ್) ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನದ ಮೂಲಕ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಮಾ. 5ರಿಂದ ತರಗತಿಗಳು ಆರಂಭವಾಗಲಿವೆ. ಆಸಕ್ತರು ಮಾ. 4ರ ಒಳಗೆ ಅರ್ಜಿ ಸಲ್ಲಿಸಬೇಕು.

ಮಾಹಿತಿಗಾಗಿ http://www.ksfkarnataka.comಗೆ ಭೇಟಿ ನೀಡಿ ಅಥವಾ 080–25202299/7625000990ಗೆ ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನಲ್ಲಿ ಶನಿವಾರ ನಡೆದ ಘಟಿಕೋತ್ಸವದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋ ಫಿಸಿಕ್ಸ್‌ನ ನಿರ್ದೇಶಕಿ ಅನ್ನಪೂರ್ಣಿ ಸುಬ್ರಮಣ್ಯಂ, ಎಂಲ್ಯಾಕ್ ಟ್ರಸ್ಟ್‌ನ ಅಧ್ಯಕ್ಷ ಎಸ್‌.ಎಸ್‌. ನಾಗಾನಂದ್, ಸರ್ಕಾರ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್, ವ್ಯವಸ್ಥಾಪಕ ಟ್ರಸ್ಟಿ ಕೆ. ಜೈರಾಜ್, ಕಾಲೇಜಿನ ಪ್ರಾಂಶುಪಾಲರಾದ ಬಿ.ಎನ್‌. ನಾಗಾಲಕ್ಷ್ಮಿ, ಪರೀಕ್ಷಾ ನಿಯಂತ್ರಾಣಧಿಕಾರಿ ಪ್ರತಿಭಾ ಎಂ., ಕಾಲೇಜು ಆಡಳಿತಾಧಿಕಾರಿ ಅನ್ನದಾನೇಶ್ ಬಿ.ಎ. ಅವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಸೇಂಟ್ ಮೇರಿಸ್ ಆಂಗ್ಲ ಶಾಲೆಯ ವತಿಯಿಂದ ಮಾರೇನಹಳ್ಳಿ ವಾರ್ಡ್‌ನ ಬಿಬಿಎಂಪಿ ವಿವಿಧೋದ್ದೇಶ ಕಟ್ಟಡ ಸಂಕೀರ್ಣದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಮಹಿಳೆಯರಿಗೆ ಕರಕುಶಲ ತರಬೇತಿ ನೀಡಲಾಯಿತು. ಶಾಲೆಯ ಕಾರ್ಯದರ್ಶಿ ನಾಗರತ್ನಮ್ಮ, ಸಮಾಜ ಸೇವಕಿ ಗೀತಾ ಸಿದ್ಧಗಂಗಾ ಭಾಗವಹಿಸಿದ್ದರು.

ನಗರದ ಎಚ್‌ಎಎಲ್ ಕಡೆಗೆ ಸಾಗುವ ಮಾರತ್‌ಹಳ್ಳಿ ಮುಖ್ಯರಸ್ತೆಯಲ್ಲಿ ಶನಿವಾರ ವಾಹನ ದಟ್ಟಣೆ ಉಂಟಾಗಿದ್ದು, ಸವಾರರು ಪರದಾಡಿದರು. –ಪ್ರಜಾವಾಣಿ ಚಿತ್ರ

ಮೋಟಾರು ವಾಹನ ತೆರಿಗೆ ಬಾಕಿ ಸಂಬಂಧ 5 ವಾಹನಗಳನ್ನು ಬೆಂಗಳೂರು (ಪೂರ್ವ) ಕಸ್ತೂರಿನಗರ ಪ್ರಾದೇಶಿಕ ಸಾರಿಗೆ ಅಧಿಕಾರಿ ಬಿ. ಶ್ರೀನಿವಾಸ ಪ್ರಸಾದ್, ಹಿರಿಯ ಮೋಟಾರು ವಾಹನ ನಿರೀಕ್ಷಕರಾದ ಎ.ಟಿ. ಸುರೇಶ್, ನವೀನ್ ಶುಕ್ರವಾರ ಜಪ್ತಿ ಮಾಡಿದರು

ಅನುಕಂಪದ ಆಧಾರದ ಅಡಿಯಲ್ಲಿ 50 ಮಂದಿಗೆ ನೇಮಕಾತಿ ಆದೇಶ

2,500 ನಿರ್ವಾಹಕ ಹುದ್ದೆಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ (ಬಿಎಂಟಿಸಿ) ಖಾಲಿಯಿರುವ 2,500 ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅರ್ಜಿ ಆಹ್ವಾನಿಸಿದೆ.

ಮಾರ್ಚ್ 10ರಿಂದ ಏಪ್ರಿಲ್ 10ರ ವರೆಗೆ ಆನ್‌ಲೈನ್ ಮೂಲಕ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್: https://kea.kar.nic.inನಲ್ಲಿ ಅಗತ್ಯ ದಾಖಲೆಗಳ ಜೊತೆಗೆ ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು, ಅಧಿಸೂಚನೆಯಲ್ಲಿ ಸೂಚಿಸಿರುವ ವಿದ್ಯಾರ್ಹತೆ, ದೈಹಿಕ ದೃಢತೆ, ಷರತ್ತು ಮತ್ತು ಸೂಚನೆಗಳನ್ನು ಸ್ಪಷ್ಟವಾಗಿ ಓದಿ, ಅರ್ಹತೆಯಿದ್ದರೆ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅನುಕಂಪದ ಆಧಾರದಲ್ಲಿ ಉದ್ಯೋಗ: ಶಾಂತಿನಗರದ ಬಿಎಂಟಿಸಿ ಕೇಂದ್ರ ಕಚೇರಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮೃತ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಅಡಿಯಲ್ಲಿ ನೇಮಕಾತಿ ಆದೇಶ ಪತ್ರ ವಿತರಣೆ ಮಾಡಲಾಯಿತು.

50 ಮಂದಿ ಅವಲಂಬಿತರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ನೇಮಕಾತಿ ಪತ್ರ ಹಸ್ತಾಂತರ ಮಾಡಿ ಬಳಿಕ ಮಾತನಾಡಿ, ಉತ್ತಮವಾಗಿ ಕೆಲಸ ಮಾಡಿ ಸಂಸ್ಥೆಗೂ ಒಳ್ಳೆಯ ಹೆಸರು ತರುವಂತೆ ಮನವಿ ಮಾಡಿದರು.

ಕಿರಿಯ ಸಹಾಯಕ ಕಂ ಡೇಟಾ ಎಂಟ್ರಿ ಆಪರೇಟರ್, ದರ್ಜೆ–3 (ಮೇಲ್ವಿಚಾರಕೇತರ) ಹುದ್ದೆಗೆ ನೇಮಿಸಲಾಗಿದೆ. ಕಳೆದ ಅಕ್ಟೋಬರ್, ನವೆಂಬರ್‌ನಲ್ಲಿ ಅನುಕಂಪದ ಆಧಾರದಲ್ಲಿ 200 ಮಂದಿಗೆ ಉದ್ಯೋಗ ನೀಡಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದರು.

ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮೃತ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ 50 ಮಂದಿಗೆ ನೇಮಕಾತಿ ಪತ್ರಗಳನ್ನು ವಿತರಣೆ ಮಾಡಿದರು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್‌.ರಾಮಚಂದ್ರನ್ ಹಾಗೂ ಮಾಹಿತಿ ತಂತ್ರಜ್ಞಾನದ ನಿರ್ದೇಶಕಿ ಶಿಲ್ಪಾ ಪಾಲ್ಗೊಂಡಿದ್ದರು. – ಪ್ರಜಾವಾಣಿ ಚಿತ್ರ

ಪಕ್ಷಪಾತ ಮಾಡುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ

ಲಖನೌ(ಪಿಟಿಐ): ಲೋಕಸಭಾ ಚುನಾವಣೆಯ ವೇಳೆ ಪಕ್ಷಪಾತ ಮಾಡುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಭಾರತೀಯ ಚುನಾವಣಾ ಆಯೋಗವು ಶನಿವಾರ ದೇಶದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ರಾಜೀವ್ ಕುಮಾರ್

ಲೋಕಸಭಾ ಚುನಾವಣೆಯನ್ನು ‘ಪ್ರಲೋಭನೆರಹಿತ’ವಾಗಿ ನಡೆಸುವುದು ಮತ್ತು ಎಲ್ಲ ಪಕ್ಷಗಳಿಗೂ ಚುನಾವಣೆಯಲ್ಲಿ ಸಮಾನ ಅವಕಾಶ ಸಿಗುವಂತೆ ಮಾಡುವ ದಿಸೆಯಲ್ಲಿ ಆಯೋಗವು ಈ ನಿರ್ದೇಶನ ನೀಡಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಲಖನೌದಲ್ಲಿ ತಿಳಿಸಿದ್ದಾರೆ.

‘ಎಲ್ಲ ಪಕ್ಷಗಳಿಗೂ ಸಮಾನ ಸ್ಪರ್ಧೆಯ ಅವಕಾಶ ಸಿಗುವಂತೆ ಮಾಡುವ ದಿಸೆಯಲ್ಲಿ ಚುನಾವಣೆಯ ಮುಖ್ಯ ಹಂತಗಳಲ್ಲಿ ಕೆಲಸ ಮಾಡುವ ಕಿರಿಯ ಅಧಿಕಾರಿಗಳು ಪಕ್ಷಪಾತರಹಿತವಾಗಿ ಕೆಲಸ ನಿರ್ವಹಿಸುವುದನ್ನು ಖಾತರಿಪಡಿಸಿಕೊಳ್ಳಬೇಕು. ರಾಜಕೀಯ ಪಕ್ಷಗಳು ದೂರು ನೀಡಿದ ತಕ್ಷಣ ಅದರ ಬಗ್ಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಅವರು ಹೇಳಿದ್ದಾರೆ.

‘ಬಾವುಟದ ಅಳತೆಯನ್ನು ವಿವರಿಸುವ ಪ್ರಮಾಣಿತ ಕಾರ್ಯವಿಧಾನ (ಎಸ್‌ಒಪಿ) ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತದೆ. ಇವಿಎಂ ಅನ್ನು ಜಿಪಿಎಸ್ ಅಳವಡಿಸಿರುವ ಅಧಿಕೃತ ವಾಹನಗಳಲ್ಲಿಯೇ ಸಾಗಿಸಲಾಗುವುದು. ಮೊದಲು ಅಂಚೆ ಮತಗಳ ಎಣಿಕೆ ಮಾಡಲಾಗುತ್ತದೆ’ ಎಂದು ರಾಜೀವ್ ಕುಮಾರ್ ತಿಳಿಸಿದ್ದಾರೆ.

‘ಚುನಾವಣಾ ಕಾರ್ಯಕ್ಕೆ ನಿಯೋಜನೆ ಮಾಡಿರುವವರಿಗೆ ಮತದಾರ ಸಹಾಯ ಕೇಂದ್ರಗಳಲ್ಲಿ ಅಂಚೆ ಮತದಾನ ಮಾಡಲು ಅವಕಾಶ ಕಲ್ಪಿಸಲಾಗುವುದು. ಸುಳ್ಳು ಸುದ್ದಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಸಾಮಾಜಿಕ ಜಾಲ ತಾಣ ಕೇಂದ್ರ ಸ್ಥಾಪನೆ ಮಾಡಬೇಕು’ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಹೃದಯ ತಪಾಸಣೆ ಯೋಜನೆ: ಅಪಾಯದಿಂದ ಪಾರಾಗುತ್ತಿರುವ ಸಿಬ್ಬಂದಿ

ಕೆಎಸ್‌ಆರ್‌ಟಿಸಿ ನೌಕರರ 'ಹೃದಯಾಘಾತ' ಇಳಿಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕೆಎಸ್‌ಆರ್‌ಟಿಸಿ ನೌಕರರಿಗೆ ಹೃದಯ ತಪಾಸಣೆ ಯೋಜನೆ ಆರಂಭಿಸಿದ ಬಳಿಕ ಹೃದಯಾಘಾತದಿಂದ ಸಾಯುವ ನೌಕರರ ಪ್ರಮಾಣ ಕಡಿಮೆಯಾಗಿದೆ. ಈ ಹಿಂದೆ ತಿಂಗಳಿಗೆ ಸರಾಸರಿ ನಾಲ್ಕು ಜನ ಮೃತಪಡುತ್ತಿದ್ದರು. ಅದೀಗ ಒಂದಕ್ಕೆ ಇಳಿದಿದೆ.

ಕೆಎಸ್‌ಆರ್‌ಟಿಸಿಯಲ್ಲಿ 40 ವರ್ಷ ದಾಟಿದ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ 21 ಸಾವಿರಕ್ಕೂ ಅಧಿಕ ಇದ್ದಾರೆ. 2023ರ ಜನವರಿ ಒಂದೇ ತಿಂಗಳಲ್ಲಿ 8 ನೌಕರರು ಹೃದಯಾಘಾತದಿಂದ ನಿಧನರಾದಾಗ ನಿಗಮವು ಇದನ್ನು ಗಂಭೀರವಾಗಿ ಪರಿಗಣಿಸಿತು. ವ್ಯಾಯಾಮ ಮಾಡಬೇಕು, ಸರಿಯಾದ ಸಮಯದಲ್ಲಿ ಸರಿಯಾದ ಆಹಾರ ಸೇವಿಸಬೇಕು ಮುಂತಾದ ಆರೋಗ್ಯ ಕಾಳಜಿಯ ಸಲಹೆಗಳನ್ನು ನೌಕರರಿಗೆ ನೀಡಿದರೂ ದೊಡ್ಡ ಬದಲಾವಣೆಗಳಾಗಿರಲಿಲ್ಲ.

ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಸಂಶೋಧನಾ ಸಂಸ್ಥೆಯಲ್ಲಿ ಹೃದಯ ತಪಾಸಣೆಗೆ ಒಳಗಾಗಿರುವ ಕೆಎಸ್‌ಆರ್‌ಟಿಸಿ ನೌಕರ

ಕೊನೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಜೊತೆಗೆ ಕೆಎಸ್‌ಆರ್‌ಟಿಸಿ ಒಡಂಬಡಿಕೆ ಮಾಡಿಕೊಂಡಿತ್ತು. ನೌಕರರಿಗೆ ಇಸಿಜಿ, ಇಸಿಎಚ್‌ಒ, ಟಿಎಂಟಿ, ಎಕ್ಸ್‌–ರೆ ಸೇರಿದಂತೆ ಹೃದಯಕ್ಕೆ ಸಂಬಂಧಿಸಿದ ಹತ್ತು ಮಾದರಿಯ ವೈದ್ಯಕೀಯ ತಪಾಸಣೆಗಳನ್ನು ಜಯದೇವ ಹೃದ್ರೋಗ ಸಂಸ್ಥೆ ನಡೆಸುವುದು, ಪ್ರತಿ ನೌಕರರ ತಪಾಸಣೆಗೆ ₹1,200 ಕೆಎಸ್‌ಆರ್‌ಟಿಸಿ ಪಾವತಿ ಮಾಡುವುದು ಈ ಒಡಂಬಡಿಕೆಯಾಗಿತ್ತು.

'ಬಸ್‌ಗಳಲ್ಲಿ ಕೆಲಸ ಮಾಡುವುದು ಎಂದರೆ ಅದು ಕಚೇರಿಗಳಲ್ಲಿ ಕೆಲಸ ಮಾಡುವುದಕ್ಕಿಂತ ಭಿನ್ನವಾದುದು. ಕಾರ್ಯಸ್ವರೂಪ, ಜೀವನಶೈಲಿ ಮತ್ತು ಇತರ ಕಾರಣಗಳಿಂದಾಗಿ ನೌಕರರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ತೀರಾ ಸಾಮಾನ್ಯ. ಇದೇ ಹೃದಯಾಘಾತಕ್ಕೂ ಕಾರಣವಾಗಿದೆ. ನಾಲ್ಕೈದು ಸಾವಿರ ರೂಪಾಯಿ ಖರ್ಚು ಮಾಡಿ ಆರೋಗ್ಯ ತಪಾಸಣೆ ಮಾಡಿಸುವ ಶಕ್ತಿಯೂ ನೌಕರರಿಗೆ ಇರುವುದಿಲ್ಲ. ನಾವು ನಮ್ಮ ನೌಕರರನ್ನು ಉಳಿಸಿಕೊಳ್ಳಬೇಕು. ಈ ಎಲ್ಲ ಕಾರಣದಿಂದ ಹೃದಯ ತಪಾಸಣೆ ಯೋಜನೆ ಜಾರಿಗೆ ತರಲಾಗಿದೆ. ಬೆಂಗಳೂರು ಮತ್ತು ಮೈಸೂರಿನ ಜಯದೇವ ಆಸ್ಪತ್ರೆಗಳಲ್ಲಿ ನಿಯಮಿತವಾಗಿ ತಪಾಸಣೆಗಳು ನಡೆಯುತ್ತಿವೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ವಿ. ಅನ್ಬುಕುಮಾರ್ ಮಾಹಿತಿ ನೀಡಿದರು.

ಚಿಕಿತ್ಸಾ ವೆಚ್ಚ ಹೊರತುಪಡಿಸಿ ತಪಾಸಣೆಗೆ ವರ್ಷಕ್ಕೆ ₹2.55 ಕೋಟಿ ವೆಚ್ಚವಾಗಲಿದ್ದು, ಕೆಎಸ್‌ಆರ್‌ಟಿಸಿಯೇ ಭರಿಸಲಿದೆ ಎಂದು ತಿಳಿಸಿದರು.

3,526 ಮಂದಿಗೆ ತಪಾಸಣೆ: ಯೋಜನೆ ಜಾರಿಯಾದ 2023ರ ನವೆಂಬರ್‌ನಿಂದ ಇಲ್ಲಿವರೆಗೆ 3,526 ಸಿಬ್ಬಂದಿ ತಪಾಸಣೆ ಮಾಡಿಸಿಕೊಂಡಿದ್ದಾರೆ. ಅದರಲ್ಲಿ 28 ನೌಕರರಿಗೆ ಹೃದಯ ಸಂಬಂಧಿ ಸಮಸ್ಯೆ ಕಂಡು ಬಂದಿತ್ತು. 22 ಮಂದಿಗೆ ರಕ್ತನಾಳಕ್ಕೆ ಸ್ಟಂಟ್ ಅಳವಡಿಸಲಾಗಿದೆ. ಆರು ಜನರಿಗೆ ತೆರೆದ ಹೃದಯ ಶಸ್ತ್ರ ಚಿಕಿತ್ಸೆ ಮಾಡಿಸಲಾಗಿದೆ. ಚಿಕಿತ್ಸಾ ವೆಚ್ಚವನ್ನು ಕೂಡಾ ನಿಗಮವೇ ಸಿಜಿಎಚ್‌ಎಸ್ ದರದಲ್ಲಿ ಭರಿಸಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

'ಎಲ್ಲ ನೌಕರರು ಆರೋಗ್ಯವಂತರಾಗಿರಬೇಕು'

ಆರೋಗ್ಯವಂತ ನೌಕರರೇ ಕೆಎಸ್‌ಆರ್‌ಟಿಸಿಯ ಆಸ್ತಿ. ಎಲ್ಲ ನೌಕರರು ಆರೋಗ್ಯವಂತರಾಗಿ ಕೆಲಸ ಮಾಡಬೇಕು. ಹೃದಯಾಘಾತ ಸಹಿತ ಯಾವುದೇ ಸಾವುನೋವು ಉಂಟಾಗಬಾರದು ಎಂಬುದು ನಮ್ಮ ಕಳಕಳಿ. ಕೆಎಸ್‌ಆರ್‌ಟಿಸಿ ನೌಕರರಿಗೆ ಹೃದಯ ತಪಾಸಣೆಯು ಪ್ರಮುಖ ಯೋಜನೆಯಾಗಿದ್ದು, ಉತ್ತಮ ಪರಿಣಾಮ ಬೀರಿದೆ. ಹೃದಯಾಘಾತ ಪ್ರಮಾಣವನ್ನು ಕಡಿಮೆಗೊಳಿಸಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಅಂಕಿ ಅಂಶಗಳು

48 2022ರ ಡಿಸೆಂಬರ್‌ನಿಂದ 2023ರ ನವೆಂಬರ್‌ವರೆಗೆ ಹೃದಯಾಘಾತದಿಂದ ಮೃತಪಟ್ಟ ನೌಕರರು

1 ಕಳೆದ ಡಿಸೆಂಬರ್ ಮತ್ತು ಜನವರಿಯಲ್ಲಿ ಹೃದಯಾಘಾತದಿಂದ ಮೃತಪಟ್ಟ ನೌಕರರು

24,676 ಕೆಎಸ್‌ಆರ್‌ಟಿಸಿಯಲ್ಲಿರುವ ಚಾಲಕರು, ನಿರ್ವಾಹಕರು

4,377 ಕೆಎಸ್‌ಆರ್‌ಟಿಸಿ ತಾಂತ್ರಿಕ ಸಿಬ್ಬಂದಿ ಸಂಖ್ಯೆ

ಸುದ್ದಿ 2 ನಿಮಿಷ

ಬಿಎಸ್‌ವೈ ಭೇಟಿಯಾದ ಸೋಮಣ್ಣ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ವರುಣ ಹಾಗೂ ಚಾಮರಾಜನಗರ ಎರಡೂ ಕ್ಷೇತ್ರಗಳಲ್ಲಿ ಸೋಲು ಕಂಡ ನಂತರ ಬಿಜೆಪಿ ನಾಯಕರ ವಿರುದ್ಧ ಮುನಿಸಿಕೊಂಡಿದ್ದ ಮಾಜಿ ಸಚಿವ ವಿ.ಸೋಮಣ್ಣ ಅವರು ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿದರು.

ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಬಿ.ವೈ. ವಿಜಯೇಂದ್ರ ಕಣಕ್ಕೆ ಇಳಿಯಬೇಕಿತ್ತು. ಆದರೆ, ಅವರನ್ನು ಶಿಕಾರಿಪುರದಿಂದಲೇ ಕಣಕ್ಕೆ ಇಳಿಸುವಲ್ಲಿ ಯಡಿಯೂರಪ್ಪ ಯಶಸ್ವಿಯಾಗಿದ್ದರು. ಹಾಗಾಗಿ, ಸೋಮಣ್ಣ ಅವರಿಗೆ ವರುಣ ಟಿಕೆಟ್ ನೀಡಲಾಗಿತ್ತು. ಫಲಿತಾಂಶದ ನಂತರ ವಿಜಯೇಂದ್ರ ವಿರುದ್ಧ ಸೋಮಣ್ಣ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದರು.

ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಕಣಕ್ಕೆ ಇಳಿಯಲು ಬಯಸಿರುವ ಸೋಮಣ್ಣ, ಲಿಂಗಾಯತ ನಾಯಕರಾದ ಜಗದೀಶ ಶೆಟ್ಟರ್, ತುಮಕೂರು ಸಂಸದ ಜಿ.ಎಸ್. ಬಸವರಾಜು, ಮಾಜಿ ಶಾಸಕ ಎಂ.ಡಿ.ಲಕ್ಷ್ಮಿನಾರಾಯಣ ಹಾಗೂ ತಮ್ಮ ಪುತ್ರ ಅರುಣ್ ಸೋಮಣ್ಣ ಅವರ ಜತೆ ಡಾಲರ್ಸ್ ಕಾಲೊನಿಯ ಯಡಿಯೂರಪ್ಪ ನಿವಾಸಕ್ಕೆ ಭೇಟಿ ನೀಡಿ, ಮಾತುಕತೆ ನಡೆಸಿದರು.

ಭೇಟಿಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಕ್ಷದ ನಾಯಕರ ಜತೆ ಯಾವುದೇ ಮುನಿಸಿಲ್ಲ. ಇವೆಲ್ಲ ಮನೆಯ ಜಗಳ. ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ತರಬೇಕು. ರಾಜ್ಯದ ಎಲ್ಲ 28 ಸ್ಥಾನಗಳನ್ನು ಗೆಲ್ಲಬೇಕು ಎನ್ನುವುದೇ ಗುರಿ. ತುಮಕೂರು ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟು ಕೊಡುವ ಮಾತುಕತೆಯೂ ನಡೆದಿಲ್ಲ. ಪಕ್ಷದ ವರಿಷ್ಠರ ನಿರ್ಧಾರದಂತೆ ನಡೆದುಕೊಳ್ಳುವೆ' ಎಂದು ಹೇಳಿದರು.

ಸಿದ್ದರಾಮಯ್ಯ ಹತ್ತು ವರ್ಷ ಸಿ.ಎಂ ಆಗಿರಲಿ: ರಾಯರಡ್ಡಿ

ಕನಕಗಿರಿ (ಕೊಪ್ಪಳ): 'ನಾನು ಸಚಿವನಾಗದಿದ್ದರೂ ಪರವಾಗಿಲ್ಲ, ಸಿದ್ದರಾಮಯ್ಯ ಅವರು ಹತ್ತು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿರಬೇಕು' ಎಂದು ಸಿ.ಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಇಲ್ಲಿ ನಡೆಯುತ್ತಿರುವ ಕನಕಗಿರಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಈಗಿನ ರಾಜಕಾರಣದಲ್ಲಿ ಧರ್ಮ, ಜಾತಿ ಹಾಗೂ ಹಣವೇ ಮೇಲಾಗಿದೆ. ಇಂಥ ಕೆಟ್ಟ ಪರಿಸ್ಥಿತಿಯಲ್ಲಿ ಸಮರ್ಥ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾರೆ. ಇದು ನಮ್ಮ ಭಾಗ್ಯ' ಎಂದರು.

'ಜಾತ್ಯತೀತ ನಾಯಕರಾದ ಸಿದ್ದರಾಮಯ್ಯ ಅವರ ಹೃದಯ ಬಡವರ, ನೊಂದವರ ಪರ ಇದೆ. ಹೀಗಾಗಿ ಅವರನ್ನು ಕಂಡರೆ ಕೆಲವರಿಗೆ ಆಗಿ ಬರುವುದಿಲ್ಲ. ಮುಖ್ಯಮಂತ್ರಿ ಹೃದಯವಂತರು ಎನ್ನುವುದನ್ನು ಅವರ ಎದುರು ಹೇಳುವ ಅಗತ್ಯವಿಲ್ಲ. ಆದರೆ, ಸತ್ಯ ಹೇಳಲು ಹಿಂದೇಟು ಹಾಕುವುದಿಲ್ಲ' ಎಂದರು.

ಮೈತ್ರಿ ಕಾರ್ಯಕರ್ತರಿಗೆ ಡಿಕೆಶಿ ಆಹ್ವಾನ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: 'ಎಚ್.ಡಿ. ಕುಮಾರಸ್ವಾಮಿ ಮತ್ತು ಸಿ.ಪಿ. ಯೋಗೇಶ್ವರ್ ಸ್ಟಂಟ್ ಮಾಡಿ ತಬ್ಬಿಕೊಳ್ಳುತ್ತಿದ್ದಾರೆ. ಅವರನ್ನು ಬಿಟ್ಟು ಈಗಲಾದರೂ ಬುದ್ಧಿವಂತರಾಗಿ ನಮ್ಮ ಜೊತೆ ಬನ್ನಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಜೆಪಿ, ಜೆಡಿಎಸ್ ಪಕ್ಷಗಳ ಕಾರ್ಯಕರ್ತರನ್ನು ಆಹ್ವಾನಿಸಿದ್ದಾರೆ.

ಕಳೆದ ನವೆಂಬರ್‌ನಲ್ಲಿ ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತಂದ ‘ರ‍್ಯಾಟ್- ಹೋಲ್ ಮೈನರ್’ಗಳ ತಂಡದಲ್ಲಿ ಹಾಸನ್ ಅವರೂ ಇದ್ದರು.

ಕೇರಳ: ಕುಲಪತಿ ಅಮಾನತು

ತಿರುವನಂತಪುರ (ಪಿಟಿಐ): ವಿದ್ಯಾರ್ಥಿಯೊಬ್ಬನ ಸಾವಿನ ಪ್ರಕರಣ ಸಂಬಂಧ ವಯನಾಡಿನ ಕೇರಳ ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಆರ್. ಶಶೀಂದ್ರನಾಥ್ ಅವರನ್ನು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಶನಿವಾರ ಅಮಾನತು ಮಾಡಿದ್ದಾರೆ.

ವಿದ್ಯಾರ್ಥಿ ಸಿದ್ಧಾರ್ಥನ್ ಸಾವಿಗೆ ಸಂಬಂಧಿಸಿದಂತೆ ಕುಲಪತಿ ನೀಡಿರುವ ವರದಿಯು, ‘ಕುಲಪತಿ ಅವರ ಕರ್ತವ್ಯಲೋಪಕ್ಕೆ ಸಾಕ್ಷಿಯಾಗಿದೆ’ ಎಂದು ರಾಜ್ಯಪಾಲರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ. ‘ಕುಲಪತಿ ತಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಅಸಡ್ಡೆ ಹಾಗೂ ನಿರ್ಲಕ್ಷ್ಯ ತೋರಿದ್ದಾರೆ’ ಎಂದಿದ್ದಾರೆ. ವಿದ್ಯಾರ್ಥಿ ಸಾವು ಪ್ರಕರಣದ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದಾರೆ.

ವಿ.ವಿಯ ಎರಡನೇ ವರ್ಷದ ಪದವಿ ವಿದ್ಯಾರ್ಥಿಯಾಗಿದ್ದ ಸಿದ್ಧಾರ್ಥನ್ ಅವರು ಮೃತದೇಹವು ಹಾಸ್ಟೆಲ್‌ನ ಸ್ನಾನಗೃಹದಲ್ಲಿ ನೇಣು ಹಾಕಿದ ಸ್ಥಿತಿಯಲ್ಲಿ ಫೆ.18 ರಂದು ಪತ್ತೆಯಾಗಿತ್ತು. ಎಸ್‌ಎಫ್‌ಐ ಸಂಘಟನೆಗೆ ಸೇರಿದ ವಿದ್ಯಾರ್ಥಿಗಳು ಮತ್ತು ಕಾರ್ಯಕರ್ತರು ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆಂದು ಸಿದ್ಧಾರ್ಥನ್ ಸ್ನೇಹಿತರುಳಿಸಿರುವುದಾಗಿ, ಆತನ ಪೋಷಕರು ಆರೋಪಿಸಿದ್ದರು.

ತಿರುಪತಿ ದೇಗುಲ ₹112 ಕೋಟಿ ಕಾಣಿಕೆ ಸಂಗ್ರಹ

ತಿರುಪತಿ (ಆಂಧ್ರ ಪ್ರದೇಶ) (ಪಿಟಿಐ): ತಿರುಪತಿಯ ವೆಂಕಟೇಶ್ವರ ದೇವಾಲಯಕ್ಕೆ ಫೆಬ್ರುವರಿ ತಿಂಗಳಲ್ಲಿ 19 ಲಕ್ಷ ಭಕ್ತರು ಭೇಟಿ ನೀಡಿದ್ದು, ಕಾಣಿಕೆ ರೂಪದಲ್ಲಿ ₹112 ಕೋಟಿ ಸಂದಾಯವಾಗಿದೆ ಎಂದು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಶನಿವಾರ ತಿಳಿಸಿದೆ.

ಫೆಬ್ರುವರಿ ತಿಂಗಳಲ್ಲಿ 95 ಲಕ್ಷಕ್ಕೂ ಹೆಚ್ಚು ಲಡ್ಡುಗಳನ್ನು ಮಾರಲಾಗಿದೆ ಎಂದು ಟಿಟಿಡಿ ಕಾರ್ಯನಿರ್ವಹಣಾ ಅಧಿಕಾರಿ (ಇಒ) ಎ.ವಿ.ಧರ್ಮ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿರುಮಲದಲ್ಲಿ ಲಭ್ಯವಿರುವ 7,500 ಕೊಠಡಿಗಳಲ್ಲಿ ಶೇ 85ರಷ್ಟನ್ನು ಸಾಮಾನ್ಯ ಭಕ್ತರಿಗೆ ಹಂಚಲು ನಿರ್ಧರಿಸಲಾಗಿದೆ. ಇದು ಸುಮಾರು 45,000 ಭಕ್ತರಿಗೆ ಸಾಕಾಗುತ್ತದೆ ಎಂದು ರೆಡ್ಡಿ ಹೇಳಿದ್ದಾರೆ.

ಇದಕ್ಕಿಂತ ಹೆಚ್ಚಿನ ವಸತಿ ಸೌಕರ್ಯವನ್ನು ತಿರುಮಲದಲ್ಲಿ ಕಲ್ಪಿಸಲು ಸಾಧ್ಯವಿಲ್ಲ. ಹೀಗಾಗಿ ಉಳಿದವರು ತಿರುಪತಿಯಲ್ಲಿ ಉಳಿದುಕೊಳ್ಳುವಂತೆ ಅವರು ಭಕ್ತರಿಗೆ ಸಲಹೆ ನೀಡಿದ್ದಾರೆ.

ಚೀನಾದಿಂದ ಸೇನಾ ಬಳಕೆಯ ಸರಕು ಸಾಗಾಟದ ಶಂಕೆ

ಪಾಕ್‌ಗೆ ಹೊರಟಿದ್ದ ಹಡಗು ವಶಕ್ಕೆ

ಮುಂಬೈ (ಪಿಟಿಐ): ಪಾಕಿಸ್ತಾನದ ಪರಮಾಣು ಮತ್ತು ಕ್ಷಿಪಣಿ ಕಾರ್ಯಕ್ರಮಗಳಿಗೆ ಬಳಸಬಹುದಾದ ಸರಕು ಹೊಂದಿರುವ ಅನುಮಾನದ ಮೇರೆಗೆ, ಚೀನಾದಿಂದ ಕರಾಚಿಗೆ ಹೊರಟಿದ್ದ ಹಡಗನ್ನು ಭಾರತದ ಭದ್ರತಾ ಸಂಸ್ಥೆಯ ಅಧಿಕಾರಿಗಳು ಮುಂಬೈನ ನ್ಹಾವಾ ಶೇವಾ ಬಂದರಿನಲ್ಲಿ ವಶಕ್ಕೆ ತೆಗೆದುಕೊಂಡಿದ್ದಾರೆ.

ಮಾಲ್ಟಾ ದೇಶದ ಧ್ವಜ ಹೊಂದಿದ್ದ ‘ಸಿಎಂಎ ಸಿಜಿಎಂ ಅ್ಯಟಿಲಾ’ ಹೆಸರಿನ ಹಡಗನ್ನು ಗುಪ್ತಚರ ಮಾಹಿತಿಯನ್ನು ಆಧರಿಸಿ ಕಸ್ಟಮ್ಸ್ ಅಧಿಕಾರಿಗಳು ಜನವರಿ 23 ರಂದು ತಡೆದು ಪರಿಶೀಲನೆ ನಡೆಸಿದ್ದಾರೆ. ಹಡಗಿನಲ್ಲಿ ದ್ವಿ-ಬಳಕೆಯ (ನಾಗರಿಕ ಮತ್ತು ಸೇನಾ ಬಳಕೆಗಳೆರಡಕ್ಕೂ ಉಪಯೋಗಿಸಬಹುದಾದ ತಂತ್ರಜ್ಞಾನ) ಸರಕು ಇರುವುದು ಖಚಿತಪಟ್ಟಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಇಟಲಿಯ ಕಂಪನಿಯೊಂದು ತಯಾರಿಸಿರುವ ಕಂಪ್ಯೂಟರ್ ನ್ಯೂಮರಿಕಲ್ ಕಂಟ್ರೋಲ್ (ಸಿಎನ್‌ಸಿ) ಯಂತ್ರಗಳು ಹಡಗಿನಲ್ಲಿದ್ದವು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಅಧಿಕಾರಿಗಳು ಕೂಡಾ ಸರಕು ಪರಿಶೀಲಿಸಿದ್ದು, ಸಿಎನ್‌ಸಿ ಯಂತ್ರಗಳನ್ನು ಪಾಕಿಸ್ತಾನವು ತನ್ನ ಪರಮಾಣು ಕಾರ್ಯಕ್ರಮಗಳಿಗೆ ಬಳಸುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಪಾಕಿಸ್ತಾನದ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ಪ್ರಮುಖ ಉಪಕರಣಗಳನ್ನು ತಯಾರಿಸಲು ಈ ಯಂತ್ರವು ಉಪಯುಕ್ತವಾಗಿವೆ ಎಂದು ತಜ್ಞರು ತಿಳಿಸಿದ್ದಾರೆ. ಉತ್ತರ ಕೊರಿಯಾ, ತನ್ನ ಪರಮಾಣು ಕಾರ್ಯಕ್ರಮಗಳಿಗೆ ಇದೇ ಯಂತ್ರವನ್ನು ಬಳಕೆ ಮಾಡುತ್ತಿದೆ.

‘ಭಾರಿ ಸರಕು ಹೊತ್ತಿದ್ದ ಹಡಗಿನಲ್ಲಿ ಅನುಮಾನಾಸ್ಪದ ವಸ್ತುಗಳು ಇವೆ ಎಂಬ ಗುಪ್ತಚರ ಮಾಹಿತಿ ದೊರೆತಿದೆ. ಈ ವಿಷಯವನ್ನು ಬಂದರಿನ ಅಧಿಕಾರಿಗಳು ರಕ್ಷಣಾ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಸರಕು ಪರಿಶೀಲಿಸಿದ ಅಧಿಕಾರಿಗಳು ಹಡಗವನ್ನು ವಶಕ್ಕೆ ಪಡೆದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಚೀನಾದಿಂದ ಪಾಕಿಸ್ತಾನದ ಕರಾಚಿಗೆ ಹೊರಟಿದ್ದ ಹಡಗಿನಲ್ಲಿದ್ದ ಸರಕು —ಪಿಟಿಐ ಚಿತ್ರ

ಹಡಗಿನಲ್ಲಿದ್ದ ಸುಮಾರು 22,180 ಕೆ.ಜಿಯಷ್ಟು ಸರಕನ್ನು ಚೀನಾದ ‘ಶಾಂಘೈ ಜೆಎಕ್ಸ್‌ಇ ಗ್ಲೋಬಲ್ ಲಾಜಿಸ್ಟಿಕ್ಸ್’ ಕಂಪನಿಯು ಪಾಕಿಸ್ತಾನದ ಸಿಯಾಲ್‌ಕೋಟ್‌ನ ‘ಪಾಕಿಸ್ತಾನ್ ವಿಂಗ್ಸ್ ಪ್ರೈವೇಟ್ ಲಿಮಿಟೆಡ್’ ಕಂಪನಿಗೆ ಕಳುಹಿಸಿದೆ ಎಂಬುದನ್ನು ಸರಕು ಸಾಗಣೆಗೆ ಸಂಬಂಧಿಸಿದ ಬಿಲ್‌ಗಳು, ಇತರ ದಾಖಲೆಗಳಲ್ಲಿ ತೋರಿಸಲಾಗಿದೆ.

ಆದರೆ, ಹಡಗಿನಲ್ಲಿದ್ದ ಸರಕನ್ನು ತೈಯುವಾನ್ ಮೈನಿಂಗ್ ಇಂಪೋರ್ಟ್ ಅಂಡ್ ಎಕ್ಸ್‌ಪೋರ್ಟ್ ಕಂಪನಿಯು ಪಾಕಿಸ್ತಾನದ ಕಾಸ್ಮೋಸ್ ಎಂಜಿನಿಯರಿಂಗ್ ಕಂಪನಿಗೆ ಕಳುಹಿಸಿದೆ ಎಂಬುದು ಪರಿಶೀಲನೆ ವೇಳೆ ತಿಳಿದುಬಂದಿದೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಚೀನಾದಿಂದ ಪಾಕಿಸ್ತಾನಕ್ಕೆ ಹಡಗು ಮೂಲಕ ಸಾಗಿಸುತ್ತಿದ್ದ ದ್ವಿ-ಬಳಕೆಯ ಸರಕುಗಳನ್ನು ಭಾರತ ವಶಕ್ಕೆ ಪಡೆದದ್ದು ಇದೇ ಮೊದಲಲ್ಲ.

ಶೆಹಬಾಜ್ ಆಯ್ಕೆ ಬಹುತೇಕ ಖಚಿತ

ಇಸ್ಲಾಮಾಬಾದ್ (ಪಿಟಿಐ): ಪಿಎಂಎಲ್-ಎನ್ ಪಕ್ಷದ ನಾಯಕ ಶೆಹಬಾಜ್ ಷರೀಫ್ ಅವರು ಪಾಕಿಸ್ತಾನದ 33ನೆಯ ಪ್ರಧಾನಿಯಾಗಿ ಭಾನುವಾರ ಆಯ್ಕೆ ಆಗುವುದು ಬಹುತೇಕ ಖಚಿತವಾಗಿದೆ.

ಪಿಎಂಎಲ್-ಎನ್ ಮತ್ತು ಪಿಪಿಪಿ ಪಕ್ಷಗಳ ಅಭ್ಯರ್ಥಿಯಾಗಿರುವ ಶೆಹಬಾಜ್ ಅವರು ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ. ಪಿಟಿಐ ಪಕ್ಷದ ಒಮರ್ ಅಯೂಬ್ ಖಾನ್ ಅವರು ಕೂಡ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಶೆಹಬಾಜ್ ಅವರು ನವಾಜ್ ಶರೀಫ್ ಅವರ ತಮ್ಮ. ಹೊಸ ಪ್ರಧಾನಿಯ ಆಯ್ಕೆಗೆ ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಭಾನುವಾರ ಮತದಾನ ನಡೆಯಲಿದೆ. ಗೆಲುವು ಕಂಡ ಅಭ್ಯರ್ಥಿಗೆ ಸೋಮವಾರ ಪ್ರಮಾಣ ವಚನ ಬೋಧಿಸಲಾಗುತ್ತದೆ.

ಅಮೋಘ ಫೀಲ್ಡಿಂಗ್, ಬೌಲಿಂಗ್ ಪ್ರದರ್ಶಿಸಿದ ಮುಂಬೈ ಇಂಡಿಯನ್ಸ್ ಆಟಗಾರ್ತಿಯರು

ಮುಂಬೈ ಮೇಲುಗೈ; ಆರ್‌ಸಿಬಿಗೆ ನಿರಾಶೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಭಿಮಾನಿಗಳ ಆರ್ಭಟ ಮುಗಿಲುಮುಟ್ಟಿತ್ತು.

ಆದರೆ ಇಲ್ಲಿ ಸೇರಿದ್ದ 28 ಸಾವಿರಕ್ಕೂ ಹೆಚ್ಚು ಅಭಿಮಾನಿಗಳಿಗೆ ಆರ್‌ಸಿಬಿ ಆಟಗಾರ್ತಿಯರು ಗೆಲುವಿನ ಕಾಣಿಕೆ ಕೊಡುವಲ್ಲಿ ಮತ್ತೊಮ್ಮೆ ವಿಫಲರಾದರು.

ಇಲ್ಲಿ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆರ್‌ಸಿಬಿ ತಂಡವು ಸತತ ಎರಡನೇ ಸೋಲು ಅನುಭವಿಸಿತು. ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು 7 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಮುಂಬೈ ತಂಡವು ಆರಂಭದಿಂದಲೇ ಯೋಜನಾಬದ್ಧ ಆಟವಾಡಿತು. ಗಾಯದಿಂದಾಗಿ ಹರ್ಮನ್‌ಪ್ರೀತ್ ಕೌರ್ ವಿಶ್ರಾಂತಿ ಪಡೆದಿದ್ದರಿಂದ ನಥಾಲಿ ಶಿವರ್ ಬ್ರಂಟ್ ತಂಡವನ್ನು ಮುನ್ನಡೆಸಿದರು.

ಅಲ್ಲದೇ ನಥಾಲಿ (27ಕ್ಕೆ2 ಮತ್ತು 27ರನ್) ಆಲ್‌ರೌಂಡ್ ಆಟವಾಡಿದರು. ಅಮೆಲಿಯಾ ಕೆರ್ (ಔಟಾಗದೆ 40; 24ಎ, 4X7) ಚೆಂದದ ಬ್ಯಾಟಿಂಗ್ ಮಾಡಿದರು.

ಬೆಂಗಳೂರು ತಂಡವು ಒಡ್ಡಿದ್ದ 132 ರನ್‌ಗಳ ಗುರಿಯನ್ನು ಇನಿಂಗ್ಸ್‌ನಲ್ಲಿ 29 ಎಸೆತಗಳು ಬಾಕಿಯಿದ್ದಾಗಲೇ ಮುಂಬೈ ಮುಟ್ಟಲು ಅಮೆಲಿಯಾ ಆಟ ಕಾರಣವಾಯಿತು. ಅದಕ್ಕಾಗಿ ಮುಂಬೈ ತಂಡದ ಮೂರು ವಿಕೆಟ್ ಗಳಿಸುವಲ್ಲಿ ಆರ್‌ಸಿಬಿ ಬೌಲರ್‌ಗಳು ಯಶಸ್ವಿಯಾದರು.

ಮುಂಬೈ ಇಂಡಿಯನ್ಸ್ ಬ್ಯಾಟರ್ ಅಮೆಲಿಯಾ ಕೆರ್– ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

ಅಮೋಘ ಫೀಲ್ಡಿಂಗ್–ಬೌಲಿಂಗ್: ಬ್ಯಾಟಿಂಗ್ ಆರಂಭಿಸಿದ ಆರ್‌ಸಿಬಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 131 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಅದಕ್ಕೆ ಕಾರಣವಾಗಿದ್ದು ಮುಂಬೈ ತಂಡದ ಬೌಲರ್‌ಗಳ ಶಿಸ್ತಿನ ಬೌಲಿಂಗ್ ಮತ್ತು ಚುರುಕಾದ ಕ್ಷೇತ್ರರಕ್ಷಣೆ. ಸುಮಾರು 40 ರಿಂದ 45 ರನ್‌ಗಳನ್ನು ತಮ್ಮ ಚುರುಕಾದ ಫೀಲ್ಡಿಂಗ್‌ನಿಂದಾಗಿ ತಡೆದರು. ಯಾವುದೇ ಕ್ಯಾಚ್‌ಗಳನ್ನೂ ನೆಲಕ್ಕೆ ಚೆಲ್ಲಲಿಲ್ಲ. ಆರ್‌ಸಿಬಿ ಆಟಗಾರ್ತಿಯರಿಗೆ ಈ ಇನಿಂಗ್ಸ್‌ನಲ್ಲಿ ಒಂದೂ ಸಿಕ್ಸರ್ ಹೊಡೆಯಲು ಸಾಧ್ಯವಾಗಲಿಲ್ಲ. 14 ಬೌಂಡರಿಗಳು ಮಾತ್ರ ದಾಖಲಾದವು.

ಪೆರಿ ಆಸರೆ: ಇದರಿಂದಾಗಿ ಬೆಂಗಳೂರು ತಂಡವು ಮೊದಲ ಪವರ್‌ಪ್ಲೇನಲ್ಲಿಯೇ ಮೂರು ವಿಕೆಟ್ ಕಳೆದುಕೊಂಡು 31 ರನ್ ಗಳಿಸಿ ಸಂಕಷ್ಟದಲ್ಲಿತ್ತು. ಎಲಿಸ್ ಪೆರಿ (ಔಟಾಗದೆ 44; 38ಎ, 4X5) ತಂಡಕ್ಕೆ ಆಸರೆಯಾದರು. ಅವರಿಗೆ ಜಾರ್ಜಿಯಾ ವೆರ್‌ಹಾಮ್ (27; 20ಎ, 4X3) ಉತ್ತಮ ಬೆಂಬಲ ನೀಡಿದರು. ಒತ್ತಡದ ನಡುವೆಯೂ ಪೆರಿ ಮತ್ತು ಜಾರ್ಜಿಯಾ ಏಳನೇ ವಿಕೆಟ್ ಜೊತೆಯಾಟದಲ್ಲಿ 52 ರನ್‌ಗಳನ್ನು ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 131 (ಎಲಿಸ್ ಪೆರಿ ಔಟಾಗದೆ 44, ಜಾರ್ಜಿಯಾ ವೆರ್‌ಹಾಮ್ 27, ನಥಾಲಿ ಶಿವರ್ ಬ್ರಂಟ್ 27ಕ್ಕೆ2, ಪೂಜಾ ವಸ್ತ್ರಾಕರ್ 14ಕ್ಕೆ2)

ಮುಂಬೈ ಇಂಡಿಯನ್ಸ್: 15.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 133 (ಯಷ್ತಿಕಾ ಭಾಟಿಯಾ 31, ಹೆಯಲಿ ಮ್ಯಾಥ್ಯೂಸ್ 26, ನಥಾಲಿ ಶಿವರ್ ಬ್ರಂಟ್ 27, ಅಮೆಲಿಯಾ ಕೆರ್ ಔಟಾಗದೆ 40)

ಫಲಿತಾಂಶ; ಮುಂಬೈ ಇಂಡಿಯನ್ಸ್‌ಗೆ 7 ವಿಕೆಟ್ ಜಯ. ಪಂದ್ಯದ ಆಟಗಾರ್ತಿ: ಅಮೆಲಿಯಾ ಕೆರ್

ಇಂದಿನ ಪಂದ್ಯ: ಗುಜರಾತ್ ಜೈಂಟ್ಸ್–ಡೆಲ್ಲಿ ಕ್ಯಾಪಿಟಲ್ಸ್. ರಾತ್ರಿ 7.30, ನೇರ ಪ್ರಸಾರ ಸ್ಪೋರ್ಟ್ಸ್ 18

ಐಎಸ್‌ಎಲ್: ಆರನೇ ಸ್ಥಾನಕ್ಕೇರಿದ ಚೆಟ್ರಿ ಪಡೆ

ಜಾವಿ ಗೋಲು: ಬಿಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂದ್ಯ ಮುಕ್ತಾಯಕ್ಕೆ ಕೆಲವೇ ಕ್ಷಣಗಳಿದ್ದಾಗ ಜಾವಿ ಹರ್ನಾಂಡಿಸ್ ಗಳಿಸಿದ ಗೋಲಿನಿಂದಾಗಿ ಬೆಂಗಳೂರು ಎಫ್‌ಸಿ ತಂಡ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡದ ಮೇಲೆ 1–0 ಗೋಲಿನ ಗೆಲುವು ಪಡೆಯಿತು.

ಗೆಲುವಿನಿಂದ ಅಮೂಲ್ಯ ಮೂರು ಪಾಯಿಂಟ್ಸ್ ಪಡೆದ ಜೆರಾಲ್ಡ್ ಝಾರ್ಗೋಝಾ ತರಬೇತಿಯ ಬ್ಲೂಸ್ ತಂಡ 18 ಪಂದ್ಯಗಳಿಂದ 21 ಪಾಯಿಂಟ್ಸ್ ಸಂಗ್ರಹಿಸಿ ಆರನೇ ಸ್ಥಾನಕ್ಕೆ ಜಿಗಿಯಿತು.

ಬೆಂಗಳೂರು ತಂಡ ಈ ಪಂದ್ಯಕ್ಕೆ ಅಲೆಕ್ಸ್ ಜೊವಾನೊವಿಕ್ ಮತ್ತು ಸುರೇಶ್ ವಾಂಗ್ಜಾಮ್ ಅವರನ್ನು ಮರಳಿ ಸೇರಿಸಿಕೊಂಡಿತು. ಕೇರಳ ಪರ ದೈಸುಕೆ ಸಕೈ ಮತ್ತು ದಿಮಿತ್ರಿಯೋಸ್ ದೈಮಾಂತಕೊಸ್ ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಎರಡೂ ತಂಡಗಳು ನಿಯಂತ್ರಣ ಸಾಧಿಸಲು ಆರಂಭದಿಂದಲೇ ಪೈಪೋಟಿಗಿಳಿದವು. ಸ್ಪೇನ್‌ನ ಜಾವಿ ಪಾಸ್‌ನಲ್ಲಿ ಸುನಿಲ್ ಚೆಟ್ರಿ ಯತ್ನವನ್ನು ಬ್ಲಾಸ್ಟರ್ಸ್ ಗೋಲಿನ ಬಳಿ ಕರಣಜಿತ್ ಸಿಂಗ್ ತಡೆದರು. ಮತ್ತೊಂದು ಅವಕಾಶದಲ್ಲಿ ವಾಂಗ್ಜಾಮ್ ನೀಡಿದ ಕ್ರಾಸ್‌ನಲ್ಲಿ ಚೆಟ್ರಿ ಅವರ 'ಹೆಡ್ಡರ್' ಗೋಲಿನ ಕೆಲವೇ ಇಂಚು ಮೇಲಿಂದ ಹೊರಹೋಯಿತು.

ಗೋಲು ಹೊಡೆದ ಬೆಂಗಳೂರು ಎಫ್‌ಸಿ ತಂಡದ ಜಾವಿ ಹರ್ನಾಂಡಿಸ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು.

ವಿರಾಮದ ನಂತರವೂ ಬಿಎಫ್‌ಸಿ ತಂಡ ಕೆಲವು ಯತ್ನಗಳಲ್ಲಿ ಗೋಲು ಗಳಿಸಲು ವಿಫವಾಯಿತು. ವಾಂಗ್ಜಾಮ್ ಅವರ ಕ್ರಾಸ್‌ನಲ್ಲಿ ಜಾವಿ ಅವರ ಗೋಲಿನ ಪ್ರಯತ್ನವನ್ನು ಮಾಂಟೆನಿಗ್ರೊದ ಸೆಂಟರ್ ಹಾಫ್ ಆಟಗಾರ ಮಿಲೊಸ್ ಡ್ರಿನ್ಸಿಕ್ ವಿಫಲಗೊಳಿಸಿದರು.

ಬ್ಲಾಸ್ಟರ್ಸ್ ತಂಡಕ್ಕೆ, ಪಂದ್ಯ ಮುಕ್ತಾಯಕ್ಕೆ ಕೆಲವು ನಿಮಿಷ ಮೊದಲು ದೊರೆತ ಉತ್ತಮ ಅವಕಾಶದಲ್ಲಿ ಸಬ್‌ಸ್ಟಿಟ್ಯೂಟ್ ರಾಹುಲ್ ಕೆ.ಪಿ. ಕ್ರಾಸ್ ಮೂಲಕ ಗೋಲು ಗಳಿಸಲು ಯತ್ನಿಸಿದರೂ, ಗುರುಪ್ರೀತ್ ಅದನ್ನು ಆಚೆ ದೂಡಿದರು.

ಬ್ಲೂಸ್ ತಂಡ ತನ್ನ ಮುಂದಿನ ಪಂದ್ಯವನ್ನು ಮಾರ್ಚ್ 14ರಂದು ಗೋವಾ ಎಫ್‌ಸಿ ವಿರುದ್ಧ ಗೋವಾದಲ್ಲಿ ಆಡಲಿದೆ.

‘ಆಲ್‌ರೌಂಡರ್‌ಗಳು ಯಶಸ್ಸಿಗೆ ಕಾರಣ’

ಪುಣೇರಿ ಪಲ್ಟನ್ ಕೋಚ್ ಬಿ.ಸಿ. ರಮೇಶ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಣೇರಿ ಪಲ್ಟನ್, ಹೈದರಾಬಾದಿನಲ್ಲಿ ನಡೆದ ಪ್ರೊ ಕಬಡ್ಡಿ ಲೀಗ್‌ನ ಹತ್ತನೇ ಆವೃತ್ತಿಯಲ್ಲಿ ಮೊದಲ ಸಲ ಚಾಂಪಿಯನ್ ಆಗಿದೆ. ಮೂರು ತಿಂಗಳು ಹರಡಿಕೊಂಡಿದ್ದ ಲೀಗ್‌ನಲ್ಲಿ ಅಗ್ರಸ್ಥಾನ ಪಡೆದು, ನಂತರ ಫೈನಲ್‌ನಲ್ಲೂ ಅರ್ಹ ಗೆಲುವು ಸಾಧಿಸಿದ ಈ ತಂಡಕ್ಕೆ ತರಬೇತಿ ನೀಡಿದವರು ಕನ್ನಡಿಗ, ಮಾಜಿ ಅಂತರರಾಷ್ಟ್ರೀಯ ಆಟಗಾರ ಬಿ.ಸಿ.ರಮೇಶ್.

ಶನಿವಾರ ಬೆಂಗಳೂರಿಗೆ ಹಿಂತಿರುಗಿದ ರಮೇಶ್ ‘ಪ್ರಜಾವಾಣಿ’ ಜೊತೆ ಸಂಭ್ರಮ ಹಂಚಿಕೊಂಡರು. ‘ಆಲ್‌ರೌಂಡ್ ಆಟಗಾರರು ನಮ್ಮ ತಂಡದ ಶಕ್ತಿಯಾಗಿದ್ದರು. ಇದರಿಂದ ನಮಗೆ ತಂತ್ರ ರೂಪಿಸುವ ಯೋಚನೆಯಾಗಲಿ, ಒತ್ತಡವಾಗಲಿ ಇರಲಿಲ್ಲ. ನಮ್ಮ ತಂಡ ಯಾರೊಬ್ಬರನ್ನೂ ಬಹುವಾಗಿ ಅವಲಂಬಿಸಿರಲಿಲ್ಲ’ ಎಂದರು.

ಬಿ.ಸಿ. ರಮೇಶ್

‘ತಂಡದ ಆಟಗಾರ, ಇರಾನ್‌ನ ಮೊಹಮ್ಮದ್‌ರೇಝಾ ಶಾಡ್ಲು ಮೂಲತಃ ರಕ್ಷಣಾ ವಿಭಾಗದ ಆಟಗಾರ. ಆದರೆ ಸಮರ್ಥ ರೈಡರ್ ಎಂಬುದನ್ನು ಹಾಂಗ್‌ಝೌ ಏಷ್ಯನ್ ಗೇಮ್ಸ್ ವೇಳೆ ಗಮನಿಸಿದ್ದೆ. ಆಲ್‌ರೌಂಡ್ ಸಾಮರ್ಥ್ಯವನ್ನು ಇಲ್ಲಿ ತೋರಿದರು. ರಕ್ಷಣೆ ವಿಭಾಗದಲ್ಲಿ ತಂಡದ ಶಕ್ತಿಯಾಗಿರುವ ಗೌರವ್ ಖತ್ರಿ ಅವರು ಮೂಲತಃ ರೈಡರ್ ಆಗಿದ್ದವರು. ಆದರೆ ರೈಟ್ ಕಾರ್ನರ್ ಡಿಫೆನ್ಸ್‌ನಲ್ಲಿ ಅವರು ಉತ್ತಮವಾಗಿ ಆಡಿ ತೋರಿಸಿದರು. ನಂತರ ಡಿಫೆನ್ಸ್‌ನಲ್ಲಿ ವಹಿಸಿದ ಕೆಲಸವನ್ನು ಚೆನ್ನಾಗಿ ನಿಭಾಯಿಸಿದರು’ ಎಂದು ರಮೇಶ್ ಕೆಲವು ಉದಾಹರಣೆಗಳನ್ನು ನೀಡಿದರು. ಈ ಆವೃತ್ತಿಯಲ್ಲಿ ಶಾಡ್ಲು ಅವರು 99 ಟ್ಯಾಕ್ಲಿಂಗ್ ಪಾಯಿಂಟ್ಸ್ ಗಳಿಸಿದ್ದಾರೆ.

ರೈಡರ್‌ಗಳಾದ ಮೋಹಿತ್ ಗೋಯತ್ ಮತ್ತು ನಾಯಕ ಅಸ್ಲಂ ಇನಾಮದಾರ್ ಕೆಲವು ಪಂದ್ಯಗಳಲ್ಲಿ ರಕ್ಷಣೆಯಲ್ಲೂ ಮಿಂಚಿದ್ದು ಅವರ ಶ್ಲಾಘನೆಗೆ ಪಾತ್ರವಾಗಿತ್ತು.

‘ನಮ್ಮ ತಂಡದ ಬಹುತೇಕ ಆಟಗಾರರು ಸಣ್ಣ ವಯಸ್ಸಿನವರು. ಇನ್ನೂ ಕಲಿಯಬೇಕು. ಚೆನ್ನಾಗಿ ಆಡಬೇಕು ಎಂಬ ತುಡಿತ ಹೊಂದಿದವರು. ಆಟಗಾರರ ಈ ಗುಣ ಖುಷಿ ನೀಡಿತು’ ಎಂದರು.

ಟೆನಿಸ್: ಪಂದ್ಯದಿಂದ ರುಬ್ಲೆವ್ ಹೊರಕ್ಕೆ

ದುಬೈ (ಎಎಫ್‌ಪಿ) : ಲೈನ್ ಅಂಪೈರ್ ವಿರುದ್ಧ ಅಸಭ್ಯ ಭಾಷೆ ಬಳಸಿದರೆಂಬ ಕಾರಣಕ್ಕೆ ರಷ್ಯಾದ ಆಂಡ್ರೆ ರುಬ್ಲೆವ್ ಅವರನ್ನು ದುಬೈ ಎಟಿಪಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಶುಕ್ರವಾರ ಅನರ್ಹಗೊಳಿಸಲಾಯಿತು. ಅವರ ಎದುರಾಳಿ ಕಜಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ವಿಜೇತರೆಂದು ಘೋಷಿಸಲಾಯಿತು.

ಹೊಸ ಚೆಂಡುಗಳನ್ನು ನೀಡಿದ ಸಮಯದ ಬಗ್ಗೆ ಬುಬ್ಲಿಕ್ ಮತ್ತು ಚೇರ್ ಅಂಪೈರ್ ಮಿರಿಯಮ್ ಬ್ಲೇ ನಡುವೆ ವಾಗ್ವಾದ ನಡೆಯಿತು. ಎದುರಾಳಿಯಾಗಿದ್ದ ರುಬ್ಲೆವ್ 6-7 (4/7), 7-6 (7/5), 6-5 ರಲ್ಲಿ ಮುನ್ನಡೆಯಲ್ಲಿದ್ದು ತಾಳ್ಮೆ ಕಳೆದುಕೊಂಡು ಲೈನ್ ಅಂಪೈರ್ ಕಡೆಗೆ ಕೂಗಿದರು ಮತ್ತು ರಷ್ಯನ್ ಭಾಷೆಯಲ್ಲಿ ತಮ್ಮ ಸಹೋದ್ಯೋಗಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು.

ಚೆನ್ನೈ ಆಟಗಾರರ ಅಭ್ಯಾಸ ಶುರು

ಚೆನ್ನೈ (ಪಿಟಿಐ): ಇದೇ ತಿಂಗಳು ಆರಂಭವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಚೆನ್ನೈ ಸೂಪರ್ ಕಿಂಗ್ಸ್ ಪೂರ್ವಸಿದ್ಧತೆಯನ್ನು ಆರಂಭಿಸಿದೆ.

ಬೌಲರ್ ದೀಪಕ್ ಚಾಹರ್ ಶನಿವಾರ ಅಭ್ಯಾಸದಲ್ಲಿದ್ದರು. ಭಾರತ ತಂಡಕ್ಕೆ ಮರಳುವ ಛಲದಲ್ಲಿದ್ದಾರೆ. ಐಪಿಎಲ್‌ನ ಎಲ್ಲ ಪಂದ್ಯಗಳಲ್ಲಿಯೂ ಆಡಿ ಆಯ್ಕೆಗಾರರ ಗಮನ ಸೆಳೆಯುವ ವಿಶ್ವಾಸದಲ್ಲಿದ್ದಾರೆ.

‘ತಂಡದಲ್ಲಿರುವ ಭಾರತೀಯ ಆಟಗಾರರ ಮೊದಲ ಬ್ಯಾಚ್ ಶುಕ್ರವಾರ ಇಲ್ಲಿಗೆ ಬಂದಿದ್ದಾರೆ. ಕೆಲವೇ ದಿನಗಳಲ್ಲಿ ಉಳಿದವರೆಲ್ಲರೂ ಬಂದು ಸೇರಿಕೊಳ್ಳುವ ನಿರೀಕ್ಷೆ ಇದೆ’ ಎಂದು ತಮಿಳುನಾಡು ಕ್ರಿಕೆಟ್ ಸಂಸ್ಥೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊದಲ ಬ್ಯಾಚ್‌ನಲ್ಲಿ ವೇಗಿಗಳಾದ ದೀಪಕ್ ಚಾಹರ್, ಸಿಮರ್‌ಜೀತ್ ಸಿಂಗ್, ಮುಕೇಶ್ ಚೌಧರಿ, ಸ್ಪಿನ್ನರ್ ಪ್ರಶಾಂತ್ ಸೋಳಂಕಿ, ಆಲ್‌ರೌಂಡರ್ ರಾಜವರ್ಧನ್ ಹಂಗರಗೇಕರ್ ಹಾಗೂ ಅಜಯ್ ಮಂಡಲ್ ಇದ್ದಾರೆ.

ದೀಪಕ್ ಚಾಹರ್

ಕಳೆದ ಡಿಸೆಂಬರ್‌ನಿಂದಲೂ ದೀಪಕ್ ಚಾಹರ್ ಕ್ರಿಕೆಟ್ ಆಡಿಲ್ಲ. ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯಿಂದ ಅವರು ಹಿಂದೆ ಸರಿದಿದ್ದರು. ನಂತರ ದಕ್ಷಿಣ ಆಫ್ರಿಕಾ ಪ್ರವಾಸಕ್ಕೂ ಅವರು ಹೋಗಿರಲಿಲ್ಲ. ತಮ್ಮ ತಂದೆಯ ಅನಾರೋಗ್ಯದ ಕಾರಣ ಅವರು ಸರಣಿಯಲ್ಲಿ ಆಡಿರಲಿಲ್ಲ.

ಮಾರ್ಚ್ 22ರಂದು ಚೆನ್ನೈ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಮೊದಲ ಪಂದ್ಯ ಆಡಲಿದೆ. ಇದು ಟೂರ್ನಿಯ ಉದ್ಘಾಟನೆ ಪಂದ್ಯವೂ ಹೌದು.

ಐಟಿಎಫ್: ಅಂಕಿತಾ ಪರಾಭವ

ಗುರುಗ್ರಾಮ (ಪಿಟಿಐ): ಪ್ರಶಸ್ತಿಗೆ ತವರಿನ ನೆಚ್ಚಿನ ಆಟಗಾರ್ತಿಯಾಗಿದ್ದ ಅಂಕಿತಾ ರೈನಾ ಅವರು ಐಟಿಎಫ್ ಮಹಿಳಾ ಓಪನ್‌ನ ಸಿಂಗಲ್ಸ್‌ನ ಸೆಮಿಫೈನಲ್‌ನಲ್ಲಿ ಶ್ರೇಯಾಂಕರಹಿತ ಯೊನ್ ವ್ಹೂ ಕು ವಿರುದ್ಧ ನೇರ ಸೆಟ್‌ಗಳ ಸೋಲನುಭವಿಸಿದರು. ಆದರೆ, ಕಜಕಸ್ತಾನದ ಸಹ ಆಟಗಾರ ಜಿಬೆಕ್ ಕುಲಂಬಯೇವಾ ಅವರೊಂದಿಗೆ ಡಬಲ್ಸ್ ಪ್ರಶಸ್ತಿಯನ್ನು ಗೆದ್ದರು.

ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ್ತಿ ಅಂಕಿತಾ 6-7 (4), 3-6 ರಿಂದ ಕೊರಿಯಾದ ಎದುರಾಳಿ ವಿರುದ್ಧ ಸೋಲು ಕಂಡರು.

ಅಗ್ರ ಶ್ರೇಯಾಂಕದ ಸ್ಲೊವೇನಿಯಾ ಆಟಗಾರ್ತಿ ದಲಿಲಾ ಜಕುಪೊವಿಕ್ ಅವರು 6-4, 2-6, 7-6 (0) ರಿಂದ ಲಿಥುವೇನಿಯಾದ ಮೂರನೇ ಶ್ರೇಯಾಂಕದ ಜಸ್ಟಿನಾ ಮಿಕುಲ್‌ಸ್ಕಿಟ್ ವಿರುದ್ಧ ಸೋತರು.

ಅಂಕಿತಾ ನಂತರ ಕುಲಂಬಯೇವಾ ಅವರ ಜೊತೆಗೂಡಿ ಡಬಲ್ಸ್ ಫೈನಲ್‌ನಲ್ಲಿ 6–4, 6–2 ರಿಂದ ಸ್ವೀಡನ್‌ನ ಜಾಕ್ವೆಲಿನ್ ಕಬಾಜ್ ಅವಾದ್ ಮತ್ತು ಜಸ್ಟಿನಾ ಮಿಕುಲ್‌ಸ್ಕಿಟ್ ಅವರನ್ನು ಮಣಿಸಿದರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ, ಸೋಮವಾರಪೇಟೆ ತಾ॥ ಕೊಡಗು ಜಿಲ್ಲೆ–571234, ಕರ್ನಾಟಕ
ದೂರವಾಣಿ ಸಂಖ್ಯೆ:08276–274365, ಫ್ಯಾಕ್ಸ್ ಸಂಖ್ಯೆ: 08276–274365, ಇ–ಮೇಲ್: eehrdksh@gmail.com
ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಬಿ/ಟೆಂಡರ್ ಪ್ರಕಟಣೆ ಸಂಖ್ಯೆ:11/23–24, ದಿನಾಂಕ: 02.03.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಐಟಂವಾರು: ಕೆಪಿಪಿಪಿ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಈ ವಿಭಾಗ ವತಿಯಿಂದ ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಒಟ್ಟು 3 ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳ ಅಂದಾಜು ಮೊತ್ತ ರೂ. 450.00 ಲಕ್ಷಗಳಿಂದ 490.00 ಲಕ್ಷಗಳಿದ್ದು, ಈ ಕಾಮಗಾರಿಗಳಿಗೆ ನಿಗದಿತ ದರ್ಜೆ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ದಿನಾಂಕ: 13.03.2024ರ ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: 14.03.2024ರ ಅಪರಾಹ್ನ 4.30 ಗಂಟೆಗೆ ತೆರೆಯಲಾಗಿದ್ದು ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ವೆಬ್‌ಸೈಟ್ ವಿಳಾಸ: https://kppp.karnataka.giv.in ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹಾರಂಗಿ ಪುನರ್ವಸತಿ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕುಶಾಲನಗರ, ಸೋಮವಾರಪೇಟೆ ತಾ, ಕೊಡಗು ಜಿಲ್ಲೆ–571234

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ
ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101
ಸಂ:ಮನಪಾಬ/ಆ.ಶಾ/ವಾ.ವಿ/ಡ್ರೈವರ್ಸ್/ಟೆಂಡರ್/ ಪ.ಪ್ರ/02/2023–24 ದಿನಾಂಕ: .02.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆ, ದ್ರವ ತ್ಯಾಜ್ಯ ವಸ್ತು ನಿರ್ವಹಣೆ ಹಾಗೂ ಇತರೆ ವಿವಿಧ ಮಾದರಿಯ ವಾಹನಗಳಿಗೆ ಅವಶ್ಯವಿರುವ ಚಾಲಕರು, ಚಾಲಕರು ಕಮ್ ಆಪರೇಟರ್ಸ್ , ಕ್ಲೀನರ್ಸ್ ಮತ್ತು ಮೆಕ್ಯಾನಿಕ್ ಹಾಗೂ ಎಲೆಕ್ಟ್ರಿಷಿಯನ್ ಸೇವೆಯನ್ನು ಹೊರ ಗುತ್ತಿಗೆ ಮೂಲಕ ಪೂರೈಸಿಕೊಳ್ಳಲು ನಿರ್ಧರಿಸಿದ್ದು, ಪ್ರಯುಕ್ತ ಅರ್ಹ ಮಾನವ ಸಂಪನ್ಮೂಲ ಸರಬರಾಜು ಏಜೆನ್ಸಿದಾರರು ಕರ್ನಾಟಕ ನಾಗರೀಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಮತ್ತು ತಿದ್ದುಪಡಿ ನಿಯಮಗಳ 2001 ರಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಸಿ–6ರ ನಿಯಮಗಳನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಧಿಕೃತ ಏಜೆನ್ಸಿದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಇಂಡೆಂಟ್ ಸಂಖ್ಯೆ: DMA/2023-24/SE2473 ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್ https://eproc.karnataka.gov.inನಲ್ಲಿ ಪಡೆದುಕೊಳ್ಳಬಹುದು.

1) ಕರ್ನಾಟಕ ಪಬ್ಲಿಕ್ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ: 22.02.2024 ಸಾಯಂಕಾಲ:05:00 ಗಂಟೆಯಿಂದ
2) ಆನ್‌ಲೈನ್ ಮೂಲಕ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:08.03.2024 ಸಂಜೆ 5.00 ರೊಳಗಾಗಿ.
3) ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ತೆರೆಯುವ ದಿನಾಂಕ:11.03.2024 ರಂದು ಬೆಳಿಗ್ಗೆ 11.00ಗಂಟೆಗೆ.
4) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ:28.02.2024 ರಂದು ಬೆಳಿಗ್ಗೆ 11.00 ಗಂಟೆಗೆ ಮಹಾ ನಗರಪಾಲಿಕೆಯ ಸಭಾಂಗಣದಲ್ಲಿ.
5) ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ	ವಿವರ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1	Providing the services of drivers , drivers cum operators, cleaners , mechanic and electrician to swm and non wsm vehicles of Ballari City Corporation, Ballari	ರೂಗಳಲ್ಲಿ 4,93,00,000/–	7,39,500/–

ಸೂಚನೆ:–ಯಾವುದೇ ತಿದ್ದುಪಡಿ ಅಥವಾ ಬದಲಾವಣೆಗಳಿದ್ದರೆ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ತಮ್ಮ ವಿಶ್ವಾಸಿ
ಆಯುಕ್ತರು
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ
ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101
ಸಂ:ಮನಪಾಬ/ಆ.ಶಾ/ವಾ.ವಿ/ಡ್ರೈವರ್ಸ್/ಟೆಂಡರ್/ ಪ.ಪ್ರ/02/2023–24 ದಿನಾಂಕ: .02.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಳ್ಳಾರಿ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಉಪಯೋಗಿಸಲು ಮಾಸಿಕ ಬಾಡಿಗೆ ಆಧಾರದ ಮೇಲೆ05ಸಂಖ್ಯೆಯ ಎ.ಸಿ ವಾಹನಗಳು ಮತ್ತು 12 ಸಂಖ್ಯೆಯ ನಾನ್ ಎ.ಸಿ ವಾಹನಗಳು ಮತ್ತು 2 ಸಂಖ್ಯೆ ಇನ್ನೋವಾ ಕ್ರಿಷ್ಟ ಇಂಧನ ಹಾಗೂ ಚಾಲಕರ ಸಹಿತ ಸೇವೆಯನ್ನು ಪಡೆಯಲು ನಿರ್ಧರಿಸಿದ್ದು, ಪ್ರಯುಕ್ತ ಅರ್ಹ ಏಜೆನ್ಸಿದಾರರು ಕರ್ನಾಟಕ ನಾಗರೀಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಮತ್ತು ತಿದ್ದುಪಡಿ ನಿಯಮಗಳ 2001 ರಂತೆ ಟೆಂಡರ್ ಆಹ್ವಾನಿಸಲಾಗಿದೆ ಆಸಕ್ತಿಯುಳ್ಳ ಅಧಿಕೃತ ಏಜೆನ್ಸಿದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (ಟೆಂಡರ್ ಇಂಡೆಂಟ್ ಸಂಖ್ಯೆ:DMA/2023-24/SE2531 ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್ https://eproc.karnataka.gov.inನಲ್ಲಿ ಪಡೆದುಕೊಳ್ಳಬಹುದು.

1) ಕರ್ನಾಟಕ ಪಬ್ಲಿಕ್ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ: 22.02.2024 ಸಾಯಂಕಾಲ:05:00 ಗಂಟೆಯಿಂದ
2) ಆನ್‌ಲೈನ್ ಮೂಲಕ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:08.03.2024 ಸಂಜೆ 5.00 ರೊಳಗಾಗಿ.
3) ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ತೆರೆಯುವ ದಿನಾಂಕ:11.03.2024 ರಂದು ಬೆಳಿಗ್ಗೆ 11.00ಗಂಟೆಗೆ.
4) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ:28.02.2024 ರಂದು ಬೆಳಿಗ್ಗೆ 11.00 ಗಂಟೆಗೆ ಮಹಾ ನಗರಪಾಲಿಕೆಯ ಸಭಾಂಗಣದಲ್ಲಿ.
5) ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ	ವಿವರ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1	Providing Vehicles/Cars along with Driver and Fuel on hire Basis for Office work to the Ballari City Corporation.	ರೂ.ಗಳಲ್ಲಿ 99,99,000/–	ರೂ.ಗಳಲ್ಲಿ 1,99,980/–

ಸೂಚನೆ:–ಯಾವುದೇ ತಿದ್ದುಪಡಿ ಅಥವಾ ಬದಲಾವಣೆಗಳಿದ್ದರೆ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ತಮ್ಮ ವಿಶ್ವಾಸಿ
ಆಯುಕ್ತರು
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರ ಕಛೇರಿ (ತಾಂತ್ರಿಕ), ಬೆಂಘತ್ಯಾನಿನಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.
ಸಂ: ಮುಅ&ಮುಪ್ರವ್ಯ(ತಾಂ)/ಬೆಂಘತ್ಯಾನಿನಿ/ಟೆಂಡ್/11/2023–24 ದಿನಾಂಕ:02.03.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ಕರೆ–2)

1. SBM 2.0 ಅನುದಾನದ ಅಡಿಯಲ್ಲಿ (ರಾಜ್ಯ, ಕೇಂದ್ರ ಮತ್ತು ULB ಹಂಚಿಕೆ) ಮತ್ತು ಕೆಳಗಿನ ಕೆಲಸಕ್ಕಾಗಿ ಪರಂಪರೆ ತ್ಯಾಜ್ಯವನ್ನು ಸಂಸ್ಕರಿಸಲು NGT ಪರಿಹಾರ ಮೊತ್ತದ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ.
2. ಈ ನಿಟ್ಟಿನಲ್ಲಿ, ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ, ಬೆಂಗಳೂರು ಅವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗೆ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನ (ಅಂದರೆ https://kppp.karnataka.gov.in) ಮೂಲಕ ಕೋಷ್ಟಕದಲ್ಲಿ ನೀಡಲಾದ ಕಾಮಗಾರಿಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು ಬಿಡ್‌ದಾರರು ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಅರ್ಹತೆ ಪಡೆಯಲು ಕೆ.ಡಬ್ಲ್ಯೂ–6 ನೋಂದಾಯಿತ ಗುತ್ತಿಗೆದಾರರಾಗಿರಬೇಕು.
3. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.
5. GST ಅನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿನ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿ)
1	ಮಹದೇವಪುರ ವಿಧಾನಸಭಾ ಕ್ಷೇತ್ರದ ಮಂಡೂರಿನ ಸರ್ವೆ ಸಂಖ್ಯೆ 155 ರಿಂದ ಲೆಗಸಿ ತ್ಯಾಜ್ಯದ ಜೈವಿಕ ಗಣಿಗಾರಿಕೆ ಕಾಮಗಾರಿಗಳು. (ಹಂತ–2).	(7967.53 + 18% ಜಿಎಸ್‌ಟಿ)= 9401.68	24 ತಿಂಗಳು

1. ಬಿಡ್ ಪೂರ್ವಭಾವಿ ಸಭೆಯು **06.03.2024 ರಂದು 15:00 ಗಂಟೆಗೆ** ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ ನಡೆಯಲಿದೆ.
2. ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು **13.03.2024 ರಂದು ಅಥವಾ 16:00 ಗಂಟೆಗಳ ಮೊದಲು** ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ https://kppp.karnataka.gov.in ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್ ಅನ್ನು ಕೆಪಿಪಿ–ಪೋರ್ಟಲ್ ಮೂಲಕ **14.03.2024 ರಂದು 16:30 ಗಂಟೆಗಳ ನಂತರ** ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ. ಬಿಡ್ದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ನಿರ್ದಿಷ್ಟಪಡಿಸಿದಂತೆ ಬಿಡ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಬಿಡ್‌ಗಳನ್ನು ತೆರೆಯಲಾಗುತ್ತದೆ.
3. ನಿಯಂತ್ರಣಕ್ಕೆ ಮೀರಿದ ಸಿಸ್ಟಮ್ ವೈಫಲ್ಯದ ಕಾರಣದಿಂದಾಗಿ ಯಾವುದೇ ವಿಳಂಬಗಳಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರವಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್‌ನ ಇ–ಮೇಲ್ ವಿಳಾಸ https://kppp.karnataka.gov.in ಆಗಿದೆ.ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರರಾಗಿರುವುದಿಲ್ಲ.
4. ಯಾವುದೇ ತಿದ್ದುಪಡಿ/ಅನುಬಂಧಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ವಾಸಾಸಂಇ/ವಾಪ್ರ/4041/2023–24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ.
ಸಂಖ್ಯೆ:ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಅ.ವಿ.–3/2023–24/1232 ದಿನಾಂಕ:29–02–2024

ತಿದ್ದುಪಡಿ–3, ಶೇಕಡಾವಾರು ಟೆಂಡರ ಅಧಿಸೂಚನೆ.(ಅಲ್ಪಾವಧಿ)
(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ). (ದ್ವಿ ಲಕೋಟೆಯಲ್ಲಿ)

ಸಂಖ್ಯೆ: 1) ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಟೆಂಡರ/2023–24/1051 ದಿನಾಂಕ:24–01–2024
2) ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಅ.ವಿ.–1/2023–24/1139 ದಿನಾಂಕ:12.02.2024
3) ಕಾಅ/ಕ.ನೀ.ನಿ.ನಿ/ಕೆಪಿಸಿ–2/ಭಾಲ್ಕಿ/ಪಿಬಿ–1/ಅ.ವಿ.–2/2023–24/1166 ದಿನಾಂಕ:17–02–2024

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ, ವಿಭಾಗದಿಂದ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಛೇರಿಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ ಇ–ಪ್ರೋಕ್ಯೂರಮೆಂಟ್ ಮುಖಾಂತರ ಆವ್ಹಾನಿಸಲಾಗಿರುತ್ತದೆ, ವಿವರಗಳು ಈ ಕೆಳಗಿನಂತೆ ಇರುತ್ತವೆ.

ಹಿಂದಿನ ಕಾಲಾವಧಿ: ಕಾಮಗಾರಿಯ ಇಂಡೆಂಟ್ ಸಂ. 1) 698 ಇರುತ್ತದೆ. ಹಾಗೂ ಟೆಂಡರಿಗಿಟ್ಟ ಮೊತ್ತ) 1) Rs.204.703 Crores, ವರೆಗೆ ಇರುತ್ತದೆ. ಇ.ಎಂ.ಡಿ ಮೊತ್ತ Rs. 2.42 Crores ಹಾಗೂ ಅರ್ಹ ಗುತ್ತಿಗೆದಾರರ ವಿವರ ಇ–ಪೋರ್ಟಲ್‌ನಂತೆ ಇರುತ್ತದೆ. ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ :i) ಗುತ್ತಿಗೆದಾರರು ಇ–ಪೋರ್ಟಲ್ ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 25–01–2024 b) The Last date of Submission of completed tender documents 29-02-2024 @ 16.30Hrs c) Date of Opening of Technical Bid is 01-03-2024 @ 17.00 Hrs & Financial bid is 04-03-2024 @ 17.00 Hrs respectively. All details & information can be had from the office of the under signed during

ಮಾರ್ಪಾಡಿತ ಕಾಲಾವಧಿ: ಕಾಮಗಾರಿಯ ಇಂಡೆಂಟ್ ಸಂ. 1) 698 ಇರುತ್ತದೆ. ಹಾಗೂ ಟೆಂಡರಿಗಿಟ್ಟ ಮೊತ್ತ) 1) Rs.204.703 Crores, ವರೆಗೆ ಇರುತ್ತದೆ. ಇ.ಎಂ.ಡಿ ಮೊತ್ತ Rs. 2.42 Crores ಹಾಗೂ ಅರ್ಹ ಗುತ್ತಿಗೆದಾರರ ವಿವರ ಇ–ಪೋರ್ಟಲ್‌ನಂತೆ ಇರುತ್ತದೆ. ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ :i) ಗುತ್ತಿಗೆದಾರರು ಇ–ಪೋರ್ಟಲ್‌ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 25–01–2024, b) The Last date of Submission of completed tender documents 11-03-2024 @ 16.30Hrs c) Date of Opening of Technical Bid is 12-03-2024 @ 17.00 Hrs & Financial bid is 13-03-2024 @ 17.30 Hrs respectively. All details & information can be had from the office of the under signed during office hours and visit website www.kppp.karnataka.gov.in.

Website www.kppp.karnataka.gov.in. ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ08484–262257 ಸಂಪರ್ಕಿಸುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ
ವಾ.ಸಾ.ಸಂ.ಇ/ಬೀದರ/259–3/ಕೆಎಸ್‌ಎಂಸಿ&ಎ/2023–24

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಧಾರವಾಡ ಜಿಲ್ಲೆ, ಧಾರವಾಡ–580 001
Phone: 0836-2233851, 2441609, E-mail: dudc_dwd@yahoo.co.in
ಸಂಖ್ಯೆ: ಡಿಯುಡಿಸಿ/ಡಿಬ್ಲ್ಯೂಡಿ/ನಗರೋತ್ಥಾನ ಹಂತ–4/2023–24 ದಿನಾಂಕ: 29–02–2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಧಾರವಾಡ ಜಿಲ್ಲಾ ನಗರಾಭಿವೃದ್ಧಿ ಕೋಶದಿಂದ ಧಾರವಾಡ ಜಿಲ್ಲೆ ನಗರೋತ್ಥಾನ ಹಂತ – 4 ರ ಯೋಜನೆಯ ಕಾಮಗಾರಿಗಳಿಗಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಉಪಯೋಗಿಸಿ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಗಿನಂತೆ ಪ್ಯಾಕೇಜ್‌ವಾರು ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
1	Construction of toilet for disabled at No.1 MLA's model school for Boys and Government First class college and survey No. 186 communal toilet under Nagarothan phase 4 at Annigeri TMC Limits. **DMA/2023-24/BD/WORK_INDENT15842.**	21.25
2	Development of Restrooms for Pourakarmikas under Nagarothan phase 4 at Annigeri TMC Limits. **DMA/2023-24/BD/WORK_INDENT15843.**	22.97
3	Construction of disabled friendly toilet and slippery paths for government schools, hostels and offices and public buildings under Nagarothan phase 4 at Navalgund TMC Limits. **DMA/2023-24/BD/WORK_INDENT15841.**	21.25
4	Development of Restrooms for Pourakarmikas under Nagarothan phase 4 at Navalgund TMC Limits. **DMA/2023-24/BD/WORK_INDENT15844.**	29.16
5	Development of Rest Room for Pourakarmikas under Nagarothan phase 4 at Kalaghatagi TP Limits. **DMA/2023-24/BD/WORK_INDENT15840.**	20.49
6	Estimation of physically Handicapped toilet blocks at Kundagol under Nagarothan phase 4 at Kundagol TP Limits. **DMA/2023-24/BD/WORK_INDENT15739.**	10.63
7	Development of Rest Room for Pourakarmikas under Nagarothan phase 4 at Kundagol TP Limits. **DMA/2023-24/BD/WORK_INDENT15752.**	20.49
8	The Work of Installing TC and Electric Pole and Laying 3 Phase Lines in Amarshiva Asraya Barangay Located on Kadapatti Road of Kundgol Pattana Panchayat. **DMA/2023-24/BD/WORK_INDENT15852.**	18.49

ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.eproc.karnataka.gov.in** ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್‌ನಿಂದ ಪಡೆಯಬಹುದು.
ಅವಧಿ ವಿಸ್ತರಣೆ ಇದ್ದಲ್ಲಿ ಹಾಗೂ ತಿದ್ದುಪಡಿ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟಫಾರ್ಮ **www.eproc.karnataka.gov.in** ನಲ್ಲಿ ಹಾಗೂ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಧಾರವಾಡ.
ವಾಸಾಸಂಇ/ಹುಬ್ಬಳ್ಳಿ–ಧಾರವಾಡ/888/ಅಡ್ವರ್ಟೋ/2023–24

ಕಲಬುರಗಿ ತಾಲ್ಲೂಕಿನ ಮೇಳಕುಂದಾ ಗ್ರಾಮದಲ್ಲಿ ಸಂಪೂರ್ಣ ಬತ್ತಿ ಹೋಗಿರುವ ಕೆರೆ

ಹಣ ಹರಿದರೂ ತುಂಬದ ಕೆರೆ

ಒಂದನೇ ಪುಟದಿಂದ..

ಆಮೆ ವೇಗದ ಕೆಲಸದಿಂದ ಯೋಜನಾ ವೆಚ್ಚ ₹ 324 ಕೋಟಿಯಿಂದ ₹378 ಕೋಟಿಗೆ ಹೆಚ್ಚಳವಾಗಿದೆ. ಆರಂಭದಲ್ಲಿ ರೈತರ ಜಮೀನಿನ ಮೂಲಕ ಕೊಳವೆ ಮಾರ್ಗ ಅಳವಡಿಸಲು ಉದ್ದೇಶಿಸಲಾಗಿತ್ತು. ಕೆಲವು ಕಡೆ ಭೂಸ್ವಾಧೀನ ಪೂರ್ಣಗೊಂಡಿದ್ದರೂ ಪರಿಹಾರ ವಿತರಣೆಯಾಗಿಲ್ಲ. ಯೋಜನೆ ಕೈಗೆತ್ತಿಕೊಂಡಿರುವ ಕಾವೇರಿ ನೀರಾವರಿ ನಿಗಮ ಸಕಾಲದಲ್ಲಿ ಪರಿಹಾರ ನೀಡದಿರುವುದು ಸಹ ಕಾಮಗಾರಿ ವಿಳಂಬಕ್ಕೆ ಪ್ರಮುಖ ಕಾರಣವಾಗಿದೆ.

ಕಲಬುರಗಿ ದಕ್ಷಿಣ ಹಾಗೂ ಕಲಬುರಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 13 ಕೆರೆಗಳನ್ನು ಬೆಣ್ಣೆತೊರಾ ಜಲಾಶಯದಿಂದ ತುಂಬಿಸುವ ₹ 197 ಕೋಟಿ ವೆಚ್ಚದ ಯೋಜನೆಗೆ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಣ್ಣ ನೀರಾವರಿ ಸಚಿವರಾಗಿದ್ದ ಜೆ.ಸಿ. ಮಾಧುಸ್ವಾಮಿ ಚಾಲನೆ ನೀಡಿದ್ದರು. ಆದರೆ, ಇನ್ನೂ ಯೋಜನೆ ಪೂರ್ಣಗೊಂಡಿಲ್ಲ. ಯೋಜನೆಯಡಿ ಕೆರೆ ತುಂಬಬೇಕಿದ್ದ ಹತಗುಂದಿ, ಕುಮಸಿ, ಯಳವಂತಗಿ, ಹುಣಸಿ ಹಡಗಿಲ, ಕೆರಿಬೋಸಗಾ, ಹರಸೂರು, ಸೈಯದ್ ಚಿಂಚೋಳಿ, ಮೇಳಕುಂದಾ, ಖಾಜಾ ಕೋಟನೂರು ಗ್ರಾಮಗಳ ಕೆರೆಗಳಲ್ಲಿ ನೀರು ಬತ್ತಿ ಹೋಗುವ ಹಂತ ತಲುಪಿದೆ.

‘ತುಂಬಿಸಬೇಕಾದ ಕೆರೆಯ ಹೂಳನ್ನು ತೆಗೆಯದೇ ಯೋಜನೆ ಅನುಷ್ಠಾನಕ್ಕೆ ಮುಂದಾದರೆ ಯೋಜನೆಗಳು ವಿಫಲವಾಗುವ ಸಾಧ್ಯತೆಗಳೇ ಹೆಚ್ಚು. ಸರ್ಕಾರವು ಹೆಚ್ಚು ಬದ್ಧತೆಯಿಂದ ಕೆಲಸ ಮಾಡಬೇಕು’ ಎಂದು ಎಚ್ಚರಿಸುತ್ತಾರೆ ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲಿಪಾಟೀಲ.

ಯೋಜನೆಗಳ ಅನುಷ್ಠಾನದಲ್ಲಿ ಬದ್ಧತೆ ಕಾಣೆಯಾಗಿ ಬರೀ ತರಾತುರಿಯಲ್ಲಿ ಯೋಜನೆ ಪೂರ್ಣಗೊಳಿಸುವ ಉದ್ದೇಶವೇ ಮುನ್ನೆಲೆಗೆ ಬರುವುದರಿಂದ ಗುಣಮಟ್ಟದ ಕೆಲಸ ಆಗುತ್ತಿಲ್ಲ. ಬಹುತೇಕ ಕೆರೆಗಳು ಒತ್ತುವರಿಯಾಗಿದ್ದು, ಅವುಗಳ ಸರ್ವೆ ನಡೆಸಿ ಕೆರೆಯನ್ನು ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು. ನಂತರ ಹೂಳೆತ್ತಬೇಕು. ಅದರ ಮಣ್ಣನ್ನು ರೈತರಿಗೆ ನೀಡಿದರೆ ಅವರ ಹೊಲಗಳೂ ಫಲವತ್ತಾಗುತ್ತವೆ. ಹೂಳೆತ್ತಿದ ಕೆರೆಗಳಲ್ಲಿ ನೀರು ತುಂಬಿಸಿದರೆ ಅಂತರ್ಜಲ ಮಟ್ಟವೂ ಸುಧಾರಿಸುತ್ತದೆ ಎಂಬುದು ಮಾಲಿಪಾಟೀಲ ಅವರ ಆಶಯ. ಆದರೆ, ಬಹುತೇಕ ಯೋಜನೆಗಳಲ್ಲಿ ಕೆರೆ ಹೂಳೆತ್ತುವ ಪ್ರಸ್ತಾವವೇ ಇಲ್ಲ.

ಅವೈಜ್ಞಾನಿಕ ಕಾಮಗಾರಿ: ರಾಯಚೂರು ಜಿಲ್ಲೆಯ ನಂದವಾಡಗಿ ಹನಿ ನೀರಾವರಿ ಯೋಜನೆ ಅನುಷ್ಠಾನದ ಆರಂಭದಲ್ಲೇ ಹಲವು ಗೊಂದಲ ಇದ್ದರೂ ಭೂಮಿ ಪೂಜೆ ನೆರವೇರಿಸಲಾಯಿತು. ಹನಿ ನೀರಾವರಿ ಯೋಜನೆ ಕಾಮಗಾರಿ ಕುಂಟುತ್ತ ಸಾಗಿದೆ. ಈ ನಡುವೆ ಕಾಮಗಾರಿ ಸ್ಥಗಿತಕ್ಕೆ ಅಧಿಕಾರಿಗಳಿಗೆ ಮೌಖಿಕ ಸೂಚನೆ ನೀಡಲಾಗಿದೆ. ಅಧಿಕೃತ ಆದೇಶ ಹೊರಬಿದ್ದಿಲ್ಲ.

ವ್ಯಾಕರನಾಳ ಏತ ನೀರಾವರಿ ಯೋಜನೆಯ ಪಂಪ್‌ಸೆಟ್, ಕಾಲುವೆ ಗಳು ಮಂಗಮಾಯವಾಗಿವೆ. ಜಲದುರ್ಗ ಮತ್ತು ಗುಂತಗೋಳ ಏತ ನೀರಾವರಿ ಯೋಜನೆಗಳು ಗುತ್ತಿಗೆದಾರರಿಗೆ ವರದಾನವಾಗಿವೆ! ದೂರ ದೃಷ್ಟಿಯ ಕೊರತೆಯ ಕಾರಣಕ್ಕೆ ಯೋಜನೆ ನೆಲಕಚ್ಚಿದೆ. ಅರೆಬರೆ ಕಾಮಗಾರಿ ಯಿಂದಾಗಿ ರೈತರ ಜಮೀನುಗಳಿಗೆ ಹನಿ ನೀರು ಹರಿದಿಲ್ಲ. ಕಾಮಗಾರಿಯ ಸರಿಯಾಗಿ ಮೇಲುಸ್ತುವಾರಿ ಮಾಡದೇ ಇರುವುದೂ ಯೋಜನೆ ವೈಫಲ್ಯಕ್ಕೆ ಕಾರಣವಾಗಿದೆ.

20,235 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದ ರಾಂಪುರ ಏತ ನೀರಾವರಿ ಯೋಜನೆ 2013ರಲ್ಲಿ ಆರಂಭವಾದರೂ ಸಂತ್ರಸ್ತ ರೈತರಿಗೆ ಇನ್ನೂ ಪರಿಹಾರ ದೊರಕಿಲ್ಲ. ₹ 225 ಕೋಟಿ ಖರ್ಚು ಮಾಡಿದರೂ ಹನಿ ನೀರು ಬಂದಿಲ್ಲ. ಅವೈಜ್ಞಾನಿಕ ಕಾಮಗಾರಿಯಿಂದಾಗಿ ಯೋಜನೆಯೇ ಬುಡಮೇಲಾಗಿದೆ. ಕಾಲುವೆ ಕಾಮಗಾರಿ ಅಪೂರ್ಣವಾಗಿವೆ. ಕಾಲುವೆಗಳಲ್ಲಿ ಅಲ್ಲಲ್ಲಿ ಹೂಳು ತುಂಬಿಕೊಂಡಿದೆ. ಯೋಜನೆ ಸಂಪೂರ್ಣ ವಿಫಲವಾಗಿದೆ ಎಂದು ಗೌಡೂರು ಗ್ರಾಮದ ರೈತರು ಹೇಳುತ್ತಾರೆ.

1999ರಲ್ಲಿ ರಾಯಚೂರು ತಾಲ್ಲೂಕಿನ ಆಯನೂರು ಗ್ರಾಮದ ಬಳಿ ತುಂಗಭದ್ರಾ ನದಿಯಿಂದ ನೀರೆತ್ತಿ 208 ಎಕರೆ ಜಮೀನಿಗೆ ನೀರುಣಿಸುವ ಯೋಜನೆಯೂ ವಿಫಲವಾಗಿದೆ. ₹ 2.30 ಕೋಟಿಗೂ ಅಧಿಕ ಹಣ ಖರ್ಚು ಮಾಡಿ 2013ರಲ್ಲಿ ಕಾಮಗಾರಿ ಉದ್ಘಾಟಿಸಲಾಯಿತು. ಉದ್ಘಾಟನೆಯ ದಿನ ಹೊರಗೆ ಬಂದ ನೀರೇ ಕೊನೆಯದು. ರೈತರಿಗೆ ಯಾವುದೇ ರೀತಿಯ ಉಪಯೋಗವಾಗಿಲ್ಲ ಎಂದು ಆಯನೂರು ಗ್ರಾಮದ ಜಲಾಲಸಾಬ್ ಬೇಸರ ವ್ಯಕ್ತಪಡಿಸುತ್ತಾರೆ. ಪೈಪ್ ಲೈನ್ ಕಾಮಗಾರಿ ಅತ್ಯಂತ ಕಳಪೆಯಾಗಿದ್ದರಿಂದ ಪಂಪ್‌ಸೆಟ್ ಬಟನ್ ಒತ್ತಿದರೆ ಸಾಕು ಎಲ್ಲೆಂದರಲ್ಲಿ ಪೈಪುಗಳು ಒಡೆದು ಹೋಗುತ್ತಿವೆ. ಹೀಗಾಗಿ ನಂತರ ಯಾವುದೇ ಅಧಿಕಾರಿ, ಜನಪ್ರತಿನಿಧಿಯೂ ಇತ್ತ ಕಡೆ ಸುಳಿದಿಲ್ಲ ಎಂದು ಕುರಿ ವೀರಣ್ಣ ಮತ್ತು ಅಳ್ಳಪ್ಪ ಆಚಾರ ಬೇಸರ ವ್ಯಕ್ತಪಡಿಸುತ್ತಾರೆ.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಪಿ.ಕೆ. ಹಳ್ಳಿ ಏತ ನೀರಾವರಿ ಯೋಜನೆಯಡಿ 22 ಕೆರೆಗಳಿಗೆ ನೀರು ತುಂಬಿಸುವ ಕೆಲಸ ಕುಂಟುತ್ತ ಸಾಗಿದೆ. ಈ ಪೈಕಿ 16 ಕೆರೆಗಳಿಗೆ ಸಂಪರ್ಕ ಸಾಧಿಸಲಾಗಿದ್ದರೂ ಈ ಬಾರಿ ಮಳೆ ಇಲ್ಲದ ಕಾರಣ ಕೆರೆಗಳಿಗೆ ನೀರು ಹರಿಸಲು ಸಾಧ್ಯವಾಗಿಲ್ಲ. ಹಗರಿಬೊಮ್ಮನಹಳ್ಳಿಯ ಐದು ಕೆರೆಗಳಲ್ಲೂ ಇದೇ ಸ್ಥಿತಿ ಇದೆ. ಕೂಡ್ಲಿಗಿಯಲ್ಲಿ 78 ಕೆರೆಗಳಿಗೆ ಸಂಪರ್ಕ ಕಾಮ ಗಾರಿ ಆರಂಭವಾಗಿದೆಯಷ್ಟೇ.

‘ದೊಡ್ಡ ಮಟ್ಟದ ಪ್ರಚಾರದೊಂದಿಗೆ ಕೆರೆ ತುಂಬಿಸುವ ಯೋಜನೆಯ ಅನುಷ್ಠಾನ ಮಾಡ್ತೀವಿ ಅಂತ ಹೇಳಿದ್ರು. ಕೆರೆಗೆ ಒಂದು ಪೈಪ್ ಹಾಕಿದ್ದು ಬಿಟ್ಟರೆ ನೀರು ಮಾತ್ರ ಬಂದೇ ಇಲ್ಲ. ಹಿಂದಿನ ಸರ್ಕಾರ ಮಾಡಿದ್ದನ್ನು ಅರ್ಧಕ್ಕೇ ಬಿಡುವ ಚಾಳಿ ರೂಢಿಯಾದರೆ ಹೇಗೆ’ ಎಂದು ಕಲಬುರಗಿ ತಾಲ್ಲೂಕಿನ ಮೇಳಕುಂದಾ ಗ್ರಾಮದ ರೈತ ಮಲ್ಲಿನಾಥ ಕೊಳ್ಳೂರ ಪ್ರಶ್ನಿಸುತ್ತಾರೆ.

ಬೆಳಗಾವಿ ಜಿಲ್ಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬ, ಸಿಬ್ಬಂದಿ ಕೊರತೆ, ಪ್ರವಾಹ ಮತ್ತಿತರ ಕಾರಣಗಳಿಂದ ನೀರಾವರಿ ಇಲಾಖೆ ಉತ್ತರ ವಲಯದಿಂದ ಕೈಗೆತ್ತಿಕೊಂಡಿರುವ ಕೆರೆ ತುಂಬಿಸುವ ಯೋಜನೆಗಳು ನನೆಗುದಿಗೆ ಬಿದ್ದಿವೆ. 2018–19ರಲ್ಲಿ ಕೈಗೊಂಡ ಯೋಜನೆಗಳೂ ಇನ್ನೂ ಪೂರ್ಣಗೊಳ್ಳದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಉತ್ತರ ವಲಯದಲ್ಲಿ 166 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕೈಗೊಳ್ಳಲಾಗಿತ್ತು. ಈ ಪೈಕಿ ಕೆಲ ಕಾಮಗಾರಿಗಳಷ್ಟೇ ಮುಗಿದಿವೆ. ₹ 100.82 ಕೋಟಿ ವೆಚ್ಚದಲ್ಲಿ ರಾಯಬಾಗ ಕ್ಷೇತ್ರದ 39 ಕೆರೆಗಳನ್ನು ತುಂಬಿಸುವ ಕಾಮಗಾರಿ ಕೈಗೊಳ್ಳಲಾಗಿತ್ತು. ಇದಕ್ಕೆ ಭೂಸ್ವಾಧೀನ ಪಡಿಸಿಕೊಳ್ಳಲು ತಕರಾರು ಮಾಡುತ್ತಿದ್ದಾರೆ.

‘ಸರ್ಕಾರದ ಮಾರ್ಗಸೂಚಿ ಪ್ರಕಾರ, ನಾವು ಭೂಮಿಗೆ ಪರಿಹಾರ ಕೊಡಲು ಮುಂದಾಗಿದ್ದೇವೆ. ಆದರೆ, ಅವರು ಹೆಚ್ಚಿನ ಪರಿಹಾರ ಕೋರಿ ಭೂಮಿ ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದಾಗಿ ಜಾಕ್‌ವೆಲ್ ಕಾಮಗಾರಿ ಸ್ಥಗಿತವಾಗಿದೆ. ಶೀಘ್ರ ವಿವಾದ ಬಗೆಹರಿದು ಕಾಮಗಾರಿ ಆರಂಭವಾಗಲಿದೆ’ ಎಂದು ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

₹ 32.66 ಕೋಟಿ ವೆಚ್ಚದಲ್ಲಿ ಕೈಗೊಂಡ ಕುಡಚಿ ಕ್ಷೇತ್ರದ 19 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ರೈತರು ಅಡ್ಡಿಪಡಿಸಿದ್ದಾರೆ. ಹೆಚ್ಚಿನ ಪರಿಹಾರಕ್ಕೆ ಬೇಡಿಕೆಯಿಟ್ಟಿರುವ ಅವರು, ಭೂಮಿ ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿ, ಯೋಜನೆ ಕುಂಟುತ್ತ ಸಾಗಿದೆ. ಪ್ರಸ್ತುತ ಬೇಸಿಗೆಯಲ್ಲಿ ನೀರಿಗಾಗಿ ಅಲ್ಲಿನ ಜನ ಹೆಣಗಾಡುತ್ತಿದ್ದಾರೆ.

₹ 205.32 ಕೋಟಿ ವೆಚ್ಚದಲ್ಲಿ ಚನ್ನಮ್ಮನ ಕಿತ್ತೂರು ಹಾಗೂ ಬೈಲಹೊಂಗಲ ಕ್ಷೇತ್ರದಲ್ಲಿ ಕೈಗೊಂಡಿದ್ದ 64 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೂ ಹಲವು ತೊಡಕು ಎದುರಾಗಿವೆ. ಹೆಡ್‌ವರ್ಕ್ ಕಾಮಗಾರಿ ಮುಗಿದಿದೆ. 201 ಕಿ.ಮೀ. ಪೈಕಿ 170 ಕಿ.ಮೀವರೆಗೆ ಕಾಮಗಾರಿಯಾಗಿದೆ. ಭೂಸ್ವಾಧೀನ ಪ್ರಕ್ರಿಯೆ ವಿಳಂಬ, ತಾಂತ್ರಿಕ ಕಾರಣಗಳಿಂದಾಗಿ ಹಲವು ವರ್ಷಗಳಿಂದ ಯೋಜನೆ ನೆನಗುದಿಗೆ ಬಿದ್ದಿದೆ.

ಕಾಗವಾಡ ಕ್ಷೇತ್ರದ 23 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯದ್ದೂ ಇದೇ ಕಥೆ. ಅರಭಾವಿಯಲ್ಲಿ 20 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇನ್ನೂ ಆರಂಭವಾಗಿಲ್ಲ.

2019ರ ಅಂತ್ಯದಲ್ಲಿ ಕಾಮಗಾರಿ ಶುರುವಾದ ‘57 ಕೆರೆಗಳ ತುಂಬಿಸುವ ಯೋಜನೆ’ಯೂ ಆಮೆಗತಿಯಲ್ಲಿ ಸಾಗಿದೆ. ದಾವಣಗೆರೆ ಜಿಲ್ಲೆಯ ಜಗಳೂರು ಮತ್ತು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ 57 ಕೆರೆ ತುಂಬಿಸುವ ಕಾಮಗಾರಿ ಇದಾಗಿದೆ. ಇದುವರೆಗೂ ಜಗಳೂರು ತಾಲ್ಲೂಕಿನ 10 ಕೆರೆಗಳಿಗೆ ಮಾತ್ರ ತುಂಗಭದ್ರಾ ನದಿಯಿಂದ ನೀರು ಹರಿದಿದೆ.

‘ಕೆರೆ ತುಂಬಿದರೆ ಅಂತರ್ಜಲ ಮಟ್ಟ ಹೆಚ್ಚಾಗಿ ರೈತರ ಬದುಕು ಹಸನಾಗುತ್ತದೆ. ಆದರೆ, ಕೆರೆ ತುಂಬಿಸುವ ಹೆಸರಲ್ಲಿ ವರ್ಷಗಳಿಂದ ಕಾಮಗಾರಿ ನಡೆಯುತ್ತಿದ್ದರೂ ಪೂರ್ಣಗೊಂಡಿಲ್ಲ. ತಾಲ್ಲೂಕಿನಲ್ಲಿ ಗುತ್ತಿಗೆದಾರರು ಕೆಲಸ ಅರ್ಧಕ್ಕೇ ಬಿಟ್ಟು ಪರಾರಿಯಾಗಿದ್ದಾರೆ. ಇದು ಪೂರ್ಣಗೊಳ್ಳಲು ಎಷ್ಟು ದಶಕ ಬೇಕೋ ಏನೋ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಅತನೂರು ಗ್ರಾಮದ ರೈತ ಲತೀಫ್ ಪಟೇಲ್. ಕೆರೆ ನೀರು ತುಂಬಿಸುವ ಯೋಜನೆ ವ್ಯಾಪ್ತಿಯ ಗ್ರಾಮಗಳ ರೈತರ ಅನಿಸಿಕೆಯೂ ಇದೇ ಆಗಿದೆ.

ಮೈಸೂರು ಜಿಲ್ಲೆಯಲ್ಲಿ 8 ಏತ ನೀರಾವರಿ ಯೋಜನೆಗಳು ಜಾರಿಯಲ್ಲಿದ್ದು, 2 ಮಾತ್ರ ಪೂರ್ಣಗೊಂಡಿವೆ. ಕಾವೇರಿ, ಕಬಿನಿ ಹಾಗೂ ನುಗು ನದಿಗಳಿಂದ ನೀರು ಪೂರೈಸುವ ಯೋಜನೆಯನ್ನು ರೂಪಿಸಲಾಗಿದೆ.

ನಂಜನಗೂಡು ತಾಲ್ಲೂಕಿನ ಬಿದರಗೂಡು ಬಳಿ ಕಬಿನಿ ನದಿಯಿಂದ ಮೈಸೂರು, ನಂಜನಗೂಡು, ಎಚ್.ಡಿ.ಕೋಟೆ ತಾಲ್ಲೂಕಿನ 23 ಕೆರೆಗಳಿಗೆ ನೀರು ಪೂರೈಸುವ ₹ 45.5 ಕೋಟಿ ವೆಚ್ಚದ ಯೋಜನೆ ಪೂರ್ಣಗೊಂಡಿದೆ.

ಕಬಿನಿ ನದಿಯಿಂದ ಎಚ್.ಡಿ.ಕೋಟೆ ತಾಲ್ಲೂಕಿನ ಇಬ್ಬಜಾಲ ಬಳಿ 39 ಕೆರೆಗಳಿಗೆ ನೀರು ಪೂರೈಸಲು ₹ 68 ಕೋಟಿ ವೆಚ್ಚದ ಯೋಜನೆ, ನಂಜನಗೂಡು ತಾಲ್ಲೂಕಿನ ಹೆಗ್ಗಡಹಳ್ಳಿಯಿಂದ 7 ಕೆರೆಗಳಿಗೆ ನೀರು ತುಂಬಿಸುವ ₹ 80 ಕೋಟಿ ವೆಚ್ಚದ ಯೋಜನೆಯೂ ಅರ್ಧದಷ್ಟು ಮಾತ್ರ ಪೂರ್ಣಗೊಂಡಿದೆ. ಕೆ.ಆರ್.ನಗರ ತಾಲ್ಲೂಕಿನ ಹಾಡ್ಯ ಗ್ರಾಮದಲ್ಲಿ ಕಾವೇರಿ ನದಿಯಿಂದ 12 ಕೆರೆಗಳಿಗೆ ನೀರು ತುಂಬಿಸುವ ₹ 15 ಕೋಟಿ ವೆಚ್ಚದ ಯೋಜನೆ ಕುಂಟುತ್ತಾ ಸಾಗಿದೆ.

ಕುಡಿಯುವ ನೀರಿಗಾಗಿ ಸರಗೂರು ತಾಲ್ಲೂಕಿನ ಮುಳ್ಳೂರು ಗ್ರಾಮದ ನುಗು ನದಿಯಿಂದ ನಂಜನಗೂಡು ಹಾಗೂ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಕೆರೆಗಳಿಗೆ ನೀರು ಸಾಗಿಸುವ ₹ 30 ಕೋಟಿ ವೆಚ್ಚದ ಯೋಜನೆಯೂ ತೆವಳುತ್ತಿದೆ. ಮಳೆಯಾಶ್ರಿತ ಪ್ರದೇಶದಲ್ಲಿರುವ ಹೆಡಿಯಾಲ ಸೇರಿದಂತೆ 8 ಕೆರೆಗಳು ಬಹುತೇಕ ಒಣಗಿವೆ. ಅಂತರ್ಜಲ ಮಟ್ಟವೂ ಕುಸಿದಿದೆ.

ಕೆರೆ ತುಂಬಿಸುವ ಯೋಜನೆ ಅನುಷ್ಠಾನದಲ್ಲಿ ಸರ್ಕಾರ ತೋರುವ ನಿರ್ಲಕ್ಷ್ಯದ ಬಗ್ಗೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು ಬೇಸರ ವ್ಯಕ್ತಪಡಿಸುತ್ತಾರೆ. ‘ರೈತರ ಬದುಕು ಹಸನಾಗಲು ಕೆರೆ ತುಂಬಿಸುವ ಯೋಜನೆಗಳು ಸಮಾಜಕ್ಕೆ ದೊಡ್ಡ ಕೊಡುಗೆ ನೀಡುತ್ತವೆ. ಯೋಜನೆಗಳಿಗೆ ಅಗತ್ಯವಾದ ಹಣವನ್ನು ಆದ್ಯತೆಯ ಮೇಲೆ ಒದಗಿಸಿ ಕಾಲಮಿತಿಯಲ್ಲಿ ನೀರು ಹರಿಯುವಂತೆ ಕ್ರಮ ಕೈಗೊಳ್ಳಬೇಕು. ಇದರಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿ ಹೆಚ್ಚು ಫಸಲು ಬೆಳೆಯಲು ಸಾಧ್ಯವಾಗುತ್ತದೆ. ಚಾಮರಾಜನಗರದಲ್ಲಿ ಈ ಯೋಜನೆ ಯಶಸ್ವಿಯಾಗಿದೆ. ಉಳಿದ ಕಡೆ ನಡೆಯುತ್ತಿರುವ ಯೋಜನೆಗಳನ್ನು ಶೀಘ್ರವೇ ಪೂರ್ಣಗೊಳಿಸಲು ಅಗತ್ಯ ಹಣಕಾಸು ಮಂಜೂರು ಮಾಡಬೇಕು’ ಎಂದು ಒತ್ತಾಯಿಸುತ್ತಾರೆ.

ಮಂಡ್ಯ ಜಿಲ್ಲೆಯ ಗ್ರಾಮೀಣ ಜನರಿಗೆ ಕುಡಿಯುವ ನೀರು, ಕೃಷಿಗೆ ನೀರೊದಗಿಸುವ ₹ 350 ಕೋಟಿ ಅಂದಾಜು ವೆಚ್ಚದ ಯೋಜನೆಗಳು ಪ್ರಗತಿಯಲ್ಲಿವೆ. ಹಲವು ಏತ ನೀರಾವರಿ ಯೋಜನೆಗಳು ವಿಫಲಗೊಂಡಿವೆ. ಲೋಕಪಾವನಿ ನದಿಯಿಂದ ನೀರೆತ್ತಿ ಶ್ರೀರಂಗಪಟ್ಟಣ ತಾಲ್ಲೂಕಿನ ಟಿ.ಎಂ.ಹೊಸೂರು, ಅಲ್ಲಾಪಟ್ಟಣ, ಗೌಡಹಳ್ಳಿ ಸೇರಿದಂತೆ ಹಲವು ಹಳ್ಳಿಗಳಿಗೆ ನೀರೊದಗಿಸುವ ಕರಿಘಟ್ಟ ನೀರಾವರಿ ಯೋಜನೆ ಅರ್ಧ ದಶಕದ ಹಿಂದೆಯೇ ಅಂದರೆ 1978ರಲ್ಲೇ ಆರಂಭವಾಗಿತ್ತು. ತಾಂತ್ರಿಕ ಕಾರಣದಿಂದ ಸ್ಥಗಿತಗೊಂಡ ಯೋಜನೆಗೆ 2012ರಲ್ಲಿ ಮರುಜೀವ ದೊರಕಿತು. ನೀರು ಹರಿವು ಆರಂಭವಾದರೂ ಇಲ್ಲಿಯವರೆಗೂ ಕಡೇಭಾಗದ ಹಳ್ಳಿ ಜನರಿಗೆ ಇನ್ನೂ ನೀರು ತಲುಪಿಲ್ಲ.

ಮದ್ದೂರು ತಾಲ್ಲೂಕು ಆತಗೂರು ಹೋಬಳಿಗೆ ನೀರು ಪೂರೈಸುವ ಏತನೀರಾವರಿ ಯೋಜನೆಗೆ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. 20 ಕೆರೆಗಳಿಗೆ ನೀರು ತುಂಬಿಸುವ ಈ ಯೋಜನೆಗೆ ಈಗ ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿದೆ. ಆದರೆ, ಇನ್ನೂ ವಿದ್ಯುತ್ ಕಾಮಗಾರಿ ಬಾಕಿ ಇರುವ ಕಾರಣ ಜನರು ನೀರು ಕಾಣಲು ಸಾಧ್ಯವಾಗಿಲ್ಲ.

ಕೆ.ಆರ್.ಪೇಟೆ ತಾಲ್ಲೂಕು ಕಟ್ಟಹಳ್ಳಿ ಏತ ನೀರಾವರಿ ಯೋಜನೆ ಜಾರಿಯಾದರೆ 46 ಕೆರೆ ತುಂಬಿಸಲು ಸಾಧ್ಯವಿದೆ. ಕಾಮಗಾರಿ ಸ್ಥಗಿತಗೊಂಡು 20 ವರ್ಷಗಳೇ ಕಳೆದಿವೆ. ಸಂತೇಬಾಚಹಳ್ಳಿ ಹೋಬಳಿಯ ಅಘಲಯ ಕೆರೆಗೆ ನೀರೊದಗಿಸುವ ಯೋಜನೆ ತಾಂತ್ರಿಕ ಸಮಸ್ಯೆಯಿಂದ ಸ್ಥಗಿತಗೊಂಡಿದೆ.

ಹಾಸನ ಜಿಲ್ಲೆಯ ತೋಟಿ ಏತ ನೀರಾವರಿ ಯೋಜನೆಗೆ ರೈತರು ಜಮೀನು ನೀಡಿದ್ದಾರೆ. ಕಾಮಗಾರಿ ನಡೆಯುತ್ತಿದೆ. ಆದರೆ, ಇದುವರೆಗೆ ಹಲವು ರೈತರಿಗೆ ಭೂಸ್ವಾಧೀನದ ಪರಿಹಾರ ನೀಡಿಲ್ಲ. ಕೂಡಲೇ ಪರಿಹಾರ ನೀಡಬೇಕು ಎನ್ನುತ್ತಾರೆ ಗುಂಡಶೆಟ್ಟಿಹಳ್ಳಿಯ ರೈತ ನಿಂಗೇಗೌಡ.

‘ನದಿಯ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತದೆ. ಕೆರೆ, ಕಟ್ಟೆಗಳು ಒಣಗಿದರೆ ಪ್ರಕೃತಿ ಸಂಪತ್ತು ಹಾಳಾಗುತ್ತದೆ. ಹೀಗಾಗಿ, ಅಣೆಕಟ್ಟು ಕಟ್ಟುವ ವೆಚ್ಚಕ್ಕಿಂತ ಕಡಿಮೆ ವೆಚ್ಚದಲ್ಲಿ ನೂರಾರು ಕೆರೆ ತುಂಬಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ ಅಂತರ್ಜಲ ಮಟ್ಟ ಹೆಚ್ಚಿ ರೈತರ ಬದುಕು ಹಸನಾಗುತ್ತದೆ. ನೆರೆಯ ಆಂಧ್ರಪ್ರದೇಶ ಮತ್ತು ತಮಿಳುನಾಡು ಸರ್ಕಾರಗಳನ್ನು ನೋಡಿ ಕಲಿಯಬೇಕಿರುವುದು ಸಾಕಷ್ಟಿದೆ’ ಎಂದೂ ಕುರುಬೂರು ಶಾಂತಕುಮಾರ್ ಅವರು ಅಭಿಪ್ರಾಯಪಡುತ್ತಾರೆ.

ಪೂರಕ ಮಾಹಿತಿ: ಮರಿಯಪ್ಪ ಕೆ.ಜೆ., ಚಂದ್ರಕಾಂತ ಮಸಾನಿ, ಆರ್. ಮಂಜುನಾಥ್, ಸತೀಶ್ ಬೆಳ್ಳಕ್ಕಿ, ಮೋಹನ್ ಸಿ. ಕುಮಾರ್, ಇಮಾಮ್ ಹುಸೇನ್ ಗೂಡೂನವರ, ರಾಮಮೂರ್ತಿ ಪಿ.

ಹೊನ್ನವಳ್ಳಿ ಬಡಗಿ ಕೆರೆಗೆ ಸ್ವಲ್ಪ ನೀರು ಹರಿಸಿದರೂ ಪ್ರಯೋಜನವಾಗಿಲ್ಲ. ಕೆರೆಯ ಏರಿ, ತೂಬು ಭದ್ರಪಡಿಸಿಲ್ಲ. ಹೊರಗೆ ನೀರು ಹರಿದು ಹೋಗುವುದನ್ನು ತಡೆಯುವ ಪ್ರಯತ್ನ ಮಾಡಿಲ್ಲ.

ಎಚ್.ಎನ್.ಚಂದ್ರೇಗೌಡ, ಹೊನ್ನವಳ್ಳಿ, ತಿಪಟೂರು ತಾಲ್ಲೂಕು

ಹಳೇ ಮೈಸೂರು ಭಾಗದಲ್ಲಿ ಬಹುತೇಕ ಏತ ನೀರಾವರಿ ಯೋಜನೆಗಳು ವಿಫಲವಾಗಿರುವ ಕಾರಣ ಕೆಆರ್‌ಎಸ್ ಜಲಾಶಯದ ಕಡೆ ಭಾಗಕ್ಕೆ ಇನ್ನೂ ನೀರು ತಲುಪಿಲ್ಲ. ಹಲವು ದಶಕಗಳಿಂದಲೂ ನಾಲಾ ಕೊನೆಯ ಭಾಗದ ರೈತರು ವರ್ಷಕ್ಕೆ ಒಂದೇ ಬೆಳೆ ಬೆಳೆಯುತ್ತಿದ್ದಾರೆ.

ಕೆ.ಬೋರಯ್ಯ, ರೈತ ಮುಖಂಡ

ವಿದ್ಯುತ್ ಬಿಲ್ ಪಾವತಿಗೆ ಹಣವಿಲ್ಲ

ತುಮಕೂರು ತಾಲ್ಲೂಕಿನಲ್ಲಿ ಗೂಳೂರು–ಹೆಬ್ಬೂರು ಏತ ನೀರಾವರಿ ಯೋಜನೆ (₹ 60 ಕೋಟಿ) 2011ರಲ್ಲೇ ಪೂರ್ಣಗೊಂಡಿದೆ. ಗೂಳೂರು ವ್ಯಾಪ್ತಿಯ 48 ಕೆರೆಗಳಿಗೆ ನೀರು ಹರಿಸುವ ಗುರಿ ಹೊಂದಲಾಗಿದೆ. ಜಿಲ್ಲೆಗೆ ಹಂಚಿಕೆಯಾಗಿರುವಷ್ಟು ಹೇಮಾವತಿ ನೀರು ಹರಿದು ಬಂದ ಸಮಯದಲ್ಲಿ ಗೂಳೂರು ಭಾಗದ ಕೆರೆಗಳನ್ನು ತುಂಬಿಸಲಾಗುತ್ತದೆ. ಈ ವರ್ಷ ಗೊರೂರು ಜಲಾಶಯದಲ್ಲಿ ನೀರು ಇಲ್ಲವಾಗಿದ್ದು, ಜಿಲ್ಲೆಗೆ ನೀರು ಹರಿಸಿಲ್ಲ. ಹಾಗಾಗಿ ಈ ಭಾಗದ ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗಿಲ್ಲ. ಯೋಜನೆ ಆರಂಭವಾದ ನಂತರ ನೀರು ಪಂಪ್ ಮಾಡಲು ಬಳಸಿರುವ ವಿದ್ಯುತ್ ಬಿಲ್ ₹ 4.50 ಕೋಟಿ ಬಾಕಿ ಉಳಿದುಕೊಂಡಿದೆ. ವಿದ್ಯುತ್ ಬಿಲ್ ಪಾವತಿಗೆ ಕಾವೇರಿ ನೀರಾವರಿ ನಿಗಮ ಪರದಾಡುತ್ತಲೇ ಇದೆ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಚಿಕ್ಕಬಾಗೇವಾಡಿಯ ಕೆರೆ ಬರಿದಾಗಿದೆ

ಕಂದಾಯ ಪಾವತಿಗೆ ರೈತರ ನಿರಾಸಕ್ತಿ

ಸರ್ಕಾರವು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಏತ ನೀರಾವರಿ ಯೋಜನೆಗಳ ಮೂಲಕ ಕೆರೆಗಳನ್ನು ತುಂಬಿಸಿ ನೀರಾವರಿ ಕಲ್ಪಿಸುತ್ತದೆ. ಅದಕ್ಕೆ ಪ್ರತಿಯಾಗಿ ರೈತರು ನೀರಾವರಿ ಭೂಮಿಗೆ ತೆರಿಗೆ ಪಾವತಿಸಬೇಕು. ಆದರೆ, ತೆರಿಗೆ ಪಾವತಿಸುವ ಬಗ್ಗೆ ರೈತರು ನಿರಾಸಕ್ತಿ ವಹಿಸುತ್ತಾರೆ ಎಂಬ ಆರೋಪವಿದೆ.

ಆಯಾ ನೀರಾವರಿ ನಿಗಮಗಳ ವ್ಯಾಪ್ತಿಯಲ್ಲಿ ಕೆರೆ ನೀರು ಬಳಕೆದಾರರ ಸಂಘಗಳನ್ನು ರಚಿಸಿಕೊಂಡು ರೈತರು ತೆರಿಗೆ ಸಂಗ್ರಹ ಮಾಡಿ ಸರ್ಕಾರಕ್ಕೆ ಪಾವತಿಸಬೇಕು. ಬಹುತೇಕ ಸಂದರ್ಭಗಳಲ್ಲಿ ತೆರಿಗೆ ಸಂಗ್ರಹವಾಗುವುದೇ ಇಲ್ಲ. ಅಲ್ಲದೇ, ನೀರು ಬಳಕೆದಾರರ ಸಂಘಗಳೇ ರಚನೆಯಾಗುವುದಿಲ್ಲ. ಒಂದೊಮ್ಮೆ ರಚನೆಯಾದರೂ ತೆರಿಗೆ ಪಾವತಿ ಬಗ್ಗೆ ಅರಿವು ಮೂಡಿಸಲು ಮುಂದಾಗುವುದಿಲ್ಲ ಎಂಬ ಮಾತುಗಳು ಅಧಿಕಾರಿಗಳ ವಲಯದಿಂದ ಕೇಳಿ ಬರುತ್ತವೆ.

‘ಸುವರ್ಣ ಕರ್ನಾಟಕ ಪರಿಷತ್ತಿನ ಪುರಸ್ಕಾರ’ಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ’ ನಾಮಕರಣದ ಸುವರ್ಣ ವರ್ಷಾಚರಣೆ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ‘ಸುವರ್ಣ ಕರ್ನಾಟಕ ಪರಿಷತ್ತಿನ ಪುರಸ್ಕಾರ’ ನೀಡಲು ನಿರ್ಧರಿಸಿದ್ದು, ಕರ್ನಾಟಕದ ಏಕೀಕರಣಕ್ಕೆ, ಕನ್ನಡ-ಕರ್ನಾಟಕ-ಕನ್ನಡಿಗರ ಏಳ್ಗೆಗೆ ಎಲೆಮರೆಯ ಕಾಯಿಯಂತೆ ಕೊಡುಗೆ ನೀಡಿದ ವ್ಯಕ್ತಿಗಳು ಹಾಗೂ ಸಂಘ–ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿದೆ.

ಈ ಪುರಸ್ಕಾರದಡಿ ಐವತ್ತು ಮಹತ್ವದ ಪ್ರಶಸ್ತಿಗಳನ್ನು ನೀಡಲು ಪರಿಷತ್ತು ನಿರ್ಧರಿಸಿದೆ. ಅರ್ಜಿ ಸಲ್ಲಿಸಲು ಮುಜುಗರವಾದರೆ, ಅವರ ಸೇವೆಯನ್ನು ನಿಕಟವಾಗಿ ಬಲ್ಲ ವ್ಯಕ್ತಿಗಳು ಅಥವಾ ಸಂಘ–ಸಂಸ್ಥೆಗಳು ಅರ್ಜಿ ಸಲ್ಲಿಸಬಹುದು. ಪ್ರಶಸ್ತಿ ಆಯ್ಕೆಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಪಾರದರ್ಶಕವಾಗಿ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಲಾಗುವುದು ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಭಾಲ್ಕಿಯಲ್ಲಿ ಏಪ್ರಿಲ್‌ನಲ್ಲಿ ನಡೆಯುವ ಜಾತ್ರೋತ್ಸವ ಸಮಾರಂಭದಲ್ಲಿ, ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ಅರ್ಜಿ ನಮೂನೆಗಳು ಪರಿಷತ್ತಿನ ಕೇಂದ್ರ ಕಚೇರಿ ಹಾಗೂ ಜಾಲತಾಣ kannadasahithyaparishattu.inನಲ್ಲಿ ದೊರೆಯಲಿವೆ. ಸೂಕ್ತ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-18 ಈ ವಿಳಾಸಕ್ಕೆ ಮಾರ್ಚ್ 31ರೊಳಗೆ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಹಾವು ಕಡಿತಕ್ಕೆ ‘ಆ್ಯಂಟಿ ಸ್ನೇಕ್ ವೆನಮ್’ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಆಯ್ದ ಸಮುದಾಯ ಆರೋಗ್ಯ ಕೇಂದ್ರಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ. ಹಾವಿನ ನಂಜಿನ ಲಕ್ಷಣಗಳು ವ್ಯಕ್ತಿಗೆ ಕಂಡುಬಂದಲ್ಲಿ ತಕ್ಷಣ ರೋಗಿಯ ಅಥವಾ ಸಂಬಂಧಿಕರ ಒಪ್ಪಿಗೆ ಪತ್ರ ಪಡೆದು, ಕಡ್ಡಾಯವಾಗಿ ‘ಆ್ಯಂಟಿ ಸ್ನೇಕ್ ವೆನಮ್’ ಅನ್ನು ಉಚಿತವಾಗಿ ಒದಗಿಸಬೇಕು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ.ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ‘ಹಾವು ಕಡಿತವನ್ನು ಅಧಿಸೂಚಿತ ರೋಗವೆಂದು ಘೋಷಿಸಲಾಗಿದೆ. ಹಾವು ಕಡಿತ ಪ್ರಕರಣಗಳು ಕಂಡುಬಂದಲ್ಲಿ ಆಶಾ ಕಾರ್ಯಕರ್ತೆಯರು ತಕ್ಷಣ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ಯಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ತಾಲ್ಲೂಕು ಅಥವಾ ಜಿಲ್ಲಾ ಆಸ್ಪತ್ರೆಗೆ ಉಚಿತವಾಗಿ ಆಂಬುಲೆನ್ಸ್‌ನಲ್ಲಿ ರವಾನಿಸಬೇಕು. ಹಾವು ಕಡಿತದ ಪ್ರಕರಣ ಹಾಗೂ ಮರಣವನ್ನು ಐಎಚ್‌ಐಪಿ ಪೋರ್ಟಲ್‌ನಲ್ಲಿ ವರದಿ ಮಾಡಬೇಕು’ ಎಂದು ಹೇಳಲಾಗಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 3-3-1999

● ದಳದಲ್ಲಿ ಬಿಕ್ಕಟ್ಟು ಉಲ್ಬಣ: ಮತ್ತೆ ಕೆಲ ಸಚಿವರ ರಾಜೀನಾಮೆ ಸಂಭವ

ಬೆಂಗಳೂರು, ಮಾ. 2– ಸಂಪುಟ ವಿಸ್ತರಣೆ ಮತ್ತು ಖಾತೆಗಳ ಮರುಹಂಚಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಕೈಗೊಂಡಿರುವ ನಿರ್ಧಾರದಿಂದಾಗಿ ಆಡಳಿತ ಜನತಾ ದಳದಲ್ಲಿ ಅಸಮಾಧಾನ ಭುಗಿಲೆದ್ದಿದ್ದು, ಮಾಜಿ ಪ್ರಧಾನಿ ದೇವೇಗೌಡರ ಬೆಂಬಲಿಗ ಸಚಿವರು ಸಂಪುಟಕ್ಕೆ ರಾಜೀನಾಮೆ ನೀಡುವ ಬಗ್ಗೆ ಚಿಂತನೆ ನಡೆಸಿದ್ದಾರೆ.

ರೇಷ್ಮೆ ಖಾತೆಯಿಂದ ಉದ್ಯೋಗ ಮತ್ತು ತರಬೇತಿ ಖಾತೆಗೆ ವರ್ಗಾವಣೆಗೊಂಡಿರುವ ರಾಜ್ಯ ಸಚಿವ ಎಂ. ವರದೇಗೌಡ ಅವರು ನಾಳೆ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲು ನಿರ್ಧರಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 3-3-1974

● ಮಹಾಜನ್ ವರದಿ ಅನುಷ್ಠಾನ ಇಲ್ಲವೇ ಯಥಾಸ್ಥಿತಿ: ಅರಸು

ಬೆಂಗಳೂರು, ಮಾ. 2– ಮಹಾಜನ್ ವರದಿಯನ್ನು ಒಪ್ಪದಿದ್ದಲ್ಲಿ ಗಡಿ ವಿವಾದದ ಬಗ್ಗೆ ಯಥಾಸ್ಥಿತಿಯನ್ನು ಉಳಿಸಿಕೊಂಡುಬರಲು ರಾಜ್ಯ ಸರ್ಕಾರ ತೀರ್ಮಾನಿಸಿದೆಯೆಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು. ಕರ್ನಾಟಕ– ಮಹಾರಾಷ್ಟ್ರ ಗಡಿ ಸಮಸ್ಯೆ ಪರಿಹಾರಕ್ಕೆ ಪರಿಶೀಲಿಸಿದ ಹಲವು ಪರಿಹಾರಗಳಲ್ಲಿ ‘ಯಥಾಸ್ಥಿತಿಯೂ ಒಂದು’ ಎಂದರು.

ಬಿ.ಜಿ. ಬಣಕಾರ ಮತ್ತು ಬಿ.ಬಿ. ಸಯನಕ್ ಅವರ ಪ್ರಶ್ನೆಗಳಿಗೆ ಉತ್ತರಿಸಿದ ಅರಸು ಅವರು, ಆ ವಿಷಯದ ಬಗೆಗೆ ಪ್ರಧಾನಿಗಳಾಗಲೀ ಕೇಂದ್ರದ ಗೃಹ ಸಚಿವರಾಗಲೀ ನಿರ್ದಿಷ್ಟ ಸಲಹೆಗಳನ್ನು ನೀಡಿದ ವಿಷಯ ತಮಗೆ ಗೊತ್ತಿಲ್ಲವೆಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಮಾರ್ಚ್ 3, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಸಪ್ತಮಿ ಗಂ. 08-45 **ನಕ್ಷತ್ರ:** ಅನುರಾಧಾ ಗಂ. 15-55 **ಯೋಗ:** ಹರ್ಷಣ ಗಂ. 17-24
ಕರಣ: ಬವ ಗಂ. 08-45, ಕುಂಭ ಮಾಸದ 19 ನೇ ದಿನ, **ಮಳೆನಕ್ಷತ್ರ:** ಶತಭಿಷ 4.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-48 **ಸೂರ್ಯಾಸ್ತ :** 06-36
ಮುಸ್ಲಿಂ ದಿನಾಂಕ : 21 ಶಬನ್
ಅದೃಷ್ಟ ಸಂಖ್ಯೆ : 2, 7

ಮೇಷ: ನಿಮಗೀಗ ಸಿಕ್ಕಿರುವ ಕೆಲಸದಲ್ಲೇ ಮುಂದುವರೆಯುವುದರಿಂದ ಮುಂದೆ ಉತ್ತಮವಾದ ಅವಕಾಶಗಳನ್ನು ಪಡೆಯುವಿರಿ. ವೃತ್ತಿ ಜೀವನಕ್ಕೆ ಸಂಬಂಧಿಸಿದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಈ ದಿನ ಸಫಲರಾಗುವಿರಿ.

ವೃಷಭ: ನಿಮ್ಮ ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಇದರಿಂದ ನಿಮ್ಮ ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ಜವಾಬ್ದಾರಿಗಳನ್ನು ನಿಭಾಯಿಸಲೂ ಸಿದ್ಧರಾಗಬೇಕಾಗಲಿದೆ.

ಮಿಥುನ: ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯಾಪಾರ ವ್ಯವಹಾರ ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ. ವೈದ್ಯಕೀಯ ವೃತ್ತಿ ನಡೆಸುವವರಿಗೆ ಆಶ್ಚರ್ಯಕರವಾದಂಥ ಅನುಭವ ಸಿಗಲಿದೆ.

ಕರ್ಕಾಟಕ: ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶಗಳು ಬರುವವು. ಆಸ್ತಿಯನ್ನು ಖರೀದಿಮಾಡುವಾಗ ದಾಖಲೆಯ ಎಲ್ಲಾ ವಿವರಗಳ ಬಗ್ಗೆ ಎರಡೆರಡು ಬಾರಿ ಮಾಹಿತಿಯನ್ನು ಪಡೆದುಕೊಳ್ಳಿರಿ.

ಸಿಂಹ: ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಅಂಕಣಗಾರರಿಗೆ, ಲೇಖಕರಿಗೆ ಉತ್ತೇಜನದ ಕೊರತೆ ಕಾಣಲಿದೆ. ಅನವಶ್ಯಕವಾದ ವಿವಾದಗಳಿಂದ ದೂರ ಉಳಿಯುವ ಪ್ರಯತ್ನವನ್ನು ಮಾಡಿ.

ಕನ್ಯಾ: ಅನುಭವಿ ಜನರೊಂದಿಗೆ ವ್ಯವಹರಿಸುವುದರಿಂದ ವ್ಯವಹಾರಗಳು ವಿಸ್ತರಣೆಗೊಳ್ಳಲಿವೆ. ಹರಿತಾದ ಯಂತ್ರಗಳ ಜೊತೆ ಕೆಲಸ ಮಾಡುವವರು ಈ ದಿನ ಜಾಗ್ರತರಾಗಿರಿ. ಗುರಿ ಸಾಧನೆಗೆ ಸ್ನೇಹಿತರಿಂದ ನೆರವು ದೊರೆಯುವುದು.

ತುಲಾ: ಹೊಸದೊಂದು ಆದಾಯದ ದಾರಿ ನಿಮ್ಮ ಮುಂದೆ ಬರಲಿದೆ. ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಒಪ್ಪಿಕೊಳ್ಳಿ. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ. ಕಳೆದು ಹೋಗಿದ್ದ ವಸ್ತುಗಳು ಕೈ ಸೇರುವವು.

ವೃಶ್ಚಿಕ: ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಹೆಜ್ಜೆ ಇಡುವುದು ಸೂಕ್ತವಾದದ್ದು. ಪುಣ್ಯಕ್ಷೇತ್ರ ದರ್ಶನದಿಂದ ಮನಸ್ಸಿಗೆ ನೆಮ್ಮದಿ. ಮನೆಯಲ್ಲಿ ಸಂತಸದ ವಾತಾವರಣದಿಂದ ಹಿರಿಯರಿಗೆ ನೆಮ್ಮದಿ ಇರುವುದು.

ಧನು: ಅಧ್ಯಯನ ನಿರತರಿಗೆ ಸೂಕ್ತವಾದ ಸಲಹೆ, ಮಾರ್ಗದರ್ಶನ ಮತ್ತು ಅಧ್ಯಯನಕ್ಕೆ ಬೇಕಾದ ಗ್ರಂಥಗಳು ದೊರೆಯುವವು. ಆಂಜನೇಯನ ಸೇವೆ ಮಾಡುವುದರಿಂದ ನಿಮ್ಮ ಮನಸ್ಸಿನ ಗೊಂದಲ ನಿವಾರಣೆಯಾಗುತ್ತದೆ.

ಮಕರ: ವ್ಯಕ್ತಿಯಿಂದ ಅಥವಾ ಖಾಸಗಿ ಸಂಸ್ಥೆಯಿಂದ ಹಣ ಪಡೆದುಕೊಂಡು ಸ್ವಂತ ಉದ್ಯಮವನ್ನು ಆರಂಭಿಸುವ ಆಲೋಚನೆ ಮಾಡುವುದು ಸರಿಯಲ್ಲ. ರಂಗ ಕಲಾವಿದರಿಗೆ ಉತ್ತಮವಾದ ಅವಕಾಶಗಳು ಒದಗಿಬರುವುದು.

ಕುಂಭ: ಸಾಂಸಾರಿಕವಾಗಿ ಸದ್ಯದ ಪರಿಸ್ಥಿತಿಗೆ ಹೊಂದಿಕೊಳ್ಳುವುದೇ ಉತ್ತಮ ಎಂಬ ನಿಮ್ಮ ಭಾವನೆ ಸರಿಯಾಗಿದೆ. ಸಣ್ಣ ಮಕ್ಕಳ ವರ್ತನೆ ನಿಮ್ಮ ಮನಸ್ಸಿಗೆ ಸಂತೋಷ ತಂದುಕೊಡಲಿದೆ. ಮಗನ ಸಹಾಯಕ್ಕೆ ನಿಲ್ಲಬೇಕಾಗುವುದು.

ಮೀನ: ಸಮಾಲೋಚಿಸಿ ಮಾಹಿತಿಗಳನ್ನು ಕಲೆಹಾಕಿ, ಅಂತಿಮವಾಗಿ ನಿರ್ಧಾರ ಕೈಗೊಳ್ಳುವುದು ಸೂಕ್ತ. ಬೆಲೆ ಬಾಳುವ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡುವಿರಿ. ಸಾಮಾಜಿಕ ಜೀವನದಲ್ಲಿ ಕಾರ್ಯಪ್ರವೃತ್ತರಾಗಿರಿ.

ಪದಬಂಧ 5609

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
4.ಗಟ್ಟಿಯಾದ ಕೂಗಿದು (3)
5.ಈಕೆ ದುಷ್ಟಸ್ವಭಾವದ ಹೆಂಗಸು (3)
6.ಕಾರು ಉಳ್ಳವನು ಹಬ್ಬಿಸಿದ ಗಾಳಿಸುದ್ದಿ! (3)
7.ನೀರಾಗಿ ಕಲಸಿದ ಮಣ್ಣು (3)
9.ಮಂಕರಿ ಹೊತ್ತಿರುವವನಿಗೆ ಒಂಚೂರೂ ಬುದ್ಧಿಯಿಲ್ಲ! (2)
10.ನಾಯಕ ತೋರಿಸಿದ ಸ್ವರ್ಗ (2)
12.ಸೀರೆಯ ಹೊದೆಯುವ ಭಾಗ (3)
14.ಪದ ಹೇಳಿ ಪಡೆದ ಬಿಲ್ಲೆ (3)
15.ಹೊಟ್ಟೆ ಇಲ್ಲಿ ಕಾಣುತ್ತಿದೆ (3)
16.ಕೋಟೆಯ ಸುತ್ತಣ ಮೇಲು ಗೋಡೆ (3)
17.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ
1.ಸ್ಥಾನವನ್ನು ಕಳೆದುಕೊಂಡವನು (4)
2.ವಿದ್ಯಾರ್ಥಿಗಳಿಗೆ ಓದಲು ಗೊತ್ತುಪಡಿಸಿದ ಪುಸ್ತಕ (5)
3.ಗುರುಗುಟ್ಟುತ್ತಿರುವ ಗಂಡುಕುರಿ (3)
4.ತೆಗಳಿಕೆಯಲ್ಲೇ ಸಂಪಾದನೆ! (3)
8.ಸಭೆಯಲ್ಲಿ ಕುಳಿತಿರುವವನು (3)
9.ಜನ ಹೊಕ್ಕಿರುವ ಗುಡಿ (3)
10.ಹೆಸರಿಡುವ ಶಾಸ್ತ್ರ (5)
11.ಅವನತಿಯ ಸಮಯ (4)
13.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
14.ಶ್ರೇಷ್ಠ ಎಂದು ಹೀಗೆನ್ನಿ (3)



5608ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಇತಿಹಾಸ 3.ಚಿಲಖತ್ತು
4.ಮೀಸಲು 5.ಅಪರೂಪ
7.ಕಣ್ಣೀರು 9.ಕವಲು
10.ಜನಾನಾ 11.ಬಿಕ್ಕಲಂ
13.ಮಧುಕರಿ 14.ಗಗನ
15.ತಾರುಮಾರು 16.ವಿಧ್ವಂಸಕ

ಮೇಲಿಂದ ಕೆಳಕ್ಕೆ:
2.ಸಮೀಪ 3.ಚಿಲುಕ
6.ಪರಾವಲಂಬಿ
8.ರುದ್ರನಾಟಕ 12.ಲಂಗರು
13.ಮನವಿ

ಸುಡೊಕು 5994

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5993 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಐಡಿಯಲ್ ಹೋಮ್ಸ್ ಬಳಿ ಬಂಗಾರಪ್ಪ ನಗರ ವ್ಯಾಪ್ತಿ: ಆರು ಕೊಳವೆಬಾವಿಗಳಷ್ಟೇ ನೀರಿಗೆ ಆಸರೆ

ಕುಡಿಯುವ ನೀರಿಗೆ ಜನರ ಪರದಾಟ

ಚಿಕ್ಕರಾಮು

ಮುಖ್ಯಾಂಶಗಳು

- ಕೊಳವೆ ಬಾವಿಗಳಲ್ಲಿ ಬತ್ತುತ್ತಿರುವ ಅಂತರ್ಜಲ
- ಪೈಪ್ ಹಾಕಿದ್ದರೂ ಕಾವೇರಿ ನೀರು ಬರುತ್ತಿಲ್ಲ
- ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ : ಜಲಮಂಡಳಿ

ರಾಜರಾಜೇಶ್ವರಿನಗರ: ಐಡಿಯಲ್ ಹೋಮ್ಸ್ ಬಡಾವಣೆಗೆ ಹೊಂದಿಕೊಂಡಿರುವ ಬಂಗಾರಪ್ಪ ನಗರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದ್ದು, ಜನರು ನೀರಿಗಾಗಿ ಕಿಲೋಮೀಟರ್ ಗಟ್ಟಲೆ ತೆರಳಬೇಕಾಗಿದೆ.

ಬಂಗಾರಪ್ಪನಗರದಲ್ಲಿ 1,500ಕ್ಕೂ ಹೆಚ್ಚು ಮನೆಗಳಿವೆ. ಬಿಬಿಎಂಪಿ ಕೊರೆಸಿರುವ ಆರು ಕೊಳವೆಬಾವಿಗಳು ಈ ಜನರಿಗೆ ಕುಡಿಯುವ ನೀರಿಗೆ ಆಸರೆ. ಆದರೆ, ಇಷ್ಟೂ ಕೊಳವೆಬಾವಿಗಳಲ್ಲಿ ನೀರು ಬತ್ತಿಹೋಗಿದ್ದು, ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ.

'ಆಸ್ಪತ್ರೆ ಮುಂಭಾಗದ ರಸ್ತೆಯಲ್ಲಿ (ಬಸ್ ನಿಲ್ದಾಣದ ಹಿಂಭಾಗ) ನೀರು ಪೂರೈಕೆ ಮಾಡಿ ಒಂದು ತಿಂಗಳಾಗಿದೆ. ಪರಿಣಾಮವಾಗಿ, ನಾಗರಿಕರು ಆಟೊಗಳಲ್ಲಿ ಬಕೆಟ್, ದೊಡ್ಡ ಪಾತ್ರೆಗಳಲ್ಲಿ ನೀರು ತುಂಬಿಕೊಂಡು ತಂದು ಜೀವನ ಸಾಗಿಸಬೇಕಾಗಿದೆ' ಎನ್ನುತ್ತಾರೆ ನಾಗರಾಜು ಮತ್ತು ಸವಿತಾ.

ಬಂಗಾರಪ್ಪನಗರದ ಕೆಲವು ರಸ್ತೆಗಳಲ್ಲಿ ಮೂರು ದಿನಕ್ಕೊಮ್ಮೆ ಒಂದು ತಾಸು ನೀರು ಬರುತ್ತದೆ. ಕೂಲಿ ಮಾಡಿ ಜೀವನ ನಡೆಸುತ್ತಿರುವ ನಾವು ದುಬಾರಿ ಹಣ ತೆತ್ತು ನೀರು ಕೊಳ್ಳುವುದು ಕಷ್ಟ. ಹಾಗಾಗಿ, ಡ್ರಮ್, ಸಣ್ಣ ಪುಟ್ಟ ಪಾತ್ರೆಗಳಲ್ಲಿ ನೀರು ಸಂಗ್ರಹಿಸಿಕೊಂಡು ಜೀವನ ಮಾಡಬೇಕಾಗಿದೆ' ಎಂದು ಗೃಹಿಣಿ ಭಾರತಿ ನೋವು ತೋಡಿಕೊಂಡರು.

ಕಾವೇರಿ ನೀರು ಪೂರೈಕೆಗಾಗಿ ಪೈಪ್ ಅಳವಡಿಸಿ ಹಲವು ವರ್ಷಗಳಾಗಿದ್ದರೂ ಇಲ್ಲಿಯವರೆಗೂ ಕಾವೇರಿ ನೀರಿನ ಭಾಗ್ಯ ನಮಗೆ ದೊರೆತಿಲ್ಲ. ಸಿರಿವಂತರು, ಖಾಸಗಿ ಬಡಾವಣೆಗಳಲ್ಲಿರುವ ನಾಗರಿಕರಿಗಷ್ಟೇ ಜಲಮಂಡಳಿ ಅಧಿಕಾರಿಗಳು ನಿತ್ಯ ನೀರು ಪೂರೈಸುತ್ತಾರೆ. ನಮ್ಮಂತಹ ಬಡವರು ವಾಸಿಸುವ ಬಡಾವಣೆಗಳಿಗೆ ಶುದ್ಧ ಕುಡಿಯುವ ನೀರು ಕನಸಿನ ಮಾತಾಗಿದೆ. ನಾವೂ ಸರ್ಕಾರಕ್ಕೆ ಆಸ್ತಿ ತೆರಿಗೆ, ಜಿಎಸ್‌ಟಿ ಕಟ್ಟುತ್ತೇವೆ. ಆದರೆ, ಶುದ್ಧ ಕುಡಿಯುವ ನೀರು ಮಾತ್ರ ನಮಗೆ ಸಿಗುತ್ತಿಲ್ಲ' ಎಂದು ತಾಯಮ್ಮ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ಜಲಮಂಡಲಿ ತಾತ್ಕಾಲಿಕವಾಗಿ ಸಿಂಟೆಕ್ಸ್ ನೀರಿನ ಟ್ಯಾಂಕ್ ಅಳವಡಿಸಿರುವುದು

ಬಕೆಟ್‌ಗಳಲ್ಲಿ ನೀರು ತುಂಬಿಸಿ, ಆಟೊಗಳ ಮೂಲಕ ಮನೆಗೆ ಕೊಂಡೊಯ್ಯುತ್ತಿರುವುದು

'ನೀರು ಪೂರೈಕೆಗೆ ಟ್ಯಾಂಕ್ ಅಳವಡಿಕೆ'

'ಬಂಗಾರಪ್ಪನಗರ ವ್ಯಾಪ್ತಿಯಲ್ಲಿ 2 ಸಾವಿರ ಲೀಟರ್ ಸಾಮರ್ಥ್ಯದ 4 ಸಿಂಟೆಕ್ಸ್ ನೀರಿನ ಟ್ಯಾಂಕ್ ಇರಿಸಲಾಗಿದ್ದು. ನಿತ್ಯ ಒಂದು ಲಾರಿಯಲ್ಲಿ ನೀರು ತಂದು ಟ್ಯಾಂಕ್‌ಗಳಿಗೆ ತುಂಬಿಸಲಾಗುತ್ತಿದೆ' ಎಂದು ಜಲಮಂಡಳಿ ಆರ್.ಆರ್.ನಗರ ವಿಭಾಗದ ಸಹಾಯಕ ಎಂಜಿನಿಯರ್ ಕೆ.ಕಾವ್ಯ ಹೇಳಿದರು.

ಜಲಮಂಡಲಿ ಕೊಳವೆಬಾವಿ ವಿಭಾಗದ ಸಹಾಯಕ ಎಂಜಿನಿಯರ್ ರವಿಚಂದ್ರ, 'ಈ ವ್ಯಾಪ್ತಿಯಲ್ಲಿ 14 ಕೊಳವೆಬಾವಿಗಳಿದ್ದು, ಆರರಲ್ಲಿ ಮಾತ್ರ ಸಣ್ಣಪ್ರಮಾಣದಲ್ಲಿ ನೀರು ಬರುತ್ತಿದ್ದು, ನೀರಿನ ಸಮಸ್ಯೆ ತಲೆದೋರಿದೆ. ಹೆಚ್ಚುವರಿ ಕೊಳವೆ ಕೊರೆಸಲು ಟೆಂಡರ್ ಪ್ರಕ್ರಿಯೆಯಲ್ಲಿದೆ' ಎಂದರು.

'9 ಶಾಸಕರು ಸಂಪರ್ಕದಲ್ಲಿದ್ದಾರೆ'

ಹಿಮಾಚಲ ಪ್ರದೇಶ: ಅನರ್ಹ ಶಾಸಕ ಪ್ರತಿಪಾದನೆ

ಶಿಮ್ಲಾ (ಪಿಟಿಐ): 'ಕೆಲವು ಬಂಡಾಯ ಶಾಸಕರು ಹಿಂತಿರುಗಲು ಬಯಸಿದ್ದಾರೆ' ಎಂದು ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಹೇಳಿಕೆಯನ್ನು, ಶಾಸಕ ಸ್ಥಾನದಿಂದ ಅನರ್ಹಗೊಂಡಿರುವ ರಾಜೇಂದ್ರ ರಾಣಾ ಅವರು ಅಲ್ಲಗಳೆದಿದ್ದು, ಪಕ್ಷದ ಕನಿಷ್ಠ ಒಂಬತ್ತು ಶಾಸಕರು ತಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಶನಿವಾರ ಪ್ರತಿಪಾದಿಸಿದರು.

ಸುಖು ಅವರು ತಮ್ಮ ಹೇಳಿಕೆಗಳಿಂದ ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿ, ನಂತರ ವಿಧಾನಸಭೆಯಿಂದ ಅನರ್ಹಗೊಂಡ ಆರು ಕಾಂಗ್ರೆಸ್ ಶಾಸಕರಲ್ಲಿ ರಾಜೇಂದ್ರ ರಾಣಾ ಅವರು ಒಬ್ಬರು. 'ಯಾರೊಬ್ಬರು ಹಿಂತಿರುಗಲು ಬಯಸಿಲ್ಲ' ಎಂದು ರಾಣಾ ತಿಳಿಸಿದರು.

'ರಾಜ್ಯಸಭಾ ಸ್ಥಾನಕ್ಕೆ ಸ್ಪರ್ಧಿಸಲು ರಾಜ್ಯದಿಂದ ಯಾರೊಬ್ಬರೂ ಕಾಂಗ್ರೆಸ್‌ಗೆ ದೊರೆಯಲಿಲ್ಲವೇ' ಎಂದ ಅವರು, 'ಹಿಮಾಚಲ ಪ್ರದೇಶ ಮತ್ತು ರಾಜ್ಯದ ಜನರ ಗೌರವವನ್ನು ಎತ್ತಿಹಿಡಲು ನಾವು ಈ ನಿರ್ಧಾರ ತೆಗೆದುಕೊಂಡೆವು' ಎಂದು ಅಡ್ಡಮತದಾನದ ಕುರಿತ ಪ್ರಶ್ನೆಗೆ ಉತ್ತರಿಸಿದರು.

ಅನರ್ಹರ ಜತೆ ಚರ್ಚಿಸಿರುವೆ– ಸುಖು: ಮತ್ತೊಂದೆಡೆ ಸುಖು ಅವರು, 'ಕಾಂಗ್ರೆಸ್‌ನ ಶೇ 80ರಷ್ಟು ಶಾಸಕರು ಒಟ್ಟಿಗೆ ಇದ್ದೇವೆ. ಉಳಿದವರು ಕ್ಷುಲ್ಲಕ ವಿಷಯಗಳ ಬಗ್ಗೆ ಅತೃಪ್ತಿ ಹೊಂದಿದ್ದಾರೆ. ಅದನ್ನು ಸರಿಪಡಿಸುವ ಜವಾಬ್ದಾರಿ ನನ್ನದು. ಹೀಗಾಗಿ ಅನರ್ಹಗೊಂಡಿರುವ ಆರು ಜನರ ಜತೆಗೂ ಮಾತುಕತೆ ನಡೆಸಿದ್ದು, ಸಮನ್ವಯ ಸಮಿತಿ ರಚನೆಯಾದ ಬಳಿಕ ಪರಿಸ್ಥಿತಿ ಸುಧಾರಿಸಲಿದೆ' ಎಂದು ಹೇಳಿದರು.

ಕಂಪ್ಲಿ: 138.72 ಕ್ವಿಂಟಲ್ ಒಣಮೆಣಸಿನಕಾಯಿ ಭಸ್ಮ

ಪ್ರಜಾವಾಣಿ ವಾರ್ತೆ

ಕುರುಗೋಡು/ಕಂಪ್ಲಿ (ಬಳ್ಳಾರಿ): ತಾಲ್ಲೂಕಿನ ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ಶನಿವಾರ ವಿದ್ಯುತ್ ತಗುಲಿದ ಪರಿಣಾಮ ಲಾರಿಯಲ್ಲಿ ಸಾಗಿಸಲಾಗುತ್ತಿದ್ದ 138.72 ಕ್ವಿಂಟಲ್ ಒಣ ಮೆಣಸಿನಕಾಯಿ ಅಗ್ನಿಗೆ ಆಹುತಿಯಾಯಿತು.

ಸಿದ್ದಮ್ಮನಹಳ್ಳಿ ಗ್ರಾಮದ ರೈತರಾದ ಮಂಜುನಾಥ ಅವರಿಗೆ ಸೇರಿದ 125 ಚೀಲ, ವದ್ದಟ್ಟಿ ಮೌನೇಶ– 120 ಚೀಲ, ಕರಿಬಸಪ್ಪ–96 ಚೀಲ, ನಾಗಪ್ಪ– 67 ಚೀಲ ಸೇರಿ ಒಟ್ಟು 408 ಚೀಲ ಒಣ ಮೆಣಸಿನಕಾಯಿ ಸುಟ್ಟಿದೆ.

'ಲಾರಿಯಲ್ಲಿ ಒಟ್ಟು 408 ಚೀಲ ಮೆಣಸಿನಕಾಯಿಯನ್ನು ಗೋದಾಮಿಗೆ ಸಾಗಿಸಲಾಗುತಿತ್ತು. ಮಾರುಕಟ್ಟೆಯಲ್ಲಿ ಒಂದು ಕ್ವಿಂಟಲ್ ಮೆಣಸಿನಕಾಯಿ ದರ ₹13 ಸಾವಿರ ಇದೆ. ಒಣಮೆಣಸಿನಕಾಯಿ ಮತ್ತು ಲಾರಿ ಸೇರಿ ₹25 ಲಕ್ಷ ನಷ್ಟ ಸಂಭವಿಸಿದೆ' ಎಂದು ಅಂದಾಜಿಸಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದರು.

ಕುಡುತಿನಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

33 ಟ್ರ್ಯಾಕ್ಟರ್‌ನಷ್ಟು ಮೇವಿಗೆ ಬೆಂಕಿ

ಕಂಪ್ಲಿ ತಾಲ್ಲೂಕಿನ ಎಮ್ಮಿಗನೂರು ಗ್ರಾಮದ ಇಟಗಿ ರಸ್ತೆ ಬಳಿ 33 ಟ್ರ್ಯಾಕ್ಟರ್ ಲೋಡ್‌ನಷ್ಟು ಭತ್ತದ ಮೇವು ಮತ್ತು ಮುಸುಕಿನ ಜೋಳದ ಬಣವೆಗಳು ಶುಕ್ರವಾರ ರಾತ್ರಿ ಬೆಂಕಿಗೆ ಆಹುತಿಯಾಗಿವೆ. ಸ್ಥಳಕ್ಕೆ ಧಾವಿಸಿದ ಕುರುಗೋಡು ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಘಟನೆ ಕುರಿತು ಮೇಲಧಿಕಾರಿಗಳಿಗೆ ವರದಿ ನೀಡಿರುವುದಾಗಿ ಗ್ರಾಮಾಡಳಿತ ಅಧಿಕಾರಿ ಎಚ್.ವಿ. ಮಂಜುನಾಥ ಶನಿವಾರ ತಿಳಿಸಿದರು.

ಹೂ ಸಂಭ್ರಮ

ವಿಧಾನಸೌಧ ಆವರಣದಲ್ಲಿರುವ ತಬೂಬಿಯಾ ಮರದಲ್ಲಿ ಅರಳಿರುವ ಹಳದಿ ಹೂಗಳು ನೋಡುಗರ ಗಮನಸೆಳೆದವು – ಪ್ರಜಾವಾಣಿ ಚಿತ್ರ

ಬಿಲ್ಕಿಸ್ ಬಾನು ಪ್ರಕರಣ: ಇಬ್ಬರು ಅಪರಾಧಿಗಳು 'ಸುಪ್ರೀಂ'ಗೆ ಮೊರೆ

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಪ್ರಕರಣದ 11 ಮಂದಿ ಅಪರಾಧಿಗಳಲ್ಲಿ ಇಬ್ಬರು, ಜನವರಿ 8 ರಂದು ನೀಡಿದ್ದ ತೀರ್ಪನ್ನು ವಿಸ್ತೃತ ಪೀಠಕ್ಕೆ ಒಪ್ಪಿಸುವಂತೆ ಕೋರಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಅವರ ಕುಟುಂಬದ ಏಳು ಮಂದಿಯನ್ನು ಹತ್ಯೆಗೈದ ಪ್ರಕರಣದ ಅಪರಾಧಿಗಳಿಗೆ ಕ್ಷಮಾದಾನ ನೀಡಿದ್ದ ಗುಜರಾತ್ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಜ.8 ರಂದು ರದ್ದುಪಡಿಸಿತ್ತು. ಎಲ್ಲ 11 ಅಪರಾಧಿಗಳು ಮತ್ತೆ ಜೈಲು ಸೇರಿದ್ದರು.

'ಕ್ಷಮಾದಾನ ರದ್ದುಪಡಿಸಿರುವ ತೀರ್ಪು, 2002ರ ಸಂವಿಧಾನ ಪೀಠ ನೀಡಿದ್ದ ಆದೇಶಕ್ಕೆ ವ್ಯತಿರಿಕ್ತವಾಗಿದೆ. ಆದ್ದರಿಂದ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ಒಪ್ಪಿಸಬೇಕು' ಎಂದು ಗೋಧ್ರಾ ಜೈಲಿನಲ್ಲಿರುವ ಅಪರಾಧಿಗಳಾದ ರಾಧೇಶ್ಯಾಮ್ ಭಗವಾನ್‌ದಾಸ್ ಶಾ ಮತ್ತು ರಾಜೂಭಾಯ್ ಬಾಬುಲಾಲ್ ಸೋನಿ ಅವರು ಮೇಲ್ಮನವಿ ಸಲ್ಲಿಸಿದ್ದಾರೆ.

'ರೈಲು ಅಪಘಾತ: ಕ್ರಿಕೆಟ್ ಪಂದ್ಯ ವೀಕ್ಷಿಸುತ್ತಿದ್ದ ಚಾಲಕ'

ನವದೆಹಲಿ (ಪಿಟಿಐ): ಆಂಧ್ರಪ್ರದೇಶದ ವಿಜಯನಗರ ಜಿಲ್ಲೆಯಲ್ಲಿ 2023 ಅಕ್ಟೋಬರ್ 29ರಂದು ನಡೆದಿದ್ದ ರೈಲು ಅಪಘಾತದ ವೇಳೆ ರೈಲೊಂದರ ಚಾಲಕ ಮತ್ತು ಸಹ ಚಾಲಕ ಮೊಬೈಲ್ ಫೋನ್‌ನಲ್ಲಿ ಕ್ರಿಕೆಟ್ ಪಂದ್ಯ ವೀಕ್ಷಿಸುತ್ತಿದ್ದರು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಶನಿವಾರ ತಿಳಿಸಿದರು.

ಈ ಅಪಘಾತದ ಬಳಿಕ ಪ್ರಯಾಣಿಕರ ಸುರಕ್ಷತೆಗೆ ಹೊಸ ವ್ಯವಸ್ಥೆಯನ್ನು ಅಳವಡಿಸಿದ್ದು, ಇದರಿಂದ ಚಾಲಕ ಮತ್ತು ಸಹಾಯಕ ಚಾಲಕ ರೈಲಿನ ಚಲನೆಯ ಬಗ್ಗೆ ನಿಗಾವಹಿಸುತ್ತಿದ್ದಾರಾ ಎಂಬುದನ್ನು ತಿಳಿಯಲು ಸಾಧ್ಯವಿದೆ ಎಂದರು.

ವಿಶಾಖಪಟ್ಟಣ–ರಾಯಗಢ ಪ್ರಯಾಣಿಕ ರೈಲು ವಿಶಾಖಪಟ್ಟಣ–ಪಲಾಸ ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ 14ಮಂದಿ ಪ್ರಯಾಣಿಕರು ಮೃತಪಟ್ಟಿದ್ದರು.

ಮಲ್ಲಿಪಟ್ಟಣ ಡಿಆರ್‌ಎಫ್‌ಒ ಅಮಾನತು

ಪ್ರಜಾವಾಣಿ ವಾರ್ತೆ

ಹಾಸನ: ಅಕ್ರಮವಾಗಿ ಮರ ಕಡಿದ ಪ್ರಕರಣದಲ್ಲಿ ಶಾಮೀಲಾಗಿರುವ ಆರೋಪದಲ್ಲಿ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣದ ಪ್ರಾದೇಶಿಕ ವಲಯ ಅರಣ್ಯ ಅಧಿಕಾರಿ ಕೆ.ಎನ್. ರಘು ಅವರನ್ನು ಅಮಾನತು ಮಾಡಲಾಗಿದೆ.

ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣದ ಹೋಬಳಿಯ ಬೂದನೂರು ಗ್ರಾಮದ ಸ.ನಂ. 37ರ ಉಮೇಶ್ ಎಂಬುವವರ ಜಮೀನಿನಲ್ಲಿ ಅಕ್ರಮವನ್ನು ಮರಗಳನ್ನು ಕಡಿಯಲಾಗಿತ್ತು. ಸಕಲೇಶಪುರದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದಾಗ50–60 ಮರಗಳನ್ನು ಜೆಸಿಬಿಯಿಂದ ಕಡಿದಿರುವುದು ಕಂಡು ಬಂದಿತ್ತು.

ಉಪ ವಲಯ ಅರಣ್ಯಾಧಿಕಾರಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್ ತಿಳಿಸಿದ್ದಾರೆ.

ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ ತಾ||, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./ಭೂ.ಉ.ಬ./09/2023–24 ದಿನಾಂಕ : 23–02–2024

ಸಾರ್ವಜನಿಕ ಪ್ರಕಟಣೆ

ಪಶ್ಚಿಮಘಟ್ಟಗಳ ದಟ್ಟ ಕಾಡಿನಲ್ಲಿ ತೊರೆಗಳ ಪಾದ ಮಟ್ಟದ ನೀರಿನಲ್ಲಿ ರಾತ್ರಿಯಿಡೀ ಕಳೆದು ಕುಂಬಾರ ಕಪ್ಪೆಗಳ ಬದುಕಿನ ವಿಧಾನ ಧ್ಯಾನಿಸಿದ್ದಾರೆ. ಈ ತಳಿಯ ಕಪ್ಪೆಗಳು ಕತ್ತಲೆಯಲ್ಲಿ ಕ್ರಿಯಾಶೀಲವಾಗುತ್ತವೆ. ಹಗಲು ಹೊತ್ತು ಪೊಟರೆಗಳಲ್ಲಿಯೇ ಇರುತ್ತವೆ. ಹೀಗಾಗಿ ಕತ್ತಲೆ–ಕಾನು ಇವರ ಅಧ್ಯಯನದ ಕ್ಷೇತ್ರ, ಕಾರ್ಯದ ನೆಲೆ.

ಆದರ್ಶ ಸಂಗಾತಿ

ಪ್ರತೀ ಮಹಿಳೆ ಹುಡುಕುವ ಆದರ್ಶ ಸಂಗಾತಿ ನಮ್ಮ ಗಂಡು ಕುಂಬಾರ ಕಪ್ಪೆ ಎಂದು ಗಿರೀಶ ಜೆನ್ನಿ ಚಟಾಕಿ ಹಾರಿಸಿದರು. ಹೆಣ್ಣುಕಪ್ಪೆ ನಿರ್ದಿಷ್ಟ ಸ್ಥಳಗಳಲ್ಲಿ ನೂರಾರು ಮೊಟ್ಟೆಗಳ ಇಟ್ಟು ಅಲ್ಲಿಂದ ಹೊರಡುತ್ತದೆ. ಆದರೆ, ಆ ಮೊಟ್ಟೆಗಳನ್ನು ರಕ್ಷಿಸಿ ಮರಿಗಳಾಗುವವರೆಗೂ ನಿಗಾ ವಹಿಸುವುದು ಗಂಡು ಕಪ್ಪೆ.

13ನೇ ಪುಟಕ್ಕೆ...

ಕುಂಬಾರ ಕಪ್ಪೆ
ಚಿತ್ರ: ಪ್ರದೀಪ್ ಕಲ್ಲಳ್ಳಿ

ಕಪ್ಪೆರಾಗಕ್ಕೆ ಜಾಕ್ಸನ್‌ವೈಲ್ಡ್ ಗರಿ

ಕುಂಬಾರ ಕಪ್ಪೆಯ ಬದುಕಿನ ಬಗ್ಗೆ ಬೆಂಗಳೂರಿನ ಪ್ರಶಾಂತ ಎಸ್. ನಾಯಕ 'ಕಪ್ಪೆರಾಗ' ಹೆಸರಿನ ಐದೂವರೆ ನಿಮಿಷದ ಸಾಕ್ಷ್ಯಚಿತ್ರ ನಿರ್ದೇಶಿಸಿದ್ದಾರೆ. ಅಮೆರಿಕದಲ್ಲಿ ವನ್ಯಜೀವಿಗಳಿಗೆ ಸಂಬಂಧಿಸಿದ ಚಿತ್ರಗಳಿಗೆ ನೀಡುವ ಪ್ರತಿಷ್ಠಿತ ಜಾಕ್ಸನ್‌ವೈಲ್ಡ್ ಹಾಗೂ ಇಂಡಿಪೆಂಡೆಂಟ್ ಶಾರ್ಟ್ಸ್ ಅವಾರ್ಡ್‌ಗಳು ಈ ಕಿರುಚಿತ್ರಕ್ಕೆ ಲಭಿಸಿವೆ. ಚಿತ್ರ ನಿರ್ಮಾಣಕ್ಕೆ ಗಿರೀಶ ಜೆನ್ನಿ ನೆರವಾಗಿದ್ದಾರೆ. ಈ ಕಿರುಚಿತ್ರ ದಾದಾ ಸಾಹೇಬ್ ಫಾಲ್ಕೆ ಚಲನಚಿತ್ರೋತ್ಸವ, ಮೈಸೂರಿನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲೂ ಪ್ರಶಸ್ತಿ ಗೆದ್ದಿದೆ. ಸತತ ಆರು ವರ್ಷ ಈ ಕಿರುಚಿತ್ರದ ಚಿತ್ರೀಕರಣ ಆಗಿದೆ. ಸಾಕ್ಷ್ಯಚಿತ್ರಕ್ಕೆ ಕಥೆ ಪ್ರದೀಪ್ ಶಾಸ್ತ್ರಿ ಬರೆದಿದ್ದಾರೆ. ಅಶ್ವಿನ್ ಪಿ. ಕುಮಾರ್ ಸಂಗೀತ ನೀಡಿದ್ದಾರೆ.

'ಕಪ್ಪೆಯ ನಡವಳಿಕೆ, ಆವಾಸಸ್ಥಾನ ಮತ್ತು ಜೀವನ ಚಕ್ರ ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡಿದವರು ಗಿರೀಶ. ಚಿಕ್ಕಗಾತ್ರದ ಕುಂಬಾರ ಕಪ್ಪೆಗಳು ಅಷ್ಟು ಸುಲಭವಾಗಿ ಮನುಷ್ಯರ ಕಣ್ಣಿಗೆ ಕಾಣಸಿಗುವುದಿಲ್ಲ. ಸುಲಭವಾಗಿ ಗುರುತು ಮರೆಮಾಚುತ್ತವೆ. ಆದರೂ ದಟ್ಟ ಕಾಡಿನಲ್ಲಿ ಸಣ್ಣ ತೊರೆಯ ಪಕ್ಕದಲ್ಲಿ ಕುಳಿತು, ಧಾರಾಕಾರ ಮಳೆ, ಜಿಗಣೆ ಕಾಟ, ವಿಷಪೂರಿತ ಹಾವುಗಳ ಅಪಾಯ ಎದುರಿಸಿ ಸಾಕ್ಷ್ಯಚಿತ್ರ ಪೂರ್ಣಗೊಳಿಸಲು ನಮಗೆ ಸಹಾಯ ಮಾಡಿದ್ದಾರೆ. ಅದು ಗಿರೀಶ ಅವರ ಬದ್ಧತೆ' ಎಂದು ಪ್ರಶಾಂತ ನಾಯಕ ಹೇಳುತ್ತಾರೆ. ಗಿರೀಶ ಅವರ ಕೆಲಸವು 'ವೈಲ್ಡ್ ಕರ್ನಾಟಕ', 'ಲಿಟಲ್ ಪ್ಲಾನೆಟ್' ಮತ್ತು 'ದಿ ಲಾಸ್ಟ್ ಹೋಪ್' ಸಾಕ್ಷ್ಯಚಿತ್ರ ತಯಾರಕರಿಗೂ ನೆರವಾಗಿದೆ.

ಕೋಚ್ ಕಂಡಂತೆ 'ಯಶಸ್ವಿ' ಮೆಟ್ಟಿಲುಗಳು...

ಭಾರತ ಕ್ರಿಕೆಟ್ ತಂಡದ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ಕ್ರಿಕೆಟಿಗನಾಗಿ ಬೆಳೆದಿದ್ದು ಹೇಗೆ? ಇಂಗ್ಲೆಂಡ್‌ನ ವೇಗಿ ಜಿಮ್ಮಿ ಆ್ಯಂಡರ್ಸನ್ ಎಸೆತಗಳನ್ನು ಸಿಕ್ಸರ್‌ಗೆ ಎತ್ತುವ 22ರ ಈ ಯುವಕ ಬಾಲ್ಯದಲ್ಲಿ ಹೇಗಿದ್ದ? ಮುಂಬೈನಲ್ಲಿ ಪಾನಿಪುರಿ ಮಾರಿ ಕ್ರಿಕೆಟಿಗನಾಗಿದ್ದು ನಿಜವೇ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ...

ಜ್ವಾಲಾ ಸಿಂಗ್, ತರಬೇತುದಾರ

2013ರ ಒಂದು ದಿನ ನಾನು ಆಜಾದ್ ಮೈದಾನದಲ್ಲಿ ಕೋಚ್ ಆಗಿರುವ ಸ್ನೇಹಿತನೊಬ್ಬನನ್ನು ಭೇಟಿಯಾಗಲು ಹೋಗಿದ್ದೆ. ಆತನ ಕ್ಲಬ್‌ನ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡುತ್ತಿದ್ದ ಹುಡುಗನನ್ನು ಗಮನಿಸಿದೆ. ಆತನ ಬಗ್ಗೆ ಸ್ನೇಹಿತನಿಗೆ ಕೇಳಿದೆ. 'ಆ ಹುಡುಗ ಬಹಳ ತೊಂದರೆಯಲ್ಲಿದ್ದಾನೆ. ಉತ್ತರಪ್ರದೇಶದಿಂದ ಬಂದಿದ್ದಾನೆ. ಹಿಂದೆ, ಮುಂದೆ ಯಾರೂ ಇಲ್ಲ. ಟೆಂಟ್‌ನಲ್ಲಿ ಇರ್ತಾನೆ. ಸಂಜೆ, ಬೆಳಿಗ್ಗೆ ಬಂದು ಅಭ್ಯಾಸ ಮಾಡ್ತಾನೆ. ಊಟವೂ ಸರಿಯಾಗಿ ಸಿಕ್ಕಿಲ್ಲ' ಎಂದು ಸ್ನೇಹಿತ ಹೇಳಿದ. ಆ ಹುಡುಗನನ್ನು ಕರೆದು ಹೆಸರು ಕೇಳಿದಾಗ ಯಶಸ್ವಿ ಜೈಸ್ವಾಲ್ ಎಂದ. ಕೃಶಕಾಯ, ಕಣ್ಣುಗಳಲ್ಲಿ ಭಯ, ಕೀಳರಿಮೆ ಛಾಯೆ ಇತ್ತು. ನಾನು ಕೇಳಿದ ಪ್ರಶ್ನೆಗಳಿಗೆ ನಿಧಾನವಾಗಿ ಉತ್ತರಿಸಿದ.

'ನಮ್ಮದು ಉತ್ತರಪ್ರದೇಶದ ಬದೋಹಿ. ಹ್ಯಾರಿಸ್ ಶೀಲ್ಡ್ ಕ್ರಿಕೆಟ್ ಟೂರ್ನಿಯಲ್ಲಿ ದ್ವಿಶತಕ ಹೊಡೆದಿದ್ದೆ. ಆದರೆ, ಅಲ್ಲಿ ನನಗೆ ಹೆಚ್ಚು ಆಡಲಾಗಿಲ್ಲ. ಮುಂಬೈಗೆ ಬಂದೆ. ಇಲ್ಲಿ ಯಾರೂ ನನಗೆ ಆಡಲು ಬಿಡುವುದಿಲ್ಲ' ಎಂದು ಹೇಳಿದ. ನನಗೆ ನನ್ನ ಜೀವನದ ಕಥೆ ನೆನಪಾಯಿತು.

ಗೋರಖಪುರದಿಂದ ಕ್ರಿಕೆಟ್ ಆಡಲು ಮುಂಬೈಗೆ ಬಂದಿದ್ದೆ. ಶಾರದಾದೇವಿ ಶಾಲೆ ಮೈದಾನದಲ್ಲಿ ಕಲಿತೆ. ಆದರೆ, ಕೆಲವು ವರ್ಷಗಳ ನಂತರ ಕೆಲವರು ತಪ್ಪು ವ್ಯಾಯಾಮ ಹೇಳಿಕೊಟ್ಟಿದ್ದರಿಂದ ನಾನು ಗಾಯಗೊಂಡು ಕ್ರಿಕೆಟ್ ಬಿಟ್ಟೆ. ನನ್ನ ತಂದೆ ಕ್ಯಾನ್ಸರ್‌ನಿಂದ ನಿಧನರಾದರು. ಅವರು ಕೊನೆಯುಸಿರೆಳೆಯುವ ಮುನ್ನ, 'ನೀನು ಮುಂಬೈಗೆ ಹೋಗಿ ದೊಡ್ಡ ಹೆಸರು ಮಾಡ್ತಿ ಅಂದುಕೊಂಡಿದ್ದೆ. ಆದರೆ, ನನ್ನ ಕನಸು ಈಡೇರಲಿಲ್ಲ' ಎಂದು ಹೇಳಿದ್ದರು. ಆ ಮಾತು ನನ್ನ ಮನದಲ್ಲಿ ಇರಿಯುತ್ತಿತ್ತು. ಬೇರೆ ಯಾರನ್ನಾದರೂ ದೊಡ್ಡ ಕ್ರಿಕೆಟಿಗನನ್ನಾಗಿ ಮಾಡಬೇಕು ಎಂಬ ಗುರಿ ಹರಳುಗಟ್ಟಿತು. ಮುಂದಿದ್ದ 'ಯಶಸ್ವಿ'ಯೇ ಆ ಹುಡುಗ ಎನಿಸಿತು.

14ನೇ ಪುಟಕ್ಕೆ...

ಯಶಸ್ವಿ ಜೈಸ್ವಾಲ್ ಅವರೊಂದಿಗೆ ಜ್ವಾಲಾ ಸಿಂಗ್

ಪಾನಿಪುರಿ ಮಾರಿದ್ದು ನಿಜವೇ?

'2013ರ ನಂತರ ಯಶಸ್ವಿ ಜೈಸ್ವಾಲ್ ಪಾನಿಪುರಿ ಮಾರಾಟ ಮಾಡಿಲ್ಲ. ಏಕೆಂದರೆ ನನ್ನ ಮನೆಯಲ್ಲಿಯೇ ಇದ್ದು ಕ್ರಿಕೆಟ್ ಕಲಿತ. ನನ್ನ ಕ್ರಿಕೆಟ್ ಗೆಳೆಯರಾದ ವಾಸೀಂ ಜಾಫರ್, ದಿಲೀಪ್ ವೆಂಗಸರ್ಕಾರ್ ಸೇರಿದಂತೆ ಎಲ್ಲರಿಂದಲೂ ಯಶಸ್ವಿಗೆ ಮಾರ್ಗದರ್ಶನ ಕೊಡಿಸಿದ್ದೆ' ಎನ್ನುತ್ತಾರೆ ಜ್ವಾಲಾ ಸಿಂಗ್.

'ನನ್ನ ಬಳಿ ಬರುವ ಮುನ್ನ ಆಜಾದ್ ಮೈದಾನದ ಸುತ್ತಮುತ್ತ ಇರುವ ಪಾನಿಪುರಿ ಅಂಗಡಿ, ಹಣ್ಣು, ಮಿಠಾಯಿ ಅಂಗಡಿಗಳಲ್ಲಿ ಯಶಸ್ವಿ ಹೋಗಿ ಇರುತ್ತಿದ್ದನೆಂದು ನೋಡಿದವರು ಹೇಳಿದ್ದರು. ಆದರೆ ಆತನೇ ಖುದ್ದು ಅಂಗಡಿಯಿಟ್ಟು ಮಾರಾಟ ಮಾಡಿರುವುದು ಅನುಮಾನ. ಟೆಂಟ್‌ನಲ್ಲಿ ಮಲಗುತ್ತಿದ್ದ ಹುಡುಗ ಸಣ್ಣಪುಟ್ಟ ಕೆಲಸ ಮಾಡಿರಬಹುದು. ಆದರೆ ಟಿ.ವಿ ವಾಹಿನಿ, ಮತ್ತಿತರ ಮಾಧ್ಯಮಗಳು ಅತಿರಂಜಿತವಾಗಿ ವರದಿ ಮಾಡಿವೆ'.

'ಟಿ.ವಿ ವಾಹಿನಿಯೊಂದರ ವರದಿಗಾರನ ಒತ್ತಾಯಕ್ಕೆ ಕೆಲವರ್ಷಗಳ ಹಿಂದೆ ನಮ್ಮ ಮೈದಾನದ ಪಕ್ಕದ ಪಾನಿಪುರಿ ಅಂಗಡಿ ಮುಂದೆ ಯಶಸ್ವಿ ಪಾನಿಪುರಿ ಮಾರಾಟ ಮಾಡುವಂತಹ ವಿಡಿಯೊ ಚಿತ್ರೀಕರಣ ಮಾಡಲಾಗಿತ್ತು. ಈಗ ಅದೇ ವಿಡಿಯೊ ಮತ್ತು ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದೆ' ಎಂದರು.

ಕದನಗಳ ಕಥೆ ಹೇಳುವ ದಿಫಾಲಿಪುಕುರಿ ಯುದ್ಧ ಸ್ಮಾರಕ

ಕೆ.ಆರ್. ಉಮಾದೇವಿ ಉರಾಳ

ಸುತ್ತಾಟ

ಅಸ್ಸಾಮಿನ ಗುವಾಹಟಿಯಲ್ಲಿರುವ 'ದಿಫಾಲಿಪುಕುರಿ ಯುದ್ಧ ಸ್ಮಾರಕ ಪಾರ್ಕ್' ಸೇನೆ ಮತ್ತು ಸೈನಿಕರ ಮಹತ್ವ, ಜೀವವನ್ನೇ ಪಣವಾಗಿಡುವ ಅವರ ತ್ಯಾಗ ಪರಿಶ್ರಮ ಕುರಿತು ಅರಿವು ಮೂಡಿಸುವ ತಾಣ. ಗುವಾಹಟಿ ನಗರದಲ್ಲಿ ಹೈಕೋರ್ಟ್ ಸಮೀಪದಲ್ಲಿ ದಿಫಾಲಿಪುಕುರಿ ಎಂಬ ವಿಶಾಲವಾದ ಸುಂದರ ಕೊಳ ಮತ್ತು ಅದೇ ಹೆಸರಿನ ಪಾರ್ಕ್‌ನ ಅಂಚಿನಲ್ಲಿ ಸೇನಾ ಸ್ಮಾರಕ ಇದೆ. ಈ ಯುದ್ಧ ಸ್ಮಾರಕದ ಪ್ರವೇಶ ದ್ವಾರದಲ್ಲಿ ಅಸ್ಸಾಮಿನ ಸಾಂಸ್ಕೃತಿಕ ಕ್ಷೇತ್ರದ ಅದ್ವಿತೀಯ ವ್ಯಕ್ತಿ, ಸಂಗೀತಲೋಕದ ಗಾರುಡಿಗ ಭಾರತ ರತ್ನ ಭೂಪೇನ್ ಹಜಾರಿಕಾ ಅವರ ಆಳೆತ್ತರದ ಪ್ರತಿಮೆ ಇದೆ. ಹಿನ್ನೆಲೆಯಲ್ಲಿ ಬಣ್ಣಬಣ್ಣದ ಹೂಗಿಡಗಳ ಹಸಿರು ಚಿಮ್ಮುವ ಪಾರ್ಕ್, ಅದರಾಚೆಯ ವಿಸ್ತಾರವಾದ ಕೊಳ, ಅದರ ಹಿನ್ನೆಲೆಯಲ್ಲಿನ ಬೆಟ್ಟ ಸಾಲುಗಳು ಸ್ಮಾರಕದ ಸೌಂದರ್ಯವನ್ನು ಹೆಚ್ಚಿಸಿವೆ.

ಸ್ಮಾರಕವನ್ನು ಪ್ರವೇಶಿಸುತ್ತಲೇ ಭೂಸೇನೆಯ 'ವಿಜಯಂತಾ' ಹೆಸರಿನ ಬೃಹತ್ ಟ್ಯಾಂಕ್ ಇದೆ. ಭಾರತದ ಮೊಟ್ಟಮೊದಲ ದೇಶೀಯ ಟ್ಯಾಂಕ್ ಅಂತೆ ಇದು. 1965ರ ಮತ್ತು 1971ರ ಯುದ್ಧಗಳಲ್ಲಿ ಬಳಕೆಯಾಗಿದ್ದು, 2008ರ ವರೆಗೂ ಕಾರ್ಯಪ್ರವೃತ್ತವಾಗಿತ್ತು. ಗುಡ್ಡಗಾಡುಗಳಲ್ಲೂ ಗಂಟೆಗೆ 50 ಕಿಲೊಮೀಟರ್ ಗರಿಷ್ಠ ವೇಗದಲ್ಲಿ ಚಲಿಸಬಲ್ಲ 39 ಸಾವಿರ ಕೆ.ಜಿ. ತೂಕದ ಈ ಟ್ಯಾಂಕ್ ಅನ್ನು ಭಾರತೀಯ ಭೂದಳವು ಗೊವಾಹಟಿಯ ಸ್ಮಾರಕಕ್ಕೆ ಕೊಡುಗೆಯಾಗಿ ನೀಡಿದೆ. ಇಂತಹ ಇನ್ನೂ ಹಲವು ವಾಯುದಳ, ಭೂದಳಗಳ ವಾಹನಗಳ ಕ್ಷಿಪಣಿಗಳ ಪ್ರತಿಕೃತಿಗಳು ಇಲ್ಲಿವೆ.

ಇವುಗಳನ್ನು ನೋಡುತ್ತಾ ಮೆಟ್ಟಿಲಿಳಿದು ಮುಂದೆ ಸಾಗಿದರೆ ವಿಶಾಲ ಪ್ರಾಂಗಣದಲ್ಲಿ 'ಅಮರ ಜವಾನ್' ಜ್ಯೋತಿ ಇದೆ. ಅಕ್ಕಪಕ್ಕಗಳಲ್ಲಿ ಸೈನಿಕರ ಆಳೆತ್ತರದ ಪ್ರತಿಮೆಗಳಿವೆ. 17ನೇ ಶತಮಾನದಲ್ಲಿ ಸರೈಘಾಟ್ ಯುದ್ಧದಲ್ಲಿ ಮೊಘಲರ ಸೇನೆ ಮುಂದೊತ್ತಿ ಬರುವುದನ್ನು ಪ್ರತಿಭಟಿಸಿದ್ದ ಅಸ್ಸಾಮಿನ ಅಹೋಂರ ಸೇನೆಯ ಶೌರ್ಯದ ಕಾದಾಟಗಳ ವಿವಿಧ ಉಬ್ಬುಚಿತ್ರಗಳ ಫಲಕಗಳಿವೆ. ನೆಲದಲ್ಲಲ್ಲದೆ ಜಲದಲ್ಲೂ ಮೊಘಲರನ್ನು ಎದುರಿಸಿದ್ದನ್ನು ಸೂಚಿಸಲು ನೌಕೆಯೊಂದರಲ್ಲಿ ಅಹೋಂ ಸೈನಿಕರು ಯುದ್ಧ ಮಗ್ನರಾಗಿರುವ ಕೆತ್ತನೆ ಇದೆ. ಅಸ್ಸಾಂ ಅನ್ನು ರಕ್ಷಿಸಿದ ಅಹೋಂ ವೀರರ ಪರಿಶ್ರಮವು ಮರೆವಿಗೆ ಸಂದು ಹೋಗದೆ ಆ ಕುರಿತ ಅರಿವುಂಟಾಗಲಿ ಎಂಬುದು ಈ ನಿರ್ಮಾಣದ ಉದ್ದೇಶ ಎಂಬುದು ಕೂಡ ಮೌಲ್ಯಗಳನ್ನು ಪರಂಪರೆಯಿಂದ ಪರಂಪರೆಗೆ ದಾಟಿಸುವ ಎಚ್ಚರವನ್ನು ಎತ್ತಿ ಹಿಡಿಯುತ್ತದೆ.

ವಿಜಯಂತ ಯುದ್ಧ ಟ್ಯಾಂಕ್

ಸೈನಿಕರ ಸ್ಮಾರಕದ ಮುಂದೆ ಸೆಲ್ಫಿ ತೆಗೆದುಕೊಳ್ಳುತ್ತಿರುವ ಪ್ರವಾಸಿಗರು.

ಅಸ್ಸಾಮಿಗೆ ಸಂಬಂಧಿಸಿದ ಈ ಯುದ್ಧ ಮಾತ್ರವೇ ಅಲ್ಲದೆ, ಕಾರ್ಗಿಲ್ ಯುದ್ಧ, 1962ರ ಭಾರತ ಚೀನಾ ಯುದ್ಧ, 1965 ಮತ್ತು 1971ರ ಯುದ್ಧಗಳ ಹಲವು ದೃಶ್ಯಗಳ ಉಬ್ಬುಚಿತ್ರ ಫಲಕಗಳು, ಮಾಹಿತಿ ಫಲಕಗಳು ಇವೆ.

1962ರ ಅಕ್ಟೋಬರ್ 28ರಂದು ಪಂಚಶೀಲ, ಹಿಂದಿ-ಚೀನೀ ಭಾಯಿ-ಭಾಯಿ ಆಶ್ವಾಸನೆಯ ಭ್ರಾತೃತ್ವವನ್ನೆಲ್ಲಾ ಗಾಳಿಗೆ ತೂರಿ ಮೆಕ್‌ಮೋಹನ್ ರೇಖೆ ಉಲ್ಲಂಘಿಸಿ ಚೀನಾ ಅತಿಕ್ರಮಿಸಿದಾಗ ಭಾರತಕ್ಕೆ ಇದು ಅನಿರೀಕ್ಷಿತವಾದ ದಾಳಿಯಾಗಿತ್ತು. ಶಸ್ತ್ರಾಸ್ತ್ರಗಳ ವಾಹನಗಳ ಸಂಚಾರಕ್ಕೆ ತಕ್ಕ ರಸ್ತೆಗಳಿರಲಿ; ಸೈನಿಕರಿಗೆ ಸೂಕ್ತ ಉಡುಗೆ-ತೊಡುಗೆ, ಆಹಾರದ ಸರಬರಾಜು ಕೂಡ ಇಲ್ಲದೆ, ತಮಗಿಂತ ಬಹು ಹೆಚ್ಚಿನ ಸಂಖ್ಯೆಯಲ್ಲಿದ್ದ ಚೀನಾ ಸೈನಿಕರನ್ನು ಎದುರಿಸಲಾಗದೆ ಭಾರತಿಯ ಸೈನಿಕರು ಬಸವಳಿದಿದ್ದರು. ಪರ್ವತದ ತಪ್ಪಲಿನ ಕಡಿದಾದ ಕೊರಕಲಿನ ಕಚ್ಚಾರಸ್ತೆಯಲ್ಲಿ ಸೇನಾ ವಾಹನವನ್ನು ಸೈನಿಕರು ದೈಹಿಕ ಪರಿಶ್ರಮದಿಂದ ಮುಂದೆ ತಳ್ಳಿ ಸಾಗಿಸಬೇಕಿದ್ದ ದೃಶ್ಯಗಳ ಚಿತ್ರ ಫಲಕಗಳು ಮನ ಕರಗಿಸುತ್ತವೆ.

1965ರ ಹದಿನೇಳು ದಿನಗಳ ಇಂಡೋ-ಪಾಕ್ ಯುದ್ಧದಲ್ಲಿ ಎರಡೂ ಕಡೆಯ ಸೈನಿಕರು ಗಾಯಾಳುಗಳಾದುದು, ಪ್ರಾಣ ತೆತ್ತಿರುವುದರ ಚಿತ್ರಣಗಳಿವೆ. ಅಜೇಯವೆನಿಸಿದ್ದ ಪಾಕಿಸ್ತಾನದ ಪೇಟನ್ ಟ್ಯಾಂಕ್‌ಗಳನ್ನು ಭಾರತೀಯ ಸೇನೆ ಧೂಳೀಪಟವಾಗಿಸಿದುದರ, ಸೇಬರ್ ಜೆಟ್‌ಗಳನ್ನು ವಾಯುದಳವು ನಿರ್ನಾಮ ಮಾಡಿದುದರ ಚಿತ್ರಣಗಳಿವೆ. 1971ರ ಯುದ್ಧದಲ್ಲಿ ಡಿಸೆಂಬರ್ 16 ರಂದು ಭಾರೀ ಸಂಖ್ಯೆಯ ಪಾಕಿಸ್ತಾನದ ಸೈನಿಕರ ಬೇಷರತ್ ಶರಣಾಗತಿಯನ್ನು ಎರಡನೇ ಮಹಾಯುದ್ಧದ ನಂತರ ಅತಿ ದೊಡ್ಡ ಶರಣಾಗತಿ ಎಂಬುದಾಗಿ ಇಲ್ಲಿ ದಾಖಲಿಸಿದ್ದಾರೆ. ಕಾರ್ಗಿಲ್ ಯುದ್ಧಕ್ಕೆ ಸಂಬಂಧಿಸಿದ ಹಲವು ಚೌಕಾಕೃತಿಯ ಉಬ್ಬುಚಿತ್ರಗಳ ಗೋಡೆ ಕೆತ್ತನೆಗಳಿವೆ. ಈ ಯುದ್ಧ ಸ್ಮಾರಕ ಬರಿಯ ಯುದ್ಧ ಸಂಬಂಧಿ ಕೆತ್ತನೆಗಳು, ಚಿತ್ರಗಳು, ಪ್ರತಿಮೆಗಳಿಂದಷ್ಟೇ ಕೂಡಿಲ್ಲ. ಅಲ್ಲಲ್ಲಿ ಕುಳಿತು ವಿಶ್ರಮಿಸಿಕೊಳ್ಳಲು, ಹಿನ್ನೆಲೆಯ ಕೊಳ ಉದ್ಯಾನವನ ಬೆಟ್ಟಸಾಲುಗಳ ಮನಮೋಹಕ ಸೌಂದರ್ಯ ಸವಿಯಬಹುದು.

ಪಾರ್ಕಿನ ಗೋಡೆಯಲ್ಲಿ ಮೂಡಿಬಂದಿರುವ ಉಬ್ಬುಚಿತ್ರ

ಇಲ್ಲಿ ಒಂದು ಸುತ್ತು ಹಾಕಿದ ಮೇಲೆ ಈ ಯುದ್ಧ ಸ್ಮಾರಕ ದೇಶಭಕ್ತಿ ಪ್ರೇರೇಪಿಸಲು ಯಶಸ್ವಿಯಾಗಿದೆ ಅನಿಸಿತು.

ನಮ್ಮೊಳಗಿನ ರಾಕ್ಷಸನನ್ನು ಹುಡುಕುವ 'ಅಟ್ಟಹಾಸ ಅಂಕಲ್'

ಸುಘೋಷ ಸ. ನಿಗಳೆ

ರಂಗಭೂಮಿ

ಪ್ರಸ್ತುತ ಸಾಂಸ್ಕೃತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಮಕ್ಕಳಿಗೆ ಪರ್ಯಾಯ ಭಾಗವಹಿಸುವಿಕೆ ಏನಿದೆ ಎಂಬ ಪ್ರಶ್ನೆ ಪೋಷಕರು, ಶಿಕ್ಷಕರು ಹಾಗೂ ಸಮಾಜ ವಿಜ್ಞಾನಿಗಳನ್ನು ಬಹುವಾಗಿ ಕಾಡುತ್ತಿದೆ. ಈಜು, ಕರಾಟೆ, ಕ್ರೀಡೆಯಂತಹ ಪಠ್ಯೇತರ ಚಟುವಟಿಕೆಗಳು ಕೂಡ ನಗರ-ಗ್ರಾಮವೆಂಬ ಭೇದವಿಲ್ಲದೆ ಸಾಂಸ್ಥೀಕರಣಗೊಂಡು ಮಕ್ಕಳಿಗೆ ಆತ್ಮತೃಪ್ತಿ ನೀಡದೆ ಕೇವಲ ಸುಸ್ತು ಮಾಡುತ್ತಿರುವ ಕಾಲಘಟ್ಟವಿದು. ದಶಕಗಳ ಹಿಂದೆ ಟಿವಿ ನೋಡಿದ್ದಕ್ಕಾಗಿ ಬೈಸಿಕೊಂಡ ಮಕ್ಕಳು, ಇಂದು ತಂದೆ-ತಾಯಿಯರಾಗಿ ತಮ್ಮ ಮಕ್ಕಳ ಮೊಬೈಲ್-ಟ್ಯಾಬ್-ರೀಲ್ಸ್ ಚಟ ಬಿಡಿಸುವುದರಲ್ಲಿ ಮಾತ್ರ ಸೋಲುತ್ತಿದ್ದಾರೆ.

ಇಂತಹ ಸಾಮಾಜಿಕ-ಸಾಂಸ್ಕೃತಿಕ ತಲ್ಲಣಗಳನ್ನೇ ಮಕ್ಕಳ ಮುಂದೆ ಎಳೆಎಳೆಯಾಗಿ ಬಿಚ್ಚಿಟ್ಟರೆ ಹೇಗಿರುತ್ತದೆ? ಮಕ್ಕಳಿಗೆ ಪರಂಪರೆ ಮತ್ತು ಆಧುನಿಕತೆ ಎರಡನ್ನೂ ಮುಂದಿಟ್ಟರೆ ಮಕ್ಕಳು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ? ಮಕ್ಕಳೊಡನೆ ಸಂವಾದ ನಡೆಸುತ್ತಲೇ 'ಅಟ್ಟಹಾಸ ಅಂಕಲ್' ಬೇಕಾ ಅಥವಾ 'ರೊಬೋಟ್' ಬೇಕಾ ಎಂಬ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದು ಸಂಚಾರಿ ಥಿಯೇಟರ್ ತಂಡದ ಮಕ್ಕಳು ಪ್ರಸ್ತುತ ಪಡಿಸಿದ ನಾಟಕ 'ಮಿಸ್ಟರ್ ಅಟ್ಟಹಾಸ ಅಂಕಲ್' ಮೂಲಕ.

'ಅಟ್ಟಹಾಸ ಅಂಕಲ್', ಸಾಹಿತಿ ಚಂದ್ರಶೇಖರ ಕಂಬಾರರ ಜನಪದ ಕತೆಗಳ ರಾಕ್ಷಸ ಎಂಬ ಕವನದಿಂದ ಸ್ಫೂರ್ತಿ ಪಡೆದು ರೂಪುಗೊಂಡ ನಾಟಕ. ನಿರ್ದೇಶಕ ಧನುಷ್, ಈ ಕವನವನ್ನಿಟ್ಟುಕೊಂಡು 'ಬಾಲರಂಗ'ದ ಶಿಬಿರದ ಮಕ್ಕಳೊಡನೆ ಸಂವಾದ ನಡೆಸುತ್ತ, ಮಕ್ಕಳ ಪ್ರಸ್ತುತ ಸವಾಲುಗಳು, ಬಿಕ್ಕಟ್ಟುಗಳು, ಮಾನಸಿಕತೆ, ಯೋಚನಾಶೈಲಿ, ಅಭಿಪ್ರಾಯಗಳನ್ನೆಲ್ಲ ಒಗ್ಗೂಡಿಸುತ್ತ, ಸೋಸುತ್ತ 'ಮಿಸ್ಟರ್ ಅಟ್ಟಹಾಸ ಅಂಕಲ್' ರೂಪಿಸಿದ್ದಾರೆ. ಈ ನಾಟಕದಲ್ಲಿ ಬರುವ 'ರೊಬೋಟ್', ಈಗಿನ ಮಕ್ಕಳ ಬದುಕಿನ ಅವಿಭಾಜ್ಯ ಅಂಗವೇ ಆಗಿರುವ ಮೊಬೈಲ್, ಟ್ಯಾಬ್, ಗೇಮಿಂಗ್, ರೀಲ್ಸ್ ಮುಂತಾದವುಗಳನ್ನು ಪ್ರತಿನಿಧಿಸಿದರೆ, 'ಅಟ್ಟಹಾಸ ಅಂಕಲ್' ನಮ್ಮ ಪರಂಪರೆಯ ಪಳಿಯುಳಿಕೆಯಾಗಿ ಕಾಣಿಸಿಕೊಳ್ಳುತ್ತಾನೆ. ಅಟ್ಟಹಾಸನ ಹೆಸರು ಅಟ್ಟಹಾಸ ಎಂದಿದ್ದರೂ, ಆತ ಎಂದಿಗೂ ಅಟ್ಟಹಾಸ ಮೆರೆದವನಲ್ಲ. ಥೇಟ್ ನಮ್ಮ ಜನಪದ ಕಥೆಗಳಲ್ಲಿ ಬರುವ ರಾಕ್ಷಸನಂತೆ ರಾಜಕುಮಾರಿಯನ್ನು ಅಪಹರಿಸಿಕೊಂಡು ಬಂದು, ರಾಜಕುಮಾರ ಆಕೆಯನ್ನು ಹುಡುಕಿಕೊಂಡು ಬರುವಂತೆ ಮಾಡಿ, ಆತನೊಡನೆ ಹೋರಾಡಿ, ಕೊಲ್ಲಲ್ಪಟ್ಟು, ಪರೋಕ್ಷವಾಗಿ ಅವರ ಮಿಲನಕ್ಕೆ ಕಾರಣನಾಗುವ ನಿಸ್ವಾರ್ಥಿ!

'ಮಿಸ್ಟರ್ ಅಟ್ಟಹಾಸ ಅಂಕಲ್' ನಾಟಕದಲ್ಲಿ ಒಂದು ಹಂತದಲ್ಲಿ ರೊಬೋಟ್ ನಿರ್ದಯವಾಗಿ ಅಟ್ಟಹಾಸನ್ನು ಸೋಲಿಸಿ, ಪಕ್ಕೆಲಬು ಮುರಿದುಬಿಡುತ್ತದೆ. ಇದೇ ವೇಳೆ, ಮಕ್ಕಳ ತಂದೆ-ತಾಯಂದಿರು ನಗರದ ಹುಚ್ಚಿಗೆ ಬಿದ್ದು ತಮ್ಮ ಹೊಲ, ಮನೆ, ಜಾನುವಾರುಗಳನ್ನೆಲ್ಲ ರಿಯಲ್ ಎಸ್ಟೇಟ್ ಗುಜ್ಜಿಗೆ ಮಾರಲು ನಿರ್ಧರಿಸಿ ನಗರದ ಬದುಕಿನ ಬಣ್ಣಬಣ್ಣದ ಕನಸು ಕಾಣಲು ಆರಂಭಿಸುತ್ತಾರೆ. ಆಗ ಮಕ್ಕಳೆಲ್ಲ ಸೇರಿ ಹಳ್ಳಿಯ ಕಾಡಿನೊಳಕ್ಕೆ ಹೊಕ್ಕು ಅಟ್ಟು ಅಂಕಲ್‌ನನ್ನು ಮತ್ತೆ ಕರೆತರುತ್ತಾರೆ. ಅಟ್ಟು ಅಂಕಲ್ ಹಾಗೂ ರೊಬೋಟ್‌ಗೆ ಮತ್ತೊಮ್ಮೆ ಭಯಂಕರ ಯುದ್ಧವಾಗುತ್ತದೆ. ಪರಂಪರೆಯನ್ನು ಪ್ರತಿನಿಧಿಸುವ ಅಟ್ಟು ಅಂಕಲ್, ಯಾಂತ್ರಿಕತೆಯ ಪ್ರತೀಕವಾಗಿರುವ ರೊಬೋಟ್‌ನನ್ನು ಕೊಂದುಬಿಡುತ್ತಾನಾ ಅಥವಾ ಯಾರನ್ನಾದರೂ ಕೊಲ್ಲುವಷ್ಟು ಕ್ರೂರಿಯಾ ನಮ್ಮ ಮುದ್ದು ಜನಪದ ರಾಕ್ಷಸ?

ಈ ಸಂದಿಗ್ಧಕ್ಕೆ ನಿರ್ದೇಶಕ ಧನುಷ್ ನಾಗ್ ಕೂಡ ಸಿಕ್ಕಿಹಾಕಿಕೊಂಡು ಮಕ್ಕಳ ಬಳಿಯಿಂದಲೇ ಉತ್ತರ ತೆಗೆಸುವ ಪ್ರಯತ್ನ ಮಾಡಿದ್ದಾರೆ. ಧನುಷ್, ಬೊಂಬೆಯಾಟದ ಆಯಾಮಗಳನ್ನೂ ನಾಟಕದಲ್ಲಿ ಅಳವಡಿಸಿದ್ದಾರೆ. ನಾಟಕ ಆರಂಭವಾಗುತ್ತಲೇ ಯುವಿಲೈಟ್ ನ ಪ್ರತಿಫಲನದಲ್ಲಿ ಕಾಣುವ ಅಟ್ಟಹಾಸ ಅಂಕಲ್ ಎಂಬ ನಾಟಕದ ಅಕ್ಷರಗಳು ಹಾಗೂ ಸೈಡ್‌ವಿಂಗ್‌ನಿಂದ ಬರುವ ಅಟ್ಟಹಾಸ ಅಂಕಲ್ ನ ಆಳೆತ್ತರದ ಬೊಂಬೆ ಗಮನ ಸೆಳೆಯುತ್ತದೆ. ಹಾಗೆಯೇ, ಸೈಡ್‌ವಿಂಗ್‌ನಿಂದ ರೆಕ್ಕೆಗಳನ್ನು ಪಟಪಟನೆ ಬಡಿಯುತ್ತ ಬರುವ (ಬೊಂಬೆಯೊಂದು) ದೊಡ್ಡಹಕ್ಕಿಯೊಂದು, ಗಂಪು ಅಜ್ಜಿಯ ರೂಪ ತಾಳುವುದು, ಆ ಅಜ್ಜಿ ಮಕ್ಕಳಿಗೆ ಮಾತ್ರ ಕಾಣುವುದು, ಮತ್ತೆ ಹಕ್ಕಿಯಾಗಿ ಸೈಡ್ ವಿಂಗ್‌ಗೆ ಹೋಗುವುದು ವಿಶೇಷವಾಗಿದೆ.

ನಾಟಕದ ದೃಶ್ಯ

ಮಕಾಶಿಪೋ ನಾಶಿಪೋ,
ದಾರಾಶಿತೋ ಮಾನಿತೋ
ಬಗಾರಿಸೋ ನಾಟಾವೋ
ದಾರಾಪೋಚಾರಿತೋ ದಾರಾಪೋಚಾರಿತೋ
ದಾರಾಪೋಚಾರಿತೋ
ಪುಟ್ರಿ ಪೋರಿ ಪೋಣಾಚಾ, ಗುಚ್ಚಿ ಮುಚ್ಚಿ ಗುಂಜಾಕಾ,
ಕಾಗೆ ಮೂತಿ ಜಂಜಾಚಾ
ದಾರಾಪೋಚಾರಿತೋ ದಾರಾಪೋಚಾರಿತೋ
ದಾರಾಪೋಚಾರಿತು-ನಂತಹ ಹಾಡುಗಳು, ಹಾಸ್ಯ, ಚೇಷ್ಟೆ, ನಗರದ ಸೋಗಲಾಡಿ ಬದುಕಿನ ಕಾಲೆಳೆಯುವಿಕೆ, ಮಕ್ಕಳ ವೇಷಭೂಷಣ ಎಲ್ಲವೂ ನಾಟಕದ ಸ್ವಾದವನ್ನು ಹೆಚ್ಚಿಸಿವೆ.

ಗಂಪು ಅಜ್ಜಿ (ವಿಸ್ಮಯ), ರೊಬೋಟ್ (ಶಾರಿಣಿ ಸಿ. ವಿ), ಅಟ್ಟಹಾಸ ಅಂಕಲ್ (ಉದಾತ್ತ), ಗ್ರಾಮಸ್ಥರಾಗಿ (ಆದಿತ್ಯ ನಂದನ್, ಶಮಿತಾ, ವೈನವಿ ಸಾಯಿ ದುರ್ಗ), ರಿಯಲ್ ಎಸ್ಟೇಟ್ ಗುಜ್ಜಿ (ಸಮರ್ಥ್ ಅಭಿಷೇಕ್) ಅಚ್ಚುಕಟ್ಟಾಗಿ ತಮ್ಮ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಮಕ್ಕಳು ಅಟ್ಟಹಾಸ ಅಂಕಲ್ ಮೂಲಕ ನಮ್ಮೊಳಗಿನ ನಿಜವಾದ ರಾಕ್ಷಸನನ್ನು ಹುಡುಕುವ ಸೈದ್ಧಾಂತಿಕ ಪ್ರಶ್ನೆಯನ್ನೂ ಜವಾಬ್ದಾರಿಯನ್ನೂ ನಮ್ಮ ಮುಂದಿಟ್ಟಿದ್ದಾರೆ.

ಕಣಿವೆ ಹಾದಿಯಲ್ಲಿ...

12ನೇ ಪುಟದಿಂದ...

ಪರಭಕ್ಷಕಗಳ ಕಣ್ಣಿಗೆ ಕಾಣಸಿಗದಂತೆ ಮೊಟ್ಟೆಗಳನ್ನು ರಕ್ಷಿಸಲು ಹೊರಮೈಗೆ ಮಣ್ಣು ಸವರುತ್ತದೆ. ಹೀಗೆ ಪ್ಯಾಕಿಂಗ್ ಮಾಡುವ ಕಾರಣಕ್ಕೆ ಅದಕ್ಕೆ 'ಕುಂಬಾರ' ಎಂಬ ಹೆಸರು ಬಂದಿದೆ. ಇದಕ್ಕೆ 'ಕುಂಬಾರ' ಎಂದು ಹೆಸರಿಟ್ಟವರು ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಹೈಯರ್ ಎಜುಕೇಶನ್ (ಮಾಹೆ) ಅಧ್ಯಾಪಕ ಕೆ.ವಿ.ಗುರುರಾಜ್ ಹಾಗೂ ತಂಡ ಎಂದು ಗಿರೀಶ್ ವಿವರಿಸುತ್ತಾರೆ.

'ಅತ್ಯಂತ ಸೂಕ್ಷ್ಮ ಸ್ವಭಾವದ ಈ ಕುಂಬಾರ ಕಪ್ಪೆಗಳು ತಮ್ಮ ಆವಾಸಸ್ಥಾನದಲ್ಲಿನ ಸಣ್ಣ ಬದಲಾವಣೆಯನ್ನೂ ಒಪ್ಪಿಕೊಳ್ಳುವುದಿಲ್ಲ. ಹೀಗಾಗಿಯೇ ಅವು ಜನವಸತಿ ಬಳಿ ಕಾಣಸಿಗುವುದಿಲ್ಲ. ಸಂಶೋಧನೆಯ ಆರಂಭಿಕ ದಿನಗಳಲ್ಲಿ ಮಲೆನಾಡು ಪ್ರದೇಶದಲ್ಲಿ ಈ ನಿಶಾಚರಿಗಳ ಬಗ್ಗೆ ಮಾಹಿತಿ ಇರಲಿಲ್ಲ. ಕುಂಬಾರ ಕಪ್ಪೆಗಳ ಸಂಖ್ಯೆ, ಆವಾಸಸ್ಥಾನ ಮತ್ತು ಇತರ ಅಂಶಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದಾಗ, ನಾವು ಇಲ್ಲಿ ಇನ್ನಷ್ಟು ಇರುಳು ಕಪ್ಪೆಗಳ ಬಗ್ಗೆ ತಿಳಿದುಕೊಂಡಿದ್ದೇವೆ' ಎಂದು ಹೇಳುತ್ತಾರೆ.

ಗಿರೀಶ, ವರ್ಷಗಳ ಕಾಲ ಕಪ್ಪೆಗಳ ಪರಿಸರ ಅಧ್ಯಯನದ ಕಠಿಣ ಕಾರ್ಯ ಕೈಗೊಂಡಿದ್ದಾರೆ. ಇದು ನಿರ್ದಿಷ್ಟ ತೊರೆಗಳಲ್ಲಿನ ಕಪ್ಪೆಗಳ ಸಂಖ್ಯೆ, ಕಪ್ಪೆಯ ಜೀವನ ಚಕ್ರದ ಮೇಲೆ ಪರಿಣಾಮ ಬೀರುವ ಅಂಶಗಳು, ತಾಪಮಾನ ಹೆಚ್ಚಳ, ನೀರಿನ ಅಲಭ್ಯತೆಯಿಂದಾಗಿ ಆವಾಸಸ್ಥಾನಕ್ಕೆ ಆಗಿರುವ ತೊಂದರೆಯ ಮಾಹಿತಿ, ಸೂಕ್ಷ್ಮ ಪ್ರದೇಶಗಳಲ್ಲಿ ಕೈಗೊಳ್ಳಲು ಮುಂದಾಗುವ ಯಾವುದೇ ವ್ಯತಿರಿಕ್ತ ಅಭಿವೃದ್ಧಿ ಕಾರ್ಯಗಳನ್ನು ತಡೆಯಲು ಬಹಳ ಮುಖ್ಯವಾಗಿವೆ.

'ವನ್ಯಜೀವಿ ಅಂದರೆ ಹುಲಿ, ಸಿಂಹ, ಆನೆಗಳ ಬಗ್ಗೆ ಮಾತಾಡುತ್ತೇವೆ. ಆದರೆ ನಿಸರ್ಗದ ಜೀವ ಚಕ್ರದಲ್ಲಿ ಮುಂಚೂಣಿ ಪಾತ್ರ ವಹಿಸುವ ಕಪ್ಪೆಗಳ ಬಗ್ಗೆ ನಾವ್ಯಾರೂ ಮಾತಾಡೊಲ್ಲ. ದಶಕದ ಹಿಂದಷ್ಟೇ ನೆಲಕ್ಕೆ ಮಳೆ ಹುಯ್ಯುತ್ತಿದ್ದಂತೆಯೇ ಮುಗಿಲಿಗೆ ಮುಖ ಮಾಡಿ ವಟಗುಡುವ ಕಪ್ಪೆಗಳ ಮೇಳ ಮನೆಯ ಪರಿಸರದಲ್ಲಿ ಕಾಣಸಿಗುತ್ತಿತ್ತು. ಆದರೆ ಅವು ಈಚೆಗೆ ಅಪರೂಪದ ಅತಿಥಿ' ಆಗಿವೆ' ಎನ್ನುತ್ತಾರೆ ಗಿರೀಶ.

ಪರಿಸರ ಸಂರಕ್ಷಣೆಗೆ ಮಕ್ಕಳ ಸಹಯೋಗ ಪರಿಣಾಮಕಾರಿ ಎಂದು ನಂಬಿರುವ ಗಿರೀಶ, ನಮ್ಮ ಸುತ್ತಲಿನ ಜೀವವೈವಿಧ್ಯದ ಪ್ರಾಮುಖ್ಯತೆ ಅರ್ಥ ಮಾಡಿಕೊಳ್ಳದೇ ಯಾವುದೇ ಸಂರಕ್ಷಣಾ ಪ್ರಯತ್ನ ನಿರರ್ಥಕ ಎಂದು ನಂಬುತ್ತಾರೆ. ತಮ್ಮ 'ಪ್ರಾಣ' (ಪಂಚವಟಿ ರಿಸರ್ಚ್ ಅಕಾಡೆಮಿ ಫಾರ್ ನೇಚರ್) ಹೆಸರಿನ ಸಂಸ್ಥೆಯ ಮೂಲಕ ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಕಾಡಿಗೆ ಕರೆದೊಯ್ದು ಸಸ್ಯ, ಪ್ರಾಣಿ ಮತ್ತು ಮಾನವರ ನಡುವಿನ ಪರಸ್ಪರ ಸಂಬಂಧದ ಪರಿಚಯ ಮಾಡಿಕೊಡುವುದು ಅವರ ನೆಚ್ಚಿನ ಹವ್ಯಾಸ.

'ಹೊಸನಗರ ಬಳಿಯ ಕಣಿವೆಬಾಗಿಲಿನ ನನ್ನ ಅಜ್ಜನ ಮನೆಯಿಂದ ಕೇವಲ 300 ಮೀಟರ್ ದೂರದಲ್ಲಿ ತೊರೆ ಹರಿಯುತ್ತದೆ. ಅಲ್ಲಿ ಕಪ್ಪೆಗಳಿದ್ದರೂ, ಅವುಗಳತ್ತ ಆಸಕ್ತಿ ಇರಲಿಲ್ಲ. ಗಿರೀಶ ಸಂಶೋಧನೆಗಾಗಿ ಅಲ್ಲಿಗೆ ಬಂದಾಗ ಮನೆಯ ಹಿತ್ತಲಿನಲ್ಲಿದ್ದ ಉಭಯಚರಗಳ ಅದ್ಭುತ ಪ್ರಪಂಚದ ಬಗ್ಗೆ ತಿಳಿದುಕೊಂಡೆ. ಅವರು ನನ್ನಲ್ಲಿ ಕುತೂಹಲದ ಬೀಜ ಬಿತ್ತಿದರು. ಈಗಲೂ ನಾನು ಎಲ್ಲಿಯೇ ನೀರಿನ ಸೆಲೆ ಕಂಡರೂ ಅಲ್ಲಿ ಕಪ್ಪೆಗಳ ಹುಡುಕುತ್ತೇನೆ' ಎಂದು ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಜಿಯೊಸ್ಪೇಶಿಯಲ್ ಮ್ಯಾನೇಜರ್ ಎಸ್. ಭುವನಮಿತ್ರ ಹೇಳುತ್ತಾರೆ.

ಗಿರೀಶ ಅವರು ವಿದ್ಯಾರ್ಥಿಗಳನ ಮೇಲೆ ತಮ್ಮ ದೃಷ್ಟಿ ನೆಟ್ಟಿದ್ದು, ಕಾಡು, ಪ್ರಾಣಿ, ಪಕ್ಷಿ, ಸಸ್ಯಗಳ ಬಗೆಗೆ ಕುತೂಹಲ ಮತ್ತು ಸಂಶೋಧನೆಗೆ ಬಿತ್ತಿದ್ದ ಬೀಜದಂತಿದೆ.

ಗಿರೀಶ್‌ಜೆನ್ನಿ

ಮುನ್ನೋಟ 3-03-2024 ರಿಂದ -09-03-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವೇದಾಂತದ ಬಗ್ಗೆ ಹೆಚ್ಚು ಆಸಕ್ತಿ ಮೂಡಿ ಹಿರಿಯ ವಿದ್ವಾಂಸರುಗಳನ್ನು ಭೇಟಿ ಮಾಡಿ ಪ್ರಯತ್ನ ಪಡುವಿರಿ. ಆದಾಯವು ಉತ್ತಮವಾಗಿದ್ದರೂ ತಲುಪುವುದು ನಿಧಾನವಾಗಬಹುದು. ತಾಯಿಯಿಂದ ಸಿಗುವ ಸೌಲಭ್ಯ ಕಡಿಮೆಯಾಗುವುದು. ನಿಮ್ಮ ಮಕ್ಕಳಿಗಾಗಿ ಹೆಚ್ಚು ಹಣ ಖರ್ಚಾಗುವುದು. ವಿದ್ಯಾರ್ಥಿಗಳಿಗೆ ಅವರ ನಿರೀಕ್ಷೆಯ ಫಲಿತಾಂಶ ದೊರೆಯುವುದು ಕಡಿಮೆ.

ವೃಷಭರಾಶಿ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2
ದೃಢ ನಿರ್ಧಾರಗಳಿಂದ ನಿಮ್ಮ ಕೆಲಸಗಳನ್ನುಆ ಯೋ ೀ ಜಿ ಸು ವಿ ರಿ . ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರಬರುತ್ತದೆ. ನಿಮ್ಮ ಕೆಲವು ಕೆಲಸಗಳಿಗೆ ಸೋದರಿಯರಿಂದ ಅಡ್ಡಿಬರಬಹುದು. ಕೃಷಿ ಮಾಡುವುದರಲ್ಲಿ ಹೆಚ್ಚು ಆಸಕ್ತಿ ತಳೆಯುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಹಳ ವರ್ಣರಂಜಿತವಾಗಿ ಮಾತನಾಡುವಿರಿ. ಹೀಗಾಗಿ ಹೆಚ್ಚು ಜನರು ನಿಮ್ಮತ್ತ ಆಕರ್ಷಣೆಗೊಳ್ಳುತ್ತಾರೆ. ಆದಾಯವು ಮಂದಗತಿಯಲ್ಲಿರುತ್ತದೆ. ನಿಮ್ಮೆಲ್ಲಾ ಕೆಲಸಕಾರ್ಯಗಳ ಮೇಲೆ ಹಿರಿಯರಿಂದ ಸ್ವಲ್ಪ ಒತ್ತಡ ಹೇರಬಹುದು. ಆಸ್ತಿ ವಿಚಾರದಲ್ಲಿ ಮುಂದುವರೆಯುವುದು ಬೇಡ. ಮಕ್ಕಳು ನಿಮ್ಮ ಮಾತಿಗೆ ಗೌರವ ನೀಡದಿರಬಹುದು. ಸಂಗಾತಿಯಿಂದ ನಿಮಗೆ ಆರ್ಥಿಕ ಸಹಾಯ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆಲಸೀತನವನ್ನು ಬದಿಗೊತ್ತಿ ಕೆಲಸ ಕಾರ್ಯ ಆರಂಭಿಸುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಸಹಾಯಧನಗಳು ಈಗ ಬರುತ್ತವೆ. ನಿಮ್ಮ ಮೌನವನ್ನು ಜನರು ದುರುಪಯೋಗ ಮಾಡಿಕೊಳ್ಳಬಹುದು. ಸಂಸಾರದಲ್ಲಿ ಸುಖವಿದ್ದರೂ ಸಂಗಾತಿಯಿಂದ ಕೆಲವು ಕಿರಿಕಿರಿಗಳು ಆಗಬಹುದು. ಆಸ್ತಿಕೊಳ್ಳಲು ಹಣವನ್ನು ಈಗ ಒಟ್ಟು ಮಾಡಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕೆಲಸ ಕಾರ್ಯಗಳನ್ನು ದ್ವಂದ್ವ ಮನಸ್ಸಿನಿಂದ ಆರಂಭಿಸಬೇಡಿರಿ. ಇದರಿಂದ ಕೆಲಸ ಕಾರ್ಯಗಳಲ್ಲಿ ಪ್ರಗತಿಯಾಗುವುದಿಲ್ಲ. ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ನಿಮ್ಮ ನಡವಳಿಕೆಯಿಂದ ಆದಾಯ ನಷ್ಟವಾಗುವ ಸಂದರ್ಭವಿದೆ. ಸ್ಥಿರಾಸ್ತಿಯನ್ನು ಕೊಳ್ಳುವ ವಿಚಾರದಲ್ಲಿ ಮುಂದುವರೆಯಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಅತಿಯಾಗಿ ದೇವರ ಮೊರೆ ಹೋಗುವಿರಿ. ನಿಮ್ಮ ನಡವಳಿಕೆಯಲ್ಲಿ ಹೆಚ್ಚು ನಾಟಕವಿರುವುದು ಜನರಿಗೆ ತಿಳಿಯುತ್ತದೆ. ನಿಮ್ಮ ಕೆಲಸಗಳಿಗೆ ಸ್ತ್ರೀಯರು ಅಡ್ಡಿಪಡಿಸಬಹುದು. ಆಸ್ತಿಕೊಳ್ಳಲು ಇಟ್ಟ ದುಡ್ಡು ಬೇರೆ ಕಾರಣಗಳಿಗಾಗಿ ಖರ್ಚಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯತ್ನದಲ್ಲಿ ಅರ್ಧ ಫಲಿತಾಂಶ ದೊರೆಯುತ್ತದೆ. ಸಂಗಾತಿಯ ನಡವಳಿಕೆ ನಿಮಗೆ ಸ್ವಲ್ಪ ಬೇಸರತರಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮದೇ ಆದ ಕಾರಣಗಳಿಗಾಗಿ ದೇವರ ಮೊರೆ ಹೋಗುವಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮ ನಡವಳಿಕೆಯನ್ನು ಬದಲಾಯಿಸಿಕೊಂಡು ಜನರ ಬೆಂಬಲ ಪಡೆಯಲು ಯತ್ನಿಸುವಿರಿ. ಆಸ್ತಿಯನ್ನು ಕೊಳ್ಳಲು ಹಣ ಒಟ್ಟು ಮಾಡಬ ಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ನಿಮ್ಮ ಮಕ್ಕಳಿಗಾಗಿ ಹಣವನ್ನು ಖರ್ಚು ಮಾಡಬೇಕಾದ ಪರಿಸ್ಥಿತಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾರದ ಆರಂಭ ಆನಂದದಾಯಕವಾಗಿರುತ್ತದೆ. ಆದಾಯವು ನಿರೀಕ್ಷಿತ ಪ್ರಮಾಣದಲ್ಲಿ ಇರುವುದಿಲ್ಲ. ನಿಮ್ಮ ಚಟುವಟಿಕೆಗಳಿಗೆ ಬಂಧುಗಳಲ್ಲಿನ ಸ್ತ್ರೀಯರು ಅಡ್ಡಿಮಾಡುವ ಸಾಧ್ಯತೆ ಇದೆ. ಸ್ತಿರಾಸ್ತಿಯನ್ನು ಮಾಡುವ ವಿಚಾರದಲ್ಲಿ ಹೆಚ್ಚು ಮುಂದುವರೆಯುವುದು ಬೇಡ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಆಟೋಮೊಬೈಲ್ ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ವ್ಯಕ್ತಿತ್ವದಲ್ಲಿ ಒಂದು ರೀತಿಯ ಗಾಂಭೀರ್ಯತೆ ಇರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಮೃದುವಾಗಿ ಮಾತನಾಡಿದರೂ ನೀವು ತಿಳಿಸಬೇಕಾದ ಅಂಶವನ್ನು ಸರಿಯಾಗಿ ತಿಳಿಸುವಿರಿ. ಬಂಧುಗಳು ನಿಮ್ಮ ಬಗ್ಗೆ ಅಸೂಯೆಯಿಂದ ಮಾತನಾಡುವರು. ವಿದೇಶದಲ್ಲಿ ವಾಸಿಸುತ್ತಿರುವವರು ಈಗ ಸ್ಥಿರಾಸ್ತಿಯನ್ನು ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಬಹಳ ಹೆಚ್ಚಿನ ಯಶಸ್ಸು ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಆದಾಯವು ಚೇತರಿಕೆಯಾಗಿ ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ನಿಮ್ಮ ವಿರೋಧಿ ಬಂಧುಗಳು ನಿಮ್ಮ ನಡವಳಿಕೆಗಳನ್ನು ಅರ್ಥಮಾಡಿ ಕೊಳ್ಳಲಾಗದೆ ಒದ್ದಾಡುವರು. ಭೂಮಿ ವ್ಯಾಪಾರವನ್ನು ಮಾಡುವವರಿಗೆ ಸಾಕಷ್ಟು ಲಾಭವಿರುತ್ತದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ಬರಲಾರದೆಂದುಕೊಂಡಿದ್ದ ಹಣ ಈಗ ವಾಪಸ್ಸು ಬಂದು ಸಂತೋಷವಾಗುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯವಾದ ಯಶಸ್ವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರು ಅವರ ಧೀಮಂತ ವ್ಯಕ್ತಿತ್ವದಿಂದ ಪ್ರಕಾಶಿಸುವರು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ವಯಸ್ಕರು ಮಾತನಾಡುವಾಗ ಬಹಳ ಎಚ್ಚರಿಕೆಯಿಂದ ಮಾತನಾಡುವುದು ಒಳ್ಳೆಯದು. ಕೆಲವು ಹಿರಿಯರಿಗೆ ಉತ್ತಮ ವಿದ್ವಾಂಸರ ಸಾಂಗತ್ಯ ದೊರೆಯುವ ಸಾಧ್ಯತೆಗಳಿವೆ. ಭೂಮಿಯ ಮೇಲೆ ಹೂಡಿಕೆ ಮಾಡುವುದು ಸದ್ಯದ ಪರಿಸ್ಥಿತಿಯಲ್ಲಿ ಲಾಭಕರವಲ್ಲ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ವ್ಯಕ್ತಿತ್ವದಲ್ಲಿ ನಿಗೂಢತೆ ಅಡಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಸ್ಥಿರಾಸ್ತಿಯ ಮೇಲೆ ಹೂಡಿದ ಹಣ ಮೋಸವಾಗುವ ಸಾಧ್ಯತೆಗಳಿವೆ, ಎಚ್ಚರವಹಿಸಿ. ವಿದ್ಯಾರ್ಥಿಗಳಿಗೆ ಸಾಮಾನ್ಯ ಯಶಸ್ಸು ಇರುತ್ತದೆ. ಕೃಷಿ ಅಥವಾ ಪಶು ಸಂಗೋಪನೆಯನ್ನು ಅಭ್ಯಾಸ ಮಾಡುತ್ತಿರುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಸರ್ಕಾರಿ ಕೆಲಸಗಳಲ್ಲಿ ನಿಧಾನ ಗತಿ ಇರುತ್ತದೆ. ನಿಮ್ಮ ಮಕ್ಕಳ ಅವಶ್ಯಕತೆ ಪೂರೈಸಲು ಹಣ ಖರ್ಚಾಗುತ್ತದೆ. ಸಂಗಾತಿಯ ಸಾಂಪ್ರದಾಯಿಕತೆ ನಿಮಗೆ ಬೇಸರತರಿಸುತ್ತದೆ.

ಪದಬಂಧ 2831



ಮೇಲಿನಿಂದ ಕೆಳಕ್ಕೆ

1. ಜೀವನವೆಂಬ ವೇದಿಕೆಯಲ್ಲಿ ನಮ್ಮ ರಂಗ ಪ್ರದರ್ಶನ 3
2. ತಲೆಕೆಳಗಾದ ರಮೆಯ ಪತಿ 3
3. ಮತ್ತೆ ಮರುಕಳಿಸುವ ಸ್ಮೃತಿ 3
5. ದಿಬ್ಬದ ಮೇಲೆ ಮದುವೆ ಮೆರವಣಿಗೆ 3
7. ಸುಲಭ ಸರಳ ಗತಿಯಲ್ಲಿ ಸಾಗುವಂತದ್ದು 3
9. ಕಾವ್ಯ ಸೃಷ್ಟಿಸುವವನ ಊಹೆ 5
10. ನಿಧಾನವಾಗಿ ಮಾತನಾಡುತ್ತಾ ಮದುವೆಯಾಗು 5
11. ಕ್ಷಣಕ್ಷಣಕ್ಕೂ ಕುತೂಹಲವನ್ನು ಹುಟ್ಟಿಸುವಂತದ್ದು 3
12. ತಲೆಯಂತಹ ಅವಯವವನ್ನು ತಗ್ಗಿಸಿ ನಿಂತವ 3
16. ವಿರಮಿಸು ಎಂದಾಗ ಮುದ್ದಾಡಿ ಸಂತೋಷಗೊಳಿಸು 3
17. ಚೆಲುವಾದ ರೂಪವುಳ್ಳವಳು 3
19. ಆಂಗ್ಲ ಹಣವುಳ್ಳ ಫಿಲಿಪೈನ್ಸ್ ನಗರ 3
20. ಸವಾರಿಗೆ ಬೇಕಾಗುವ ಗಾಡಿ 3
21. ಋತುಗಳ ರಾಜ ಈ ಸಂತ 3

ಎಡದಿಂದ ಬಲಕ್ಕೆ

1. ಹಾವನ್ನೇ ಆಭರಣವಾಗಿ ಧರಿಸಿದವ 5
3. ಬೆಳಕು ಛಾಯೆಗಳ ನಡುವೆ ನಡೆಯುವ ಕ್ರೀಡೆ 4
4. ಮಧ್ಯಪ್ರದೇಶದಲ್ಲಿ ಹುಟ್ಟಿ ಒರಿಸ್ಸಾದಲ್ಲಿ ಹರಿಯುವ ದೊಡ್ಡ ಹೊಳೆ 4
6. ಸದಾ ಸ್ವಪ್ನಲೋಕದಲ್ಲಿ ವಿಹರಿಸುವವ 5
8. ಮೈ ಝುಂ ಎಂದಾಗ ಆಗುವ ರೋಮಾಂಚನ 3
10. ಹೆದರಿಕೆ ಭೀತಿಯಿಂದ ಉಂಟಾಗುವ ನಡುಕ 3
11. ಈ ವಿದೇಶಿಯನಿಗೆ ಕೂದಲಿನಂತಹ ಮನಸ್ಸು 3
13. ಕಚ ತೊಡುವ ರಕ್ಷಣಾಭರಣ 3
14. ಶಿವನಿಗೆ ಪ್ರಿಯವಾದ ನೃತ್ಯ 3
15. ಹೂವಿನ ಕಳಶ ಹೊರುವ ಧರ್ಮರಾಯನ ಶಕ್ತ್ಯುತ್ಸವ 3
17. ವಿಶೇಷವೇನೂ ಇಲ್ಲ, ಕೆಲಸವಿಲ್ಲ, ಕಾರಣವಿಲ್ಲ, ಹಾಗೆ 3
18. ದ್ವಾಪರಯುಗದ ಬಡ ಬ್ರಾಹ್ಮಣ ಕೃಷ್ಣ ಗೆಳೆಯ 3
20. ತಾರಾಗಾಗಿ ಯುದ್ಧಮಾಡಿದ ತ್ರೇತಾಯುಗದ ಸೋದರರು 5
22. ಭೀಷ್ಮನಂತೆ ಮಹಾನ್ ಸಾಧಕ ಈ ತಂದೆ 4
23. ಪಶ್ಚಿಮದಲ್ಲಿ ಸೂರ್ಯ ಕೆಳಗಿಳಿಯುವ ಸಮಯ 4
24. ಯಾವಾಗಲೂ ಹೊಸದಾಗಿ ಕಾಣುವ ನಮ್ಮ ದೇಶ 5

ಪದಬಂಧ ಉತ್ತರ -2830

ಮೇಲಿಂದ ಕೆಳಕ್ಕೆ

1.ಪ್ರಶ್ನೆಪತ್ರಿಕೆ 2.ತ್ವರಿತ 3.ಪಲುಕು 4.ಸತ್ಯಸಮರ 7.ಪಿತೂರಿ 9.ಮಾಮರ 11.ನೆಮ್ಮದಿ 12.ತಪ್ಪಲು 13.ಮಹತಿ 14.ಕಾಳಿಮಾ 16.ನಯವಂಚಕ 17.ಯವಾರ 19.ರುಕ್ಮಾಂಗ 20.ತುಪ್ಪದದೀಪ 22.ಕಸರು 23.ಭವನ

ಎಡದಿಂದ ಬಲಕ್ಕೆ

1.ಪ್ರಜಾಪ್ರಭುತ್ವ 3.ಪರಮಹಂಸ 5.ರಿಸಾಲು 6.ಪರಮಪಿತ 8.ಕುಮಾರವ್ಯಾಸ 10.ಕೆನೆಭರಿತ 13.ಮರಣಕಾರ 15.ಪ್ವರಹ 16.ನದಿಬಯಲು 18.ತಿರುಗುಮಾತು 21.ವಂಶೋದ್ಧಾರಕ 23.ಭಗವತ್ಪಾದ 24.ಸಣ್ಣವ 25.ಕಲಿತವರು 26.ನವಮಂಟಪ

ನೆಲದ ದುಡಿತಕ್ಕೆ ನುಡಿಯಾದವರು

ಶಿಕ್ಷಕ, ಎಲ್ಲ ಪ್ರಕಾರಗಳ ಲೇಖಕ, ಪ್ರಕಾಶಕ, ರಂಗಭೂಮಿ ನಟ, ಪತ್ರಕರ್ತ...ಹೀಗೆ ತಮಗೆ ಸಾಧ್ಯವಾದ ಪಾತ್ರಗಳನ್ನು ಬದ್ಧತೆಯಿಂದ, ಸಮರ್ಥವಾಗಿ ನಿರ್ವಹಿಸಿದ ವಿಷ್ಣು ನಾಯ್ಕ ಫೆ.17ರಂದು ನಿಧನರಾದರು.

ಶ್ರೀಧರ ಬಳಗಾರ

ನುಡಿ ನಮನ

ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ತಲ್ಲಣಗಳಿಗೆ ಪೂರ್ಣ ತೆರೆದುಕೊಂಡು, ಅವು ಒತ್ತಾಯಿಸುವ ಭಿನ್ನ ಅಭಿವ್ಯಕ್ತಿಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡವರಲ್ಲಿ ವಿಷ್ಣು ನಾಯ್ಕರು ಪ್ರಮುಖರು. ಅವರ ಬಹುಮುಖಿ ಪ್ರತಿಭೆಗೆ ನೆಲೆಯಾಗಿ ದಿನಕರ ದೇಸಾಯಿಯವರ ಕಾವ್ಯ ಮತ್ತು ಹೋರಾಟ, ಗೌರೀಶ್ ಕಾಯ್ಕಿಣಿಯವರ ವೈಚಾರಿಕ ಓದು, ಯಶವಂತ ಚಿತ್ತಾಲರ ಕಥನ ಪ್ರಭೆ ಮತ್ತು ಪಿಕಳೆಯವರ ಮಾಸ್ತರಿಕೆಯನ್ನು ಹೆಣೆದ ಪರಂಪರೆ ಒದಗಿತು. ತಾನು ಜನಿಸಿದ ಜಾಗದಲ್ಲಿ ತನ್ನ ದೈವವನ್ನು ಜಾಗ್ರತಗೊಳಿಸಿಕೊಳ್ಳುವಲ್ಲಿ ಸಫಲರಾದರು. ಬಡತನ, ಅವಮಾನ, ಅಸಮಾನತೆ, ಪ್ರತಿಭಟನೆ ಮತ್ತು ಮಾನವೀಯ ಅನುಭವದ ಹಾಲಕ್ಕಿ ಒಕ್ಕಲಿಗರ ಸಮುದಾಯದ ಸಂಯುಕ್ತ ಪ್ರಜ್ಞೆಯ ಭಾಗವಾಗಿ ಸಾಹಿತ್ಯ ಬೇಸಾಯಕ್ಕೆ ಅಂಬಾರಕೊಡ್ಲನ್ನು ಫಲವತ್ತಾದ ಪರಿಸರವನ್ನಾಗಿ ರೂಪಿಸಿದರು. ಶಿಕ್ಷಕ, ಎಲ್ಲ ಪ್ರಕಾರಗಳ ಲೇಖಕ, ಪ್ರಕಾಶಕ, ರಂಗಭೂಮಿಯ ನಟ, ಪತ್ರಕರ್ತ, ಹೋರಾಟಗಾರ, ಸಂಘಟಕಾರ, ಸಂಘ-ಸಂಸ್ಥೆಗಳ ರೂವಾರಿ–ಹೀಗೆ ತನಗೆ ಸಾಧ್ಯವಾದ ಪಾತ್ರಗಳನ್ನು ಬದ್ಧತೆಯಿಂದ ಸಮರ್ಥವಾಗಿ ಅವರು ನಿರ್ವಹಿಸಿದರು.

ಗೌರೀಶ್‌ರಿಗೆ ಗೋಕರ್ಣ, ಎಕ್ಕುಂಡಿಯವರಿಗೆ ಬಂಕಿಕೊಡ್ಲು, ಚಿತ್ತಾಲರಿಗೆ ಹನೇಹಳ್ಳಿ ಹೇಗೆ ವಿಶ್ವವನ್ನು ನೋಡಲು ತೆರೆದಿದ್ದ 'ನೂರೆಂಟು ಕಿಟಕಿಗಳು' ಆಗಿದ್ದವೊ ಅವುಗಳನ್ನೇ ವಿಷ್ಣು ನಾಯ್ಕರು ಅಂಕೋಲೆಯ ಅಂಬಾರಕೊಡ್ಲಿನ ತನ್ನ ಪರಿಮಳದ ಅಂಗಳದಲ್ಲಿ ತೆರೆದಿಟ್ಟರು. ರಾಜ್ಯದ ಭಿನ್ನ ಪ್ರದೇಶಗಳಿಂದ ಹಿರಿ-ಕಿರಿಯ ಲೇಖಕರನ್ನು ಆಹ್ವಾನಿಸಿ ಕಥೆ-ಕಾವ್ಯ ಕಮ್ಮಟ, ವಿಚಾರ ಗೋಷ್ಠಿ, ಸಂವಾದ, ನಾಟಕ ಪ್ರದರ್ಶನ, ಪುಸ್ತಕ ಬಿಡುಗಡೆಯ ಪ್ರಯೋಗ ಶಾಲೆಯನ್ನಾಗಿಸಿದರು. ಅವರ ಮನೆಯಂಗಳದ ಟಂಕಶಾಲೆಯನ್ನು ಪ್ರವೇಶಿಸಿದ ಎಳೆಯರಲ್ಲಿ ಸಾಹಿತ್ಯದ ಅಂತರ್ಜಲವನ್ನು ಕಾಣಿಸಿ, ಬರೆಯಿಸಿ, ಪ್ರಕಟಿಸಿ ಪ್ರೋತ್ಸಾಹಿಸಿದ್ದನ್ನು ಹೊಸತಲೆಮಾರಿನ ಲೇಖಕರು ಮರೆಯಲು ಸಾಧ್ಯವಿಲ್ಲ.

ಹಸಿವು-ನೋವು ಇಂಗಿದ ನೆಲದ ನಿಜಕ್ಕೆ ನುಡಿರೂಪ ಕೊಟ್ಟ ವಿಷ್ಣು ನಾಯ್ಕರು ಹಾಲುಣಿಸಿದ ಹಾಲಕ್ಕಿ ಸಮುದಾಯಕ್ಕೆ ಋಣಿಯಾಗಿದ್ದಾರೆ. ಬಾಲ್ಯದಲ್ಲಿ ಬಡತನವಿತ್ತು; ಉಳ್ಳವರ ಮನೆಯ ಪಾಯಸದ ವಾಸನೆಗೆ ಮಾತ್ರ ತೃಪ್ತನಾಗಬೇಕಿತ್ತು. ಮೊಲೆಹಾಲು ಕುಡಿಯುವ ಕೂಸನ್ನು ಬಿಡಾರದಲ್ಲೇ ಬಿಟ್ಟು ಅವರ ಹೆತ್ತವ್ವ ಕೂಲಿಗೆ ಹೋಗಬೇಕಿತ್ತು. ಹಸಿದಿರುತ್ತಿದ್ದ ಕೂಸು ವಿಷ್ಣುಗೆ ಹಾಲಕ್ಕಿ ಸಣ್ಣು ಎದೆಯುಣಿಸುತ್ತಿದ್ದಳು. 'ಒಕ್ಕಲ್ತಿ ಮೊಲೆ ಕುಡಿದ ಮಾಸ್ತರು ಈ ತಮ್ಮಾ' ಎಂದು ಸಣ್ಣು ಜಾತ್ರೆಯಲ್ಲಿ ಸಿಕ್ಕಿದವರಿಗೆಲ್ಲ ಪರಿಚಯಿಸುತ್ತಿದ್ದಾಗ ಅಭಿಮಾನ ಉಕ್ಕುತ್ತಿತ್ತಂತೆ. ಆತ್ಮಕಥನದ ಧಾಟಿಯಲ್ಲಿರುವ ಅವರ 'ಅವ್ವ ಮತ್ತು ನಾನು' ಪದ್ಯದಲ್ಲಿ ತಾಯಿ ಸಂಗ್ರಹಿಸಿಟ್ಟ ಪುಡಿಗಾಸು ಕರಡಿಗೆಯಿಂದ ಬಾಲಕ ವಿಷ್ಣು ನಾಣ್ಯ ಕದ್ದು ಸಿಕ್ಕಿ ಬೀಳುವ ಪ್ರಸಂಗವಿದೆ. 'ಯಾಕ್ಮಗನೇ ಖರೆ ಹೇಳು/ಹೀಗ್ಮಾಡ್ದೆ?'

ವಿಷ್ಣು ನಾಯ್ಕ

ಎಂಬ ಪ್ರಶ್ನೆಗೆ 'ಹೊಟ್ಟುಂಬಿ ಯಾವೊತ್ತು ಬಡಿಸಿದ್ದೆ/ಹೇಳವ್ವ?' ಎಂಬ ಮರು ಪ್ರಶ್ನೆಗೆ ಇಡೀ ಸಮಾಜವೇ ಉತ್ತರಿಸಬೇಕಾಗಿದೆ.

ವಿಷ್ಣು ನಾಯ್ಕರ ಸಾಹಿತ್ಯದ ಹಲವು ವಿವರಗಳು ಆತ್ಮಚರಿತ್ರೆಯಿಂದ ಆಯ್ದುಕೊಂಡದ್ದು. 'ಒನಕೆ ಹಾಕುವ ಕೆಲಸ, ರಾಗಿ ಬೀಸುವ ಕೆಲಸ/ ಕಪಡ ಸಳಿಯುವ ಕೆಲಸ/ ಮಾಡುತ್ತಿದ್ದೆ./ ಹೂಕೊಯ್ದು ಹಾಕಿ ಜಡೆ, ಹುಲ್ಕೊಯ್ದು/ ಕಟ್ಟಿ ಹೊರೆ ಅಂಕೋಲೆ ಪೇಟೆಯಲಿ/ ಮಾರುತ್ತಿದ್ದೆ' ಇವು ಕವಿಯ ವೈಯಕ್ತಿಕ ಅನುಭವ ಮಾತ್ರವಾಗಿರದೆ ಸಮುದಾಯದ ಸಂಕಟದ ಸಾರ್ವತ್ರಿಕ ನಿರೂಪಣೆಯೂ ಆಗುತ್ತದೆ. ಗುಮಟೆ ಪಾಂಗು, ಸುಗ್ಗಿಯ ಕೋಲಾಟ, ಹಾಡು, ಅವರ ಆಡುಮಾತಿನ ಲಯ, ಗೇಯತೆ, ಹಬ್ಬದೊಂದಿಗೆ ಹಾಲಕ್ಕಿ ಸಮುದಾಯದೊಂದಿಗೆ ಬೆರೆತು, ಅದಮ್ಯ ಪ್ರೀತಿ ಮತ್ತು ನಂಬಿಕೆಯಿಂದ ಒಡನಾಡುತ್ತ ರೈತ ಚಳವಳಿಗೆ ಸಿದ್ಧಗೊಳಿಸುವ ನೆಲೆಯಲ್ಲೇ ಅವರ ಜನಪರ ನಿಲುವಿನ ಪ್ರಗತಿಪರ ಕಾವ್ಯದ ಸತ್ವವಿದೆ. ಕಾವ್ಯ ಚಳವಳಿಯನ್ನು ಕೂಡಿ ಚಲಿಸಿದಾಗ ಸಿದ್ಧಗೊಳ್ಳುವ ರಾಜಕೀಯ ಹೋರಾಟಕ್ಕೆ ಇದೊಂದು ಮಾದರಿ.

'ಜಂಗುಂ ಜಕ್ಕುಂ'ಕಾದಂಬರಿಯಲ್ಲಿ ವಿಷ್ಣು ನಾಯ್ಕರು ತನ್ನ ಸಾಹಿತ್ಯಕ್ಕೆ ಅನುಭವದ ಅನುದಾನ ಪಡೆದ ಹಾಲಕ್ಕಿ ಒಕ್ಕಲಿಗರ ಸಾಂಸ್ಕೃತಿಕ ಒಕ್ಕೂಟ ಪ್ರಜ್ಞೆಯ ರೂಪಕವಾದ 'ಬಾಳಮರ' ನಿರೂಪಣೆಯ ಮೂಲಕ ಬುಡಕಟ್ಟು ಸಮುದಾಯವೊಂದರ ಜಾನಪದ ಅಸ್ಮಿತೆಯನ್ನೂ ಹಾಲಕ್ಕಿ ಸ್ತ್ರೀಯರು ಕರಿಮಣಿ ಸರದಿಂದ ಮುಚ್ಚುತ್ತಿದ್ದ ಎದೆಗೆ ಕುಪ್ಪಸ ತೊಟ್ಟು ಗುಲಾಮಗಿರಿಯ ಸಂಕೇತವನ್ನು ಕಳಚಿಕೊಳ್ಳುವ ಆಧುನಿಕತೆಯನ್ನೂ ಹಾಲಕ್ಕಿಯರು ಬಳಸುವ ಪ್ರಾದೇಶಿಕ ಜೀವಂತಿಕೆಯ ಉಪಭಾಷೆಯನ್ನೂ ದಾಖಲಿಸುತ್ತಾರೆ.

ಜಿಲ್ಲೆಯ ಚಾರಿತ್ರಿಕ ದಾಖಲೆಗಳಾಗಿ ವಿಷ್ಣು ನಾಯ್ಕರ 'ಹಾಲಕ್ಕಿಗಳು: ಒಂದು ಅಧ್ಯಯನ', 'ಅರೆಖಾಸಗಿ' ಮತ್ತು 'ದುಡಿಯುವ ಕೈಗಳ ಹೋರಾಟದ ಕತೆ' ಮಹತ್ವದ ಕೃತಿಗಳಾಗಿವೆ. ಅಲಕ್ಷಿತ ಬುಡಕಟ್ಟು ಸಮುದಾಯವಾದ ಹಾಲಕ್ಕಿಗಳ ಜೀವನ ವಿಧಾನವನ್ನು ಶ್ರಮ ಸಂಸ್ಕೃತಿ ಮತ್ತು ಯಜಮಾನ ಸಂಸ್ಕೃತಿಯ ಸಂಘರ್ಷದಲ್ಲಿ ಮಥಿಸಿ ಬಂದ ಜೀವಪೋಷಕ ಜಾನಪದೀಯ ಅನುಭವದ ಕಥನ ನಿರೂಪಣೆ ಇಲ್ಲಿದೆ. ಪ್ರಕೃತಿಯ ಸಹಜ ಲಯದೊಳಗೆ ಮಿಳಿತ, ಕೃಷಿಯ ಮೂಲಕ ಮಣ್ಣಿನ ಭಾಷೆಯನ್ನು ಮರೆಯದ, ನಿರಂತರ ಹೋರಾಟದ ನೈತಿಕ ಎಚ್ಚರದಲ್ಲಿ ದುಡಿವ ಭೂರಹಿತ ಸಮುದಾಯದ ಸಾಂಸ್ಕೃತಿಕ ಒಳನೋಟಗಳ ಅರಿವಿಲ್ಲದೆ ಓದುವ ಇತಿಹಾಸ ಅಪೂರ್ಣ ಎಂಬ ವಾಸ್ತವವನ್ನು ಕಳಕಳಿಯಿಂದ ಈ ಅಧ್ಯಯನ ನಿವೇದಿಸುತ್ತದೆ.

ಅಂಕಣ ಬರಹ 'ಅರೆಖಾಸಗಿ' ಜಿಲ್ಲೆಯ ಜೀವಸ್ಪಂದನಕ್ಕೆ ಸಾಕ್ಷಿಯಾಗಿದೆ. ಮುಗ್ಧ ಅಂತಃಕಣದಿಂದ ಆಪ್ತರಾಗುವ ಸುಕ್ರು, ಬಡಗೇರಿ ಬೀರ, ಜೈನುದ್ದೀನ, ಓಮಜ್ಜ, ನಾಗಪ್ಪಯ್ಯ, ಸಣ್ಣು ಮುಂತಾದ ಅಪ್ಪಟ ಮನುಷ್ಯರ ಮಾನವೀಯ ಸಂಬಂಧವನ್ನು ಲೇಖಕರು ನೆನಪಿನಲ್ಲಿ ನೇಯ್ದು ಕೊಡುತ್ತಾರೆ. ಇವರೆಂತಹ ಪ್ರಕೃತಿ ಪುರುಷರೆಂದರೆ 'ಬತ್ತದ ಭೂಮಿ'ಯ ಅಂತರ್ಜಲ ಹುಡುಕುತ್ತ ಹೊರಟ ಜೀವಬೇರುಗಳು; ಅಪ್ಪ ನೆಟ್ಟ ತೆಂಗಿನಿಂದ, ಒಣ ಅಟ್ಲಕಾಯಿ ಮತ್ತು ಕತ್ತುಂಬಿನಿಂದ ಮೈಯುಜ್ಜಿ ಅವ್ವ ಮಾಡಿದ ತಣ್ಣೀರಿನ ಯುಗಾದಿ ಸ್ನಾನದಿಂದ, ಚಂದ್ರಶಾಲೆಯಲ್ಲಿ ಕನಸೊಡೆದು ಬಂದವಳಿಂದ, ಬಾವಿಯ ನೀರಲ್ಲಿ ಮುಖ ನೋಡಿಕೊಳ್ಳಲು ಬಂದ ಚಂದ್ರನಿಂದ, 'ಅಂಕೋಲ' ಎಂಬ ವೃಕ್ಷದ ಹೆಸರಿನ ಊರಿನಿಂದ ಭಾರತದ ಇತಿಹಾಸ ಬರೆದವರು. ಈ ಅಪೂರ್ವ ಚಿತ್ರಕೂಟ ಪ್ರಪಂಚದಲ್ಲಿ ಬದುಕುತ್ತಿರುವವರ ಭಾಷೆ ಮತ್ತು ವೇಷಗಳನ್ನು ವಿಷಯದಿಂದ ಬೇರ್ಪಡಿಸಲಾರದಷ್ಟು ಹಾಸುಹೊಕ್ಕಾಗಿದೆ. ಭಾವ-ಭೂಗೋಲಗಳ ಅಪರೂಪದ ಸಂಯೋಗ ಲೇಖಕರ ಕಲಾಪರಿಣಿತಿಗೆ ಉದಾಹರಣೆಯಾಗಿದೆ.

ಭೂ ಹೋರಾಟಗಳ ಚಾರಿತ್ರಿಕ ದಾಖಲೆಯಾಗಿ 'ದುಡಿಯುವ ಕೈಗಳ ಹೋರಾಟದ ಕತೆ' ಮಹತ್ವದ ಕೃತಿಯಾಗಿದೆ. ಸಮಾಜವಾದಿ ಹೆಜ್ಜೆ ಹಾಕುತ್ತ ದಿನಕರ ದೇಸಾಯಿಯವರ ಹಾದಿಯಲ್ಲಿ ನಾಯ್ಕರು ನಡೆದರು. ಕೃಷಿ ಕಸುಬಿನ ಕೌಶಲ್ಯವಿದ್ದೂ ಭೂಮಿಯನ್ನು ಕಳೆದುಕೊಂಡ ಹಾಲಕ್ಕಿ ಸಮುದಾಯ ಅನ್ಯಾಯ, ಶೋಷಣೆಗೆ ಒಳಗಾಗಿದ್ದ ಸತ್ಯವನ್ನು ಚರಿತ್ರೆಯ ಅಂತರ್‌ರಚನೆಯಲ್ಲಿ ಅಡಗಿರುವುದನ್ನು ತಾರ್ಕಿಕವಾಗಿ ವಿಶ್ಲೇಷಿಸುವುದರ ಮೂಲಕ ಶೋಧಿಸುತ್ತಾರೆ. ಈ ಹೋರಾಟ ಭೂಮಾಲಿಕರ, ಬ್ರಿಟಿಷರ, ರಾಷ್ಟ್ರೀಯ ಯೋಜನೆಯನ್ನು ಹೇರುವ ಸರಕಾರದವರ ಮತ್ತು ಜಾಗತೀಕರಣದ ಆಕ್ರಮಣದಾರರ ವಿರುದ್ಧ ತೋರಿದ ಪ್ರತಿಭಟನೆಗೆ ಮಾದರಿಯಾಗಿದೆ.

'ನಿಚ್ಚಣಿಕೆಯ ಮೆಟ್ಟಿಲು ಮುಗಿದಿದೆ ಹೆಜ್ಜೆಗಳೇ, ಇಳಿಯುವ ಸರದಿ ಇನ್ನು ನಿಮಗೆ' ಎನ್ನುತ್ತಲೆ ಅವರು ನಿರ್ಗಮಿಸಿದ್ದಾರೆ. ಅಂಕೋಲೆಯ ಸಂದಿ ಬೀದಿಗಳ ಬದಿಯ ಜಗಲಿ ಮಾಡಿನಡಿ ಹಣಕಿ ಹೊಲಿಯುವ ದರ್ಜಿಗಳ ಹೊಲಿಗೆ ಯಂತ್ರದ ಸದ್ದಿನಲ್ಲಿ, ನಸುಕಿನಲ್ಲೇ ಬೆವರುತ್ತ ನೀರಿಗೋಡುವ ಸವಾರರ ಸೈಕಲ್ ಚಕ್ರದ ದನಿಯಲ್ಲಿ ವಿಷ್ಣು ನಾಯ್ಕರು ಸದಾ ನೆನಪಾಗುತ್ತಾರೆ.

ಕೋಚ್ ಕಂಡಂತೆ...

12ನೇ ಪುಟದಿಂದ...

ಹ್ಯಾರಿಸ್ ಶೀಲ್ಡ್‌ನಲ್ಲಿ ದ್ವಿಶತಕ ಗಳಿಸಿದ ಪುರಾವೆಯಾಗಿ ಪೇಪರ್ ಕಟಿಂಗ್ಸ್, ಪತ್ರಗಳು ಇದ್ದರೆ ತೆಗೆದುಕೊಂಡು ನನ್ನ ಮನೆಗೆ ಬಾ ಎಂದು ಹೇಳಿ ವಿಳಾಸ ಕೊಟ್ಟೆ. ಮರುದಿನ ಯಶಸ್ವಿ ಮನೆಗೆ ಬಂದು ಮಾತನಾಡಿದ. ಅವರ ತಂದೆ, ತಾಯಿಯನ್ನು ಸಂಪರ್ಕಿಸಿ 'ನಿಮ್ಮ ಮಗನಿಗೆ ನಾನು ತರಬೇತಿ ಕೊಡುತ್ತೇನೆ' ಎಂದೆ. ಅವರೂ ಒಪ್ಪಿದರು. ಆತನ ಬಳಿ ವಯಸ್ಸಿನ ಪ್ರಮಾಣಪತ್ರ ಸರಿಯಾಗಿ ಇರಲಿಲ್ಲ. ಊರಿನಲ್ಲಿದ್ದಾಗ ಕೆಲವರು ಸುಳ್ಳು ಪ್ರಮಾಣಪತ್ರ ಮಾಡಿ ಆಡಿಸಿಬಿಟ್ಟಿದ್ದರು. ನಾನು ಅವರ ತಂದೆಯನ್ನು ಕರೆಸಿ ಎಲ್ಲವನ್ನೂ ಸರಿಪಡಿಸಿದೆ. ಕಾನೂನಾತ್ಮಕವಾಗಿ ಸರಿಪಡಿಸಲು ಪದೇ ಪದೇ ಅವರ ಊರಿಗೆ ಹೋಗಿದ್ದೆ. ಆದರೆ ಸಮಯ ಬಹಳ ವ್ಯರ್ಥವಾಗುತ್ತಿತ್ತು. ಅವರ ತಂದೆಯಿಂದ ಪವರ್ ಆಫ್ ಅಟಾರ್ನಿ ಪಡೆದು ಯಶಸ್ವಿಯನ್ನು ನನ್ನ ದೊಡ್ಡ ಮಗನಂತೆ ನೋಡಿಕೊಂಡೆ.

ಒಂಬತ್ತು ವರ್ಷಗಳಲ್ಲಿ ನನ್ನ ಕಟ್ಟುನಿಟ್ಟಿನ ಸೂಚನೆಗಳನ್ನು ಪಾಲಿಸಿ, ಕ್ರಿಕೆಟ್ ಕಲಿತಿದ್ದಾನೆ. 2020ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗೆ ಅಯ್ಕೆಯಾಗಿರುವುದಾಗಿ ನನಗೆ ಕರೆ ಮಾಡಿದ. ನಾನು ಅದಕ್ಕೆ; ಆಯ್ಕೆ ಆಗಿರುವುದರಲ್ಲಿ ಏನೂ ಅಚ್ಚರಿಯಿಲ್ಲ. ಆದರೆ ಅಲ್ಲಿ ಏನು ಸಾಧನೆ ಮಾಡ್ತಿ ಎನ್ನುವುದೇ ಮುಖ್ಯ. ನೋಡೋಣ ಎಂದಿದ್ದೆ. ಆ ಟೂರ್ನಿಯಲ್ಲಿ ಯಶಸ್ವಿ ಟಾಪ್ ಸ್ಕೋರರ್ ಆಗಿ, ಸರಣಿ ಶ್ರೇಷ್ಠ ಗೌರವ ಗಳಿಸಿದ್ದು ಸಂತಸ ತಂದಿತ್ತು.

ಅದೇ ವರ್ಷ ಐಪಿಎಲ್‌ನಲ್ಲಿ ₹ 2.4 ಕೋಟಿಗೆ ಯಶಸ್ವಿಯನ್ನು ರಾಜಸ್ಥಾನ ರಾಯಲ್ಸ್ ತಂಡ ಖರೀದಿಸಿತು. ರಣಜಿ ಟೂರ್ನಿಯಲ್ಲಿಯೂ ಉತ್ತಮವಾಗಿ ಆಡಿದ ಯಶಸ್ವಿಗೆ ಅವಕಾಶಗಳು ಹೆಚ್ಚಿದವು. ಆದರೆ ಕೋವಿಡ್‌ನಿಂದಾಗಿ ಕ್ರಿಕೆಟ್ ನಿಂತಿತು. 2021ರಲ್ಲಿಯೂ ಯಶಸ್ವಿ ಸಾಮರ್ಥ್ಯ ಕುಸಿಯಿತು. ಆ ಸಂದರ್ಭದಲ್ಲಿ ನಾನು ಅವನನ್ನು ನಮ್ಮೂರು ಗೋರಖಪುರಕ್ಕೆ ಕರೆಸಿಕೊಂಡು 150–160 ಕಿ.ಮೀ ವೇಗದ ಎಸೆತಗಳನ್ನು ಎದುರಿಸುವ ತಾಲೀಮು ನೀಡಿದೆ. ಕೋವಿಡ್ ಸಂದರ್ಭದಲ್ಲಿ ಹೆಚ್ಚು ಟಿ20 ಟೂರ್ನಿಗಳು ನಡೆಯುತ್ತಿದ್ದವು. ಆದ್ದರಿಂದ ಆ ಮಾದರಿಯ ಮೇಲೆ ಹೆಚ್ಚು ಗಮನ ಕೇಂದ್ರಿಕರಿಸಿದ್ದು ಫಲ ನೀಡಿತು. 2023ರಲ್ಲಿ ಐಪಿಎಲ್ ಕೂಡ ಚೆನ್ನಾಗಿ ಆಡಿದ ಯಶಸ್ವಿ, ಭಾರತ ತಂಡಕ್ಕೂ ಪದಾರ್ಪಣೆ ಮಾಡಿದ. ಒಂಬತ್ತು ವರ್ಷಗಳವರೆಗೆ ನನ್ನ ತಾಯಿ ಮತ್ತು ಪತ್ನಿ ಕೂಡ ಯಶಸ್ವಿಯನ್ನು ಮನೆ ಮಗನಂತೆ ಬೆಳೆಸಿದರು.

ಜೈಸ್ವಾಲ್ ಕುಟುಂಬದ ಈ ಹುಡುಗ ಕ್ರಿಕೆಟಿಗನಾಗಷ್ಟೇ ಅಲ್ಲ. ಮಾನವಿಯತೆ ಹಾಗೂ ಮೌಲ್ಯಗಳಿರುವ ವ್ಯಕ್ತಿಯಾಗಿಯೂ ಬೆಳೆದರೆ ಮತ್ತಷ್ಟು ಹೆಮ್ಮೆಪಡುತ್ತೇನೆ.

ನಿರೂಪಣೆ: ಗಿರೀಶ ದೊಡ್ಡಮನಿ



2ನೇ ಸಂಪುಟ

ಇದೀಗ ಲಭ್ಯ

ಹೊನ್ನ ಕಣಜ

ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ

ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001
ದೂರವಾಣಿ : 080 22161900/901/913/914

Shop Online www.navakarnataka.com

'ವಸ್ತುನಿಷ್ಠ ಅಮಾನುಷ ಅನುಭವ ಕಥನ'

ರಾಜೇಂದ್ರ ಚೆನ್ನಿ

ವಿಮರ್ಶೆ

ಶ್ರೀಧರ ಬಳಗಾರರು ದಶಕಗಳಿಂದ ತಮ್ಮದೇ ಕಥಾ ಜಗತ್ತನ್ನು ನಿರ್ಮಿಸಿಕೊಂಡಿದ್ದಾರೆ. ಒಂದು ಪ್ರದೇಶದ ದಟ್ಟವಾದ ವಿವರಗಳನ್ನು ಮಾತ್ರವಲ್ಲ, ಆ ಪರಿಸರಕ್ಕೆ ಅಂಟಿಕೊಂಡಿರುವ ಮನುಷ್ಯರ ವಿಶಿಷ್ಟವಾದ ದೈನಂದಿನ ಜೀವನವನ್ನು ಕತೆಗಳ ವಸ್ತುಗಳನ್ನಾಗಿ ಮಾಡಿಕೊಂಡಿದ್ದಾರೆ. ಈ ವ್ಯಕ್ತಿಗಳು ಹಾಗೂ ಪರಿಸರದ ನಡುವಿನ ಅವಿನಾ ಸಂಬಂಧದ ಆಚೆಗೆ ಅವರಿಗೆ ಅಸ್ತಿತ್ವವೇ ಇಲ್ಲ. ಕೆಲವೊಮ್ಮೆ ಯಾವುದೋ ಒಂದು ಕಾಲದ ಚೌಕಟ್ಟಿನಲ್ಲಿ ಇವರ ಬದುಕು ಸ್ಥಗಿತವಾಗಿಬಿಟ್ಟಂತೆ ಕಾಣುತ್ತದೆ. ಹಳೆಯ ಫೋಟೋ ನೋಡಿದಾಗ ಅನ್ನಿಸುವಂತೆ. ಈ ಸಂಕಲನದ ಕತೆಗಳಲ್ಲಂತೂ ವಾಸಿಸುವ ಮನೆಗಳೇ ಪಳೆಯುಳಿಕೆಗಳಂತಿವೆ. ಅನೇಕ ಮನೆಗಳು ಅವಶೇಷಗಳಂತೆ ಅಲೌಕಿಕ ಸಂಗತಿಗಳಿಗೆ ನೆಲೆಯಾಗಿವೆ. ಭಯವೇ ಇಲ್ಲಿಯ ಬಹುಪಾಲು ಕತೆಗಳ ಸ್ಥಾಯೀ ಅನುಭವವಾಗಿದೆ. 'ಉಪಲಬ್ಧ' ಕತೆಯ ನಚ್ಚಣ್ಣನಿಗೆ ತಾನು ಯಾವ ಮನೆಗೆ ಸೇರಿದವನು ಎನ್ನುವುದೇ ಸಂದಿಗ್ಧವಾಗಿದೆ. ಅವನಿಗಿರುವ ಆಸ್ತಿಗಾಗಿ ಅನೇಕರು ಅವನ ಮೇಲೆ ತಮ್ಮ ಹಕ್ಕು ಚಲಾಯಿಸುತ್ತಾರೆ. ತಾನು ಸತ್ತಮೇಲೆ ತನ್ನ ಆಸ್ತಿ ಮಾರಿ ಹಣವನ್ನು ಬ್ಯಾಂಕಿನಲ್ಲಿಟ್ಟು ತಾನು ವಾಸಿಸುತ್ತಿದ್ದ ಕುಟೀರದಲ್ಲಿ ಸದಾ ದೀಪ ಉರಿಯಲು ವಿನಿಯೋಗಿಸತಕ್ಕದ್ದು ಎಂದು ಉಯಿಲು ಬರೆದ ಮೇಲೆ ಬಿಡುಗಡೆ ಸಿಕ್ಕುತ್ತದೆ.



ಮಾಲತಿ ಮಾತಾಡಿದಳು
ಲೇ : ಶ್ರೀಧರ ಬಳಗಾರ
ಪ್ರ: ಅಂಕಿತ ಪುಸ್ತಕ
ಸಂ: 080-26617755
ಪು: 170 ₹168

ಎಂಬತ್ತರ ಆಸುಪಾಸಿನ ಕೋದಂಡ ಹೆಂಡತಿ ತೀರಿಹೋದ ಮೇಲೆ ಏಕಾಂಗಿಯಾಗಿದ್ದಾನೆ. ಕಠೋರ ನಡುವಳಿಕೆಯಿಂದಾಗಿ ಮಕ್ಕಳು ದೂರವಾಗಿದ್ದಾರೆ. ಬದುಕಿದ್ದಾಗ ಮೂಕಾಂಬೆಯನ್ನು ಹಂಗಿಸಿ ದೂರ ಇಟ್ಟವನು ಈಗ ಮನೆಗೆಯಲ್ಲಿ ಅವಳನ್ನು ಅನುಕರಿಸಿ ಅವಳಂತೆ ಆಗತೊಡಗಿದ್ದಾನೆ. ಕತೆಯ ಅನಿರೀಕ್ಷಿತ ಅಂತ್ಯದಲ್ಲಿ ಅವಳ ಆಭರಣಗಳನ್ನು ತೊಟ್ಟುಕೊಂಡು ಕನ್ನಡಿಯಲ್ಲಿ ನೋಡಿಕೊಳ್ಳುವ ವಿದ್ಯಮಾನವಿದೆ. ಬದುಕಿದ್ದಾಗ ಮೂಕಾಂಬೆಗೆ ಆಗುವ ಅಲೌಕಿಕ ಅನುಭವವು ಕತೆಯ ಸಶಕ್ತ ಭಾಗವಾಗಿದೆ. ಹಾವಿನ ಶಿರಮಣಿಯಿಂದ ವಜ್ರದಂತೆ ಉರಿಯುವ ಬೆಳಕನ್ನು ಅವಳು ಕಾಣುತ್ತಾಳೆ. ಮುದಿಗಂಡನಿಂದ ಭಾವನಾತ್ಮಕವಾಗಿ ದೂರವಿದ್ದ ಅವಳಿಗೆ ಮಕ್ಕಳಿಗೂ ಒಳ್ಳೆಯದನ್ನು ಮಾಡಲಾಗುವುದಿಲ್ಲ. ಆದರೆ ಕೋದಂಡನಲ್ಲಿ ಪರಕಾಯ ಪ್ರವೇಶ ಮಾಡಿದಂತೆ ಆವರಿಸಿಕೊಳ್ಳುತ್ತಾಳೆ. ಬಳಗಾರರ ಇಲ್ಲಿಯ ಕತೆಗಳ ವಿದ್ಯಮಾನಗಳು ಸಂದಿಗ್ಧವಾಗಿಯೇ ಉಳಿದು ಕೆಣಕುತ್ತವೆ. 'ಅನುಕ್ತ' ಇದೇ ಮಾದರಿಯ ಪ್ರಭಾವಿ ಕತೆಯಾಗಿದೆ. ಮಾಚಣ್ಣ ತನ್ನ ಹೆಂಡತಿಯನ್ನು ಅನಂತಪ್ಪನ ಮಾತು ಕೇಳಿ ದೇವತೆ ಎಂದುಕೊಂಡು ಅನೈತಿಕ ಸಂಬಂಧ ಬೆಳೆಯಲು ಕಾರಣನಾಗುತ್ತಾನೆ. ಅವಳ ಆಸೆಗಳನ್ನು ಪೂರೈಸಲು ತನಗೆ ಆಗುತ್ತಿರಲಿಲ್ಲವೆಂದು ಗೊತ್ತು. ಸಾಯುವ ಮೊದಲು ಏನು ಹೇಳಬಹುದು, ಚಿನ್ನದ ನಾಣ್ಯಗಳ ಗುಟ್ಟನ್ನು ಹೇಳಬಹುದು ಎಂದು ಕಾದಿದ್ದವರಿಗೆ ನಿರಾಸೆಗೊಳಿಸಿ ಸತ್ತು ಹೋಗುತ್ತಾನೆ. ಅಥವಾ ಏನೂ ಹೇಳಬಾರದೆಂದು ನಿರ್ಧರಿಸಿ ಮಾತು ನಿಂತು ಹೋದಂತೆ ನಟಿಸಿದನೆ? ಉಳಿಯುವುದು ಸಂದಿಗ್ಧವೇ. ಬಳಗಾರರ ಕಥನಗಳು ಈ ಸಂದಿಗ್ಧಗಳ ಶಕ್ತಿಶಾಲಿ ನಿರೂಪಣೆಗಳಾಗಿವೆ. ಅಂತಿಮವಾಗಿ ಮನುಷ್ಯರ ಅಸ್ತಿತ್ವದ ಬಗೆಗೆ ಸತ್ಯವೆಂಬುದು ಕೈಗೆ ಸಿಕ್ಕುವುದೇ ಇಲ್ಲ. ಓದಿಗೆ ದಕ್ಕುವುದೆಂದರೆ ಮಾಚಣ್ಣನಂಥ ಜೀವಿಗಳ ದುರಂತ ಮಾತ್ರ. ಈ ಕತೆಯಲ್ಲಿಯೂ ಭಯ, ದುಃಸ್ವಪ್ನಗಳೇ ಸ್ಥಾಯಿಯಾಗಿವೆ. 'ಲೋಪಸಂಧಿ' ಕತೆ ವಾಚ್ಯವಾಗದಂತೆ ಸೂಕ್ಷ್ಮವಾಗಿ ಧ್ವನ್ಯಾರ್ಥಗಳನ್ನು ಬಳಸುವ ಕಲೆಯ ದ್ಯೋತಕವಾಗಿದೆ. 58ರ ಪ್ರಾಯದ ಹಬ್ಬುರಾಯರು ಲಕ್ವಾ ಹೊಡೆದು ಆಸ್ಪತ್ರೆಗೆ ಸೇರಿದಾಗ ಅಲ್ಲಿ ಸಫಾಯಿ ನೌಕರಳಂತೆ ದುಡಿಯುವ ಸುಂದರಿ ಸಾವನಿ ಉತ್ತಮ ಜಾತಿಯ ನತದೃಷ್ಟೆಯೆಂದು ಭಾವಿಸಿ ಅವಳ ಸಾಮೀಪ್ಯವನ್ನು ಬಯಸತೊಡುತ್ತಾರೆ. ವಾಸ್ತವವು ಬೇರೆ ಎಂದು ಗೊತ್ತಾದಾಗ ಅವರಲ್ಲಾಗುವ ಬದಲಾವಣೆಯೇ ಕತೆಯ ವಸ್ತುವಾಗಿದೆ. ಕತೆಯು ನಿರೀಕ್ಷಿತ ಅಂತ್ಯದಲ್ಲೂ ನಿರೂಪಣೆಯ ಸೂಕ್ಷ್ಮತೆಯಿಂದಾಗಿ ನೆನಪಿನಲ್ಲಿ ಉಳಿಯುತ್ತದೆ.

'ಮಾಲತಿ ಮಾತಾಡಿದಳು' ಕತೆಯಲ್ಲಿ ಸ್ವಾರ್ಥ, ಲೈಂಗಿಕ ಕಿರುಕುಳ, ಭಯಗಳಿಂದಾಗಿ ಅಸಹಾಯಕಳಾದ ಮಾಲತಿ ಎಲ್ಲವನ್ನೂ ಎದುರಿಸುವ ಆತ್ಮವಿಶ್ವಾಸವನ್ನು ಪಡೆಯುತಾಳೆ. ಸಾವಿನ ಮೊದಲು ಗಂಡ ಮನೆಯನ್ನು ಬಿಟ್ಟುಹೋಗೆಂದು ಹೇಳಿದ್ದನ್ನೂ ಧಿಕ್ಕರಿಸಿ ಇಲ್ಲಿಯೇ ಇರುತ್ತಾಳೆ. 'ನಾಗಬಂಧ' ಈ ಸಂಗ್ರಹದ ಅತ್ಯಂತ ಸಂಕೀರ್ಣವಾದ ಕತೆಯಾಗಿದೆ. ಸಣ್ಣುಭಟ್ಟರೂ ನಾಗಬಂಧದಲ್ಲಿ ಸಿಲುಕಿದ್ದಾರೆ. ಕತೆಯ ಕೊನೆಗೆ ಅವರು ಪಡೆಯುವ ಬಿಡುಗಡೆ ಎಂದಿನಂತೆ ಅನಿರೀಕ್ಷಿತವಾಗಿದೆ, ಸಂದಿಗ್ಧವಾಗಿದೆ.

ಒಟ್ಟಾರೆ ಈ ಸಂಗ್ರಹದ ಕತೆಗಳು ಮನುಷ್ಯರ ಬದುಕಿನ ಬಗ್ಗೆ ಆಶಾವಾದಿಯಾಗಿಲ್ಲ. ಅಥವಾ ನಿಷ್ಠುರವಾದ ವಸ್ತುನಿಷ್ಠತೆ ಇವುಗಳ ಹಿಂದೆ ದುಡಿದಿದೆ. ಅರ್ಥವಾಗದ ನೋವುಗಳು, ಭಯ, ಅರಿವನ್ನು ಮೀರಿದ ವಿದ್ಯಮಾನಗಳೆಲ್ಲವೂ ಮನುಷ್ಯರನ್ನು ಹಿಂಸಿಸುತ್ತವೆ. ಹಾಗೆ ಹುಡುಕಿದರೆ ಎಲ್ಲದಕ್ಕೂ ಕಾರ್ಯಕಾರಣ ಸಂಬಂಧಗಳು ಗೋಚರಿಸಬಹುದು. ಬದುಕುವವರಿಗೆ ಇದೆಲ್ಲಾ ಹೊಳೆಯದು. ಕತೆಗಳು ವ್ಯಾಖ್ಯಾನದ ಎರಡು ಪಾತಳಿಗಳನ್ನು ನಮ್ಮೆದುರಿಗೆ ಇಡುತ್ತವೆ. ಒಂದು, ಅನುಭವವನ್ನು ಸ್ವತಃ ಅನುಭವಿಸುತ್ತಿರುವವರದು; ಇನ್ನೊಂದು ಅನುಭವಿಸುತ್ತಿರುವ ಅವರನ್ನು ಮೀರಿದ ಇನ್ನೊಂದು ದೃಷ್ಟಿಕೋನದ ವ್ಯಾಖ್ಯಾನ. ಬಳಗಾರರ ಸಾಧನೆಯೆಂದರೆ ಇವೆರಡೂ ಪಾತಳಿಗಳನ್ನು ಸಮರ್ಥವಾಗಿ ನಿರ್ವಹಿಸುವುದು. 'ಅನುಕ್ತ' ಕತೆಯಲ್ಲಿ ಮಾಚಣ್ಣ ಈ ಎರಡೂ ಪಾತಳಿಗಳಲ್ಲಿತ್ತಾನೆ. ಮನುಷ್ಯರನ್ನೇ ತಿನ್ನುವ ಮರಗಳಿರುವ ಬಗ್ಗೆ ಅವನಿಗೆ ಗೊತ್ತು. ಇವುಗಳಿಗೆ ಅನಂತಪ್ಪ ಬಲಿಯಾದನೇ ಎಂದು ಗುಮಾನಿಯಿದೆ. ಅಪೂರ್ವ ಸುಂದರಿಯಾದ ಮಾಚಣ್ಣನ ಹೆಂಡತಿ ದೇವತೆಯೆ? ಹಾದರಕ್ಕೆ ಬಲಿ ಬಿದ್ದ ಹೆಣ್ಣೆ? ಚಿನ್ನದ ನಾಣ್ಯಗಳಿಗಾಗಿ ಜಗಳ ಮಾಡುವ ಹೆಣ್ಣೆ? ಬಳಗಾರರ ಲೋಕದೃಷ್ಟಿಯಲ್ಲಿ ಇವೆಲ್ಲವೂ ನಿಜ.

ಬಳಗಾರರು ಪ್ರಯೋಗಶೀಲ ಕತೆಗಾರರು. ವಾಸ್ತವವಾದಿ ಕತೆಗಳಲ್ಲಿ ಅತಿವಾಸ್ತವಿಕತೆಯನ್ನು ಬಳಸಬಲ್ಲರು. ನಿರಾಲಂಕರವಾದ ಶೈಲಿಯಲ್ಲಿ ಗಹನವಾದುದನ್ನು ಹೇಳಬಲ್ಲರು. ಈ ಸಂಕಲನದಲ್ಲಿ 'ಹದ' ಸರಳವಾದ ನಿರೂಪಣೆಯಲ್ಲಿ ಸಂಕೀರ್ಣವಾದ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸುತ್ತದೆ. ಬೆಳೆ ಕಟಾವಿನ 'ಹತ್ಯಾರು'ಗಳಿಗೆ ಹದಬರುವ ಹಾಗೆ ಮಾಡಬಲ್ಲವನು ಮಂಜಪ್ಪಾಚಾರಿ ಮಾತ್ರ. ಸಾವಿರಾರು ವರ್ಷಗಳಿಂದ ಈ ನೈಪುಣ್ಯವನ್ನು ಕಾಪಾಡಿಕೊಂಡು ಬಂದ ಸಮುದಾಯದ ಪ್ರತಿನಿಧಿ. ಅವನ ತಂದೆ ತಯ್ಯಾರಿಸುತ್ತಿದ್ದ ಬೀಗಗಳು ಅದ್ಭುತ ತಂತ್ರಜ್ಞಾನದ ದೇಸೀ ಉತ್ಪನ್ನಗಳಾಗಿದ್ದವು. ಆದರೆ ಬೀಗಗಳನ್ನು ಉತ್ಪಾದಿಸುವ ಕಾರ್ಖಾನೆಗಳು ಬಂದ ಮೇಲೆ ಈ ಕೌಶಲ್ಯ ನಗಣ್ಯವಾಯಿತು. ಆದರೆ ಜನರು ಈಗಲೂ ಹದಕ್ಕೆ ಮಂಜಪ್ಪಾಚಾರಿಯನ್ನೇ ಬಯಸುತ್ತಾರೆ. ಅವನು ಊರನ್ನು ಬಿಟ್ಟು ಕಣ್ಮರೆಯಾಗುವುದರ ಹಿಂದೆ ಒಂದು ದುರಂತವಿದೆ. ನೆರೆಯಲ್ಲಿ ಉಳಿಸಿದ ಅವನನ್ನು ಊರಿನ ಜನರು ಮರೆತದಕ್ಕೆ ಖೇದವಿದೆ. ಎಲ್ಲರನ್ನೂ ಉಳಿಸಿದ ಮಂಜಪ್ಪಾಚಾರಿ ನೆರೆ ಇಳಿವವರೆಗೆ ನಾಯಿಯೊಂದರ ಸಂಗಾತಿತನದಲ್ಲಿರುತ್ತಾನೆ. ಬೇಸರಗೊಂಡು ಊರನ್ನೇ ಬಿಟ್ಟು ಹೋಗುತ್ತಾನೆ. ಕತೆಯ ನಿರೂಪಕನು ಅವನನ್ನು ವಾಪಸ್ಸು ಬಂದು ಹತ್ಯಾರುಗಳನ್ನು ಹದಗೊಳಿಸಲು ಒಪ್ಪಿಸುತ್ತಾನೆ. ಈ ಕತೆಯು ಆಧುನೀಕರಣದಿಂದ ಅನಾಥರಾದ ಕಸುಬುಗಾರರ ಚರಿತ್ರೆಯಾಗಿದೆ; ಆಧುನಿಕತೆಯ ವಿಮರ್ಶೆಯಾಗಿದೆ. ಬಳಗಾರರು 'ಅಭಿವೃದ್ಧಿ', 'ಆಧುನಿಕತೆ', ಮಾರುಕಟ್ಟೆಗಳು ನೆಲ ಸಮುದಾಯಗಳನ್ನು ನಾಶಮಾಡುತ್ತಿರುವ ಬಗ್ಗೆ ಬರೆಯುತ್ತಿದ್ದಾರೆ.

ಅವರು ಉತ್ತರ ಕನ್ನಡದ ಪ್ರಾದೇಶಿಕತೆಗೆ ಬಂದಿರುವ ಅವಕಾಶ ಹಾಗೂ ದುರಂತಗಳ ಚರಿತ್ರೆಕಾರರಾಗಿ ಮುಖ್ಯವಾಗಿದ್ದಾರೆ. ಪ್ರಾದೇಶಿಕತೆಯನ್ನು ವಿಜೃಂಭಿಸುವ ಬದಲಾಗಿ ಬದಲಾವಣೆ ಬಗ್ಗೆ ವಸ್ತುನಿಷ್ಠ ವಿಮರ್ಶೆ ಮಾಡಿದ್ದಾರೆ. ಬಳಗಾರರ ಒಟ್ಟು ಬರಹವು ಕಣ್ಣಿಗೆ ಎದ್ದು ಕಾಣುವ ಆದರೆ ಸಮುದಾಯದ ಅಂತರ್ಯವನ್ನೇ ಬದಲಾಯಿಸುವ ವಿದ್ಯಮಾನಗಳ ಬಗ್ಗೆ ಇದೆ.

ಮೊದಲ ಓದು

ಜಾತಿ ವಿರೋಧಿ ಬುದ್ಧಿಜೀವಿಗಳ ದರ್ಶನ

ಭಾರತದ ಬೆಳವಣಿಗೆಯಲ್ಲಿ ದಲಿತರು, ಆದಿವಾಸಿಗಳು ಹಾಗೂ ಮಹಿಳೆಯರ ಕೊಡುಗೆ ಏನು? ಅದನ್ನು ಯಾವ ಕಾರಣಕ್ಕಾಗಿ ನೇಪಥ್ಯಕ್ಕೆ ತಳ್ಳಲಾಯಿತು? ಬ್ರಾಹ್ಮಣೀಯ ಸಂಸ್ಕೃತ ಗ್ರಂಥಗಳ ಆಕರಗಳನ್ನು ಹೊರತುಪಡಿಸಿ ಜನಪದ ಮೌಖಿಕ ಸಾಹಿತ್ಯ ಮೂಲಗಳನ್ನು ಪರಿಶೀಲಿಸಿದರೆ ನಮಗೆ ದೊರೆಯುವ ಸಾಮಗ್ರಿ ಜನಸ್ತರೀಯ ಚಿಂತನೆಗಳನ್ನು ಹೇಗೆ ಒಳಗೊಂಡಿದೆ? ಮುಂತಾದವುಗಳ ಬಗ್ಗೆ ಅರ್ಥಪೂರ್ಣ ಒಳನೋಟಗಳನ್ನು ನೀಡುವ ಕೃತಿ ಗೇಲ್ ಓಮ್ವೆಟ್ ಅವರ ಬೇಗಂಪುರ.

ಡಾ.ಬಂಜಗೆರೆ ಜಯಪ್ರಕಾಶ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಜಾತಿವಿರೋಧಿ ಬುದ್ಧಿಜೀವಿಗಳ ಸಾಮಾಜಿಕ ದೃಷ್ಟಿಕೋನ' ಎಂಬ ಕೃತಿಯ ಶೀರ್ಷಿಕೆಯ ಅಡಿಬರಹದಂತೆ ಸಾಮಾಜಿಕ–ರಾಜಕೀಯ ಚಿಂತಕರು ದಮನಿತ ಜನವರ್ಗಗಳ ಬಿಡುಗಡೆಗೆ ನಡೆಸಿದ ಚಿಂತನೆಗಳನ್ನು, ಮುಂದಿಟ್ಟ ಪರ್ಯಾಯ ರಾಜಕೀಯ ನಿಲುವುಗಳನ್ನು ಈ ಕೃತಿ ಕಟ್ಟಿಕೊಟ್ಟಿದೆ.

15ರಿಂದ 17ನೇ ಶತಮಾನದ ಆರಂಭಿಕ ಆಧುನಿಕ ಅವಧಿಯಿಂದ ಹಿಡಿದು ವಸಾಹತು ಆಳ್ವಿಕೆಯ ಕೊನೆಯವರೆಗಿನ ಐದು ಶತಮಾನಗಳ ಅವಧಿಯೊಳಗಿನ ಜಾತಿ ವ್ಯವಸ್ಥೆ ವಿರೋಧಿ ಪ್ರಮುಖ ಬುದ್ಧಿಜೀವಿಗಳ ಸಮಾಜೋ–ಆರ್ಥಿಕ ದೃಷ್ಟಿಕೋನಗಳ ಅಧ್ಯಯನದಂತಿದೆ ಈ ಕೃತಿ. ಜೋಖಾಮೇಳ, ಜನಾಬಾಯಿ, ಕಬೀರ್, ರವಿದಾಸ್, ತುಕಾರಾಂ, ಕರ್ತಾಭಜ, ಫುಲೆ, ಅಯೋತಿ ದಾಸ್, ಪಂಡಿತಾ ರಮಾಬಾಯಿ, ಪೆರಿಯಾರ್, ಅಂಬೇಡ್ಕರ್ ಅವರ ಮೂಲಕ ದಲಿತ, ಬಹುಜನ ಮತ್ತು ಅನೇಕ ಮಹಿಳಾ ಬುದ್ಧಿಜೀವಿಗಳು ಜಾತಿರಹಿತ, ವರ್ಗರಹಿತ ಸಮಾಜದ ಆದರ್ಶವನ್ನು ಹೇಗೆ ಕಟ್ಟಿದರು ಎಂಬುದನ್ನು ಲೇಖಕರು ಬೇಗಂಪುರದಲ್ಲಿ ದಾಖಲಿಸಿದ್ದಾರೆ. ಜತೆಗೆ ಗಾಂಧೀ ಅವರ ರಾಮರಾಜ್ಯ ಹಾಗೂ ನೆಹರೂ ಅವರ ಆದರ್ಶದ ಪರಿಕಲ್ಪನೆಯನ್ನೂ ಸಮೀಕರಿಸಲಾಗಿದೆ.



ಬೇಗಂಪುರ
ಲೇ: ಗೇಲ್ ಓಮ್ವೆಟ್
ಅನು: ಬಂಜಗೆರೆ ಜಯಪ್ರಕಾಶ
ಪ್ರ: ಜೀರುಂಡೆ ಪುಸ್ತಕ
ಸಂ: 97422 25779
ಪು: 240 ₹345

ಮಕ್ಕಳಿಗೆ ಹಕ್ಕಿಲೋಕ ಪರಿಚಯಿಸುವ ಕೃತಿ

ಮಕ್ಕಳಿಗೆ ಪಕ್ಷಿಗಳ ಲೋಕ ಪರಿಚಯಿಸಲು ಹೇಳಿ ಮಾಡಿಸಿದ ಪುಸ್ತಕ ಹಕ್ಕಿ ಅಟೆಂಡೆನ್ಸ್. ಶಿಕ್ಷಕರ ಪ್ರೀತಿ, ವಾತ್ಸಲ್ಯ, ಗದರುವಿಕೆಯ ಜೊತೆಜೊತೆಗೆ ಪಕ್ಷಿ ವೈವಿಧ್ಯದ ಪಾಠವಾಗುತ್ತದೆ. 138 ಬಗೆಯ ಪಕ್ಷಿಗಳ ಹಲವಾರು ಚಿತ್ರಗಳು, ಅಲ್ಬಂನಲ್ಲಿ ಹೊಂದಿಸಿಟ್ಟಂತೆ ಪುಟ ವಿನ್ಯಾಸ ಮಾಡಲಾಗಿದೆ. ಅವುಗಳ ಹೆಸರು, ಜೀವನಶೈಲಿ, ಕಾವ್ಯದಲ್ಲಿ ಅವುಗಳ ಬಣ್ಣನೆ ಎಲ್ಲವನ್ನೂ ಲೇಖಕಿ ನವಿಲಿನ ಗರಿಯಂತೆಯೇ ಹೊಂದಿಸಿಟ್ಟಿದ್ದಾರೆ. ಊಟ ಮಾಡಿಸುವಾಗ, ಮಲಗಿಸುವಾಗ ಈ ಪುಸ್ತಕ ಜೊತೆಗಿದ್ದರೆ ಮಕ್ಕಳ ಮುಂದೆ ಒಂದು ಬಣ್ಣದ ಪಕ್ಷಿಗಳ ಲೋಕವೇ ಬಿಚ್ಚಿಟ್ಟಂತೆ. ತಮ್ಮ ಸುತ್ತಲಿನ ಹಕ್ಕಿ ಪ್ರಪಂಚದಲ್ಲಿ ಕೆಲವನ್ನಾದರೂ ಗುರುತಿಸುವಂತೆ ಮಾಡಬಹುದಾಗಿದೆ. ಕೊನೆಯ ಪುಟದಲ್ಲಿ ಪಕ್ಷಿಗಳ ಕನ್ನಡ ಮತ್ತು ಇಂಗ್ಲಿಷ್ ಹೆಸರು ಆಗಾಗ ದೊಡ್ಡವರೂ ರೆಫರ್ ಮಾಡುವಂತಿವೆ. ಹೂ ಕುಟಿಗ, ಮರಕುಟಿಗ, ಮಂಗಟ್ಟೆ, ಹಾಲಕ್ಕಿ ಇವನ್ನೆಲ್ಲ ಹುಡುಕುವ, ಗುರುತಿಸುವ ಕೆಲಸವನ್ನೂ ಈ ಬೇಸಿಗೆ ರಜೆಯಲ್ಲಿ ಮಾಡಿಸಬಹುದು.

ಹಕ್ಕಿ ಅಟೆಂಡೆನ್ಸ್
ಚಿತ್ರ-ಬರಹ: ಲೀಲಾ ಅಪ್ಪಾಜಿ
ಪ್ರ: ವೀರಲೋಕ
ಸಂ: 7022122121
ಪು: 240 ₹595

ರೈತನಿಗೆ ಸಿರಿಸಂಗಾತದ ಅಭಿನಂದನೆ

ಡಾ. ಜಿ.ಎನ್.ಎಸ್. ರೆಡ್ಡಿ ಭಾರತೀಯ ಆಗ್ರೊ ಇಂಡಸ್ಟ್ರೀಸ್ ಫೌಂಡೇಷನ್ (ಬೈಫ್)ನ ಕರ್ನಾಟಕ–ಆಂಧ್ರಪ್ರದೇಶ ಕೇಂದ್ರದ ಮುಖ್ಯಸ್ಥರಾಗಿ ದೀರ್ಘಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಸೇವೆ ಮತ್ತು ಕೊಡುಗೆಯನ್ನು ಸ್ಮರಿಸುವ ಅಭಿನಂದನಾ ಗ್ರಂಥ 'ಸಾವಯವ ಸಂಗಾತ'. ಈ ಕೃತಿ ಅಭಿನಂದನಾ ಗ್ರಂಥ ಸ್ವರೂಪಕ್ಕೆ ಮತ್ತೊಂದು ಮಾದರಿ. ಪಶುವಿಜ್ಞಾನದಲ್ಲಿ ಪದವೀಧರರಾದ ರೆಡ್ಡಿಯವರು ತಮ್ಮ ಸೇವಾ ಅವಧಿಯಲ್ಲಿ ಪರಿಸರ, ಬೇಸಾಯ, ಪಶುಪಾಲನೆ, ಕೃಷಿ ಉತ್ಪನ್ನ ಮಾರುಕಟ್ಟೆ ಮತ್ತು ಅದರ ಬಿಕ್ಕಟ್ಟುಗಳ ಕುರಿತು ಅಧ್ಯಯನವನ್ನು ಮಾಡಿದ್ದಾರೆ. ಅವರ ಅಧ್ಯಯನ ಸೇವೆಯನ್ನು ಸ್ಮರಿಸುವ ಜತೆಗೆ ರೈತರ ಪಾಲಿಗೆ ಕೈಪಿಡಿಯಂತೆ ಈ ಕೃತಿ ಕಾಣಿಸುತ್ತದೆ.

ಕೃತಿಯನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ವಿಭಾಗದಲ್ಲಿ ರೆಡ್ಡಿ ಅವರ ಒಡನಾಡಿಗಳು 18 ಲೇಖನಗಳನ್ನು ಬರೆದಿದ್ದಾರೆ. ಬೈಫ್ ಸಂಸ್ಥೆಯ ಅಭಿವೃದ್ಧಿ, ಅಕ್ಷಯ ಕಾಯಕಲ್ಪ, ಕೃಷಿ ಹಾಗೂ ದೇಸಿ ಬೀಜಗಳ ಸಂರಕ್ಷಣೆಗೆ ಸಂಬಂಧಿಸಿದ ವಿಷಯದಲ್ಲಿ ರೆಡ್ಡಿಯವರ ಪಾತ್ರವನ್ನು ಸ್ಮರಿಸುವ ಬರಹಗಳಿವೆ.

ರೆಡ್ಡಿ ತಮ್ಮ ಸಂಪಾದಕತ್ವದಲ್ಲಿ 'ಸಿರಿ ಸಮೃದ್ಧಿ' ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಾರೆ. ಕೃಷಿ ತಜ್ಞರು, ಅನುಭವಿ ಮತ್ತು ಯಶಸ್ವಿ ರೈತರ ವಿಚಾರಗಳನ್ನು ಅವರು ಆ ಪತ್ರಿಕೆಯ ಮೂಲಕ ರೈತರಿಗೆ ತಲುಪಿಸುತ್ತಿದ್ದರು. ಅದರಲ್ಲಿ ಪ್ರಕಟವಾಗಿದ್ದ ಪ್ರಾತಿನಿಧಿಕ ಹತ್ತು ಲೇಖನಗಳನ್ನು ಆಯ್ಕೆ ಮಾಡಿಕೊಂಡು ಈ ಗ್ರಂಥದ ಎರಡನೇ ಭಾಗದಲ್ಲಿ ಪ್ರಕಟಿಸಿದ್ದಾರೆ.

ಮೂರನೇ ಭಾಗದಲ್ಲಿ 'ಪ್ರಜಾವಾಣಿ' ಕನ್ನಡಿ ಅಂಕಣದಲ್ಲಿ ಪ್ರಕಟಿತ ನಟರಾಜ್ ಹುಳಿಯಾರ್ ಅವರ 'ರೈತ ಚಳವಳಿಗೆ ಹೊಸ ಜೀವ' ಲೇಖನವೂ ಸೇರಿದಂತೆ ಜಿ. ಕೃಷ್ಣಪ್ರಸಾದ್, ನಾಗೇಶ ಹೆಗಡೆ, ಬರಗೂರು ರಾಮಚಂದ್ರಪ್ಪ ಮೊದಲಾದ ಬರಹಗಾರರ 36 ಲೇಖನಗಳನ್ನು ಸಂಪಾದಿಸಿ ಪ್ರಕಟಮಾಡಿದ್ದಾರೆ.

ಸಾವಯವ ಸಂಗಾತ
ಸಂ: ಸಿದ್ಧಗಂಗಯ್ಯ ಹೊಲತಾಳು
ಪ್ರ: ಅಕ್ಷಯಕಲ್ಪ ಆರ್ಗ್ಯಾನಿಕ್, ತಿಪಟೂರು
ಸಂ:9535388122
ಪು: 560 ₹500

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಬಾಳ್ಗನಸು

ಬಾಳ್ಗನಸು (ನಾ). (ಆಲಂ) ಜೀವನದಲ್ಲಿ ಒಳ್ಳೆಯದನ್ನು ಬಯಸಿ ಕಲ್ಪಿಸಿಕೊಂಡಿರುವ ಬದುಕಿನ ಭವಿಷ್ಯ.

(ಬಾಳ್ + ಕನಸು)

ಭರತನು ಮಾವನ ಮನೆಯಿಂದ ಹಿಂತಿರುಗಿ ಬರುವಷ್ಟರಲ್ಲಿ ತಂದೆ ದಶರಥನು ಮೃತನಾಗಿರುತ್ತಾನೆ. ತಂದೆಯ ಉಬ್ಬಿದ ಮೈಯನ್ನು ಎಳ್ಳಿನ ಎಣ್ಣೆಯ ಬಾನಿಯಿಂದ ತೆಗೆಯುವುದನ್ನು ನೋಡಿ ಅವನ ಮನ ಅಳುಕುತ್ತದೆ. ಅವನ ಮನದ ಭಾವವನ್ನು ಚಿತ್ರಿಸಿರುವ ಕವಿಯು – ಜೀವನದಲ್ಲಿ ಒಳ್ಳೆಯದನ್ನು ಬಯಸಿ ಕಲ್ಪಿಸಿಕೊಂಡಿರುವ ಬದುಕಿನ ಭವಿಷ್ಯವನ್ನು ಕಾವ್ಯಾಲಂಕಾರ ನುಡಿ 'ಬಾಳ್ಗನಸು' ರೂಪಿಸಿ - ಬದುಕಿನ ಜೀವದ್ರವ್ಯವನ್ನು ಕುಲುಕಾಡಿಸಿದ್ದಾರೆ.

ಭರತನಿಗೆ ಸಂತೋಷನಂದನ ಕಲ್ಪತರುವಿನಿಂದ ಜೋಲುವ ವಾತ್ಸಲ್ಯ ಭಾವದ ಹೆಜ್ಜೇನು ಹುಟ್ಟಿಯಂತೆ ಸುಖವಾಗಿದ್ದವನು ತಂದೆ ದಶರಥ. ಅವನು ಇಂದು ಚಟ್ಟದ ಕೆಟ್ಟಾಸೆ ಬೀಡಿನಲ್ಲಿದ್ದಾನೆ. ಅದು ಭರತನಿಗೆ ತನ್ನ 'ಬಾಳ್ಗನಸು'ಗಳಿಗೆಲ್ಲ ಕೊನೆಯ ಸುಡುಗಾಡಿನಂತೆ ಕಾಣುತ್ತಿದೆ. ಹಾಗಿರುವಾಗ ಆ ಬಾಲಋಷಿ ಭರತನು ಆ ಶವದಲ್ಲಿ ಪಿತೃದೇವನನ್ನು ಕಾಣಲು ಸಾಧ್ಯವೆ?

ಸಂತೋಷನಂದನದ ಕಲ್ಪತರುವಿಂ ಜೋಲ್ವ
ವಾತ್ಸಲ್ಯ ಭಾವದಾ ಹೆಜ್ಜೇನು ಹುಟ್ಟಿಯೋಲ್
ಸುಖದ ಮಾರ್ಗಿದತ್ತೊ ತಾನದೆ ಇಂದು ಸೂಡಿನೊಲ್,
ಕೆಟ್ಟಾಸೆ ಬೀಡಿನೊಲ್, ಬಾಳ್ಗನಸುಗಳಿಗೆಲ್ಲ
ಕೊನೆಯ ಸುಡುಗಾಡಿನೊಲ್ ಕಾಣುತಿರೆ, ಬಾಲಋಷಿ
ಭರತನಾ ಶವದೊಳರಸುವನೆ ಪಿತೃದೇವನಂ?

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಮೂಲ: ಉದಯ ಪ್ರಕಾಶ್
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್
ಅವರ
ವಿದ್ಯುತ್ ಬಲ್ಬ್ ಮತ್ತು ಸಾವಿನ ಅಂತರ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ
ಜಯದೇವಿ ಗಾಯಕವಾಡ
ಅವರ
ಹೆಣ್ಣೆಂದರೆ....!!

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ರಸ್ತೆಬದಿ ಕಂಡ ಬಿಂಬಗಳು...



ಮೈಸೂರು ಜಿಲ್ಲೆಯ ನಾಲಿಗ್ರಾಮ ತಾಲ್ಲೂಕಿನ **ಅವಿನಾಶ್ ದಮ್ಮಳ್ಳಿ** ಫೋಟೊಗ್ರಫಿ ಚಪಲದಿಂದಾಗಿ ಪತ್ರಕರ್ತ ವೃತ್ತಿಗೆ ವಿದಾಯ ಹೇಳಿದರು. ಈಗ ಮಳೆ, ಚಳಿ, ಗಾಳಿ, ಬಿಸಿಲೆನ್ನದೇ ಸೈಕಲ್‌ನ ಪೆಡಲ್ ತುಳಿಯುತ್ತಾ ರಾಜ್ಯವನ್ನೆಲ್ಲ ಸುತ್ತುತ್ತಿದ್ದಾರೆ. ಮುಂದೆ ಆ ಸೈಕಲ್‌ಗೆ ದೇಶವನ್ನೆಲ್ಲಾ ಸುತ್ತುವ ಹಂಬಲ.

ಮೈಸೂರಿನ ರಸ್ತೆಗಳಲ್ಲಿ ಸುತ್ತುತ್ತಾ ಬಿಡಿಚಿತ್ರಗಳನ್ನು ಜೇಬಿಗೆ ತುಂಬಿಕೊಳ್ಳುತ್ತಾ ಸಾಗಿದ ದಿನದ ಚಿತ್ರಣ ಇಲ್ಲಿದೆ.

ಚಿಕ್ಕಗಡಿಯಾರ ಸರ್ಕಲ್‌ನ ಫುಟ್‌ಪಾತ್‌ನಲ್ಲಿ, ತನ್ನ ಜಾಗವನ್ನು ಕಾಯ್ದಿರಿಸಿಕೊಂಡು ಕುಳಿತಿದ್ದ ಹಣ್ಣಿನಪುಟ್ಟಿ, ನೆರಳು-ಬೆಳಕಿನ ಸಂಯೋಜನೆಯಲ್ಲಿ ಸೈಕಲ್ ಏರಿ ಕುಳಿತು ವ್ಯಾಪಾರಕ್ಕೆ ಹೊರಟಂತೆ ಕಂಡಿತು.

ದೇವರಾಜ ಮಾರ್ಕೆಟ್‌ನ ತರಕಾರಿ ಅಂಗಡಿಯಲ್ಲಿ ಮಾಲೀಕನಿಗಿನ್ನೂ ಬೋಣಿ ಆಗಿಲ್ಲ. ಬೆಕ್ಕಂತೂ ಗಿರಾಕಿ ಅಲ್ಲ. ಆದರೆ ತರಕಾರಿ ಅಂಗಡಿಯಲ್ಲಿ ಬುಟ್ಟಿಗಳ ನಡುವೆ, ಚೀಲಗಳ ಸಂದಿಗಳಲ್ಲಿ ಕದ್ದುಮುಚ್ಚಿ ಸರಿಯುವ ಇಲಿಗಳ ಶಿಕಾರಿಗಂತೂ ಕೊರತೆ ಇಲ್ಲವಲ್ಲ.

ಬೆಳ್ಳಂಬೆಳಿಗ್ಗೆ ಮೈಸೂರು ಸುತ್ತಲು ಹೊರಟ ಅವಿನಾಶ್‌ಗೆ ಚಹಾ ಕುಡಿಯಬೇಕೆನಿಸಿತು. ಆಗ, ಮೈಸೂರಿನ ಕೋರ್ಟ್ ಮುಂಭಾಗದ ರಸ್ತೆಬದಿಯ ಕಾಪರ್ ಪಾಡ್ ಮರಗಳು ಚೆಲ್ಲಿದ ಹೂವಿನ ಹಾಸಿಗೆಯ ಮೇಲೆ ಅವರ ದಣಿದ ಸೈಕಲ್ ವಿಶ್ರಮಿಸಿತು.

ಚಿತ್ರ-ಕಥೆ

ಮುಂಜಾನೆಯ ಚಳಿಯಲ್ಲಿ ಚಹಾ ಕುಡಿಯುತ್ತಿದ್ದ ಮಂದಿ ನಡುವೆ ಬೆಚ್ಚಗೆ ಕುಳಿತಿದ್ದ ಬೆಕ್ಕಿಗೆ, ಅವರ ರಾಜಕೀಯ ಗಾಸಿಪ್ ಅಷ್ಟೇನು ಆಸಕ್ತಿ ಕೆರಳಿಸಿದಂತೆ ಕಾಣಲಿಲ್ಲ.

ಬೆಕ್ಕುಗಳ ಬೆನ್ನು ಹತ್ತಿದ ಕ್ಯಾಮೆರಾಗೆ ಅಚ್ಚರಿ ಎದುರಾಯಿತು. ಬೀಡಾಡಿ ಹಸುವನ್ನು ಸೆರೆ ಹಿಡಿದಾಗ ಫ್ರೇಮ್‌ನಲ್ಲಿ ಬೇಟೆಗೆ ಹೊಂಚು ಹಾಕುತ್ತಿದ್ದ ಹುಲಿ! ಅದೂ, ನಗರದ ನಡುಮಧ್ಯ!

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಿಕ್ಕು ಕೌತುಕ ಕಥೆಯ 'ಕಳ್ಳ'ಗಿಡ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಹೂದೋಟದಲ್ಲಿದ್ದ ದಾಸವಾಳದ ಗಿಡಕ್ಕೆ ಗೊಬ್ಬರ ಹಾಕುತ್ತಿದ್ದ. ಗಿಡವು ಇನ್ನಷ್ಟು ಹುಲುಸಾಗಿ ಬೆಳೆಯಲಿ ಎನ್ನುವುದು ಆತನ ಬಯಕೆಯಾಗಿತ್ತು. ಹೀಗಾಗಿ ದಿನವೂ ಒಂದು ಮುಷ್ಟಿ ಗೊಬ್ಬರ ಸುರಿಯತೊಡಗಿದ. ದಿನ ಉರುಳಿದಂತೆ ದಾಸವಾಳ ಗಿಡದ ಪಕ್ಕದಲ್ಲೇ ಇದ್ದ ಕಳ್ಳಿಗಿಡ ಹುಲುಸಾಗಿ ಬೆಳೆಯತೊಡಗಿತ್ತು. ತಿಂಗಳು ಕಳೆಯುವುದರೊಳಗೆ ಕಳ್ಳಿಗಿಡ ದಾಸವಾಳ ಗಿಡಕ್ಕಿಂತ ಎತ್ತರಕ್ಕೆ ಬೆಳೆದಿತ್ತು.



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಎಚ್. ಎನ್. ನಲ್ಮೆ
ಹೊಸದುರ್ಗ

ಅಮೋಘ್ ಎಂ.ಎಚ್.
ಚಿಕ್ಕನಾಯಕನಹಳ್ಳಿ

ಭಾಗ್ಯ ಜಿ.
ಗದಗ

ಸಿದ್ದು
ದೇವದುರ್ಗ

ಋತ್ವಿಕ್ ಎಸ್.ಎನ್.
ಉಡುಪಿ

ಜಾನ್ವಿ ಎಂ.ತಾಳಿಕೋಟೆ
ಹುಬ್ಬಳ್ಳಿ

ENGLISH ಮೋಗ ನ

ಉಚ್ಚಾರ ಒಂದೇ ಪದ ಬೇರೆ

ಇಲ್ಲಿ ಕೊಟ್ಟಿರುವ ಅಕ್ಷರಗಳಿಗೆ ಇನ್ನೆರಡು ಅಕ್ಷರ ತುಂಬಿ ಓದಿದರೆ ಉಚ್ಚಾರ ಒಂದೇಯಾಗುವ ಪದ ರಚಿಸಿ.

1	R			D
2	L			N
3	S			L
4	T		L	
5	H			R
6	F			R
7	D			R
8	M		L	

R			D
L		N	
S		L	
T			L
H		R	
F		R	
D			R
M			L

ಗಣಿತದಲ್ಲಿ ಗರ್ದಿಗಮ್ಮತ್ತು

ಬೆಡಗಿನ ಭಾಗಾಂಕ

2438195760 –ಇದೊಂದು ಸ್ವಾರಸ್ಯಕರ ಸಂಖ್ಯೆ. ಈ ಸಂಖ್ಯೆಯನ್ನು 2ರಿಂದ 18ರವರೆಗಿನ ಯಾವುದೇ ಸಂಖ್ಯೆಯಿಂದ ಭಾಗಿಸಿದರೂ ಶೇಷ 0 ಉಳಿಯುತ್ತದೆ. ಅಂದರೆ ಸಂಪೂರ್ಣವಾಗಿ ಭಾಗವಾಗುತ್ತದೆ.

ಉದಾ: 8)2438195760(304774470
24
038
32
61
56
59
56
35
32
37
32
56
56
000

ಇಂತಹ ಇನ್ನೂ ಮೂರು ಸಂಖ್ಯೆಗಳಿವೆ
1: 3785942160
2: 4753869120
3: 4876391520

ನೀವೂ ಪ್ರಯತ್ನಿಸಿ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಒಂದೇ ಅಕ್ಷರಗಳ ಪದದಲ್ಲಿ ಉಚ್ಚಾರ ಸೂಕ್ಷ್ಮವಾಗಿ ಒಂದೇ ರೀತಿಯಾದಂತೆ ಕಂಡರೂ ಅವು ಬೇರೆ ಬೇರೆ ಅರ್ಥ ಕೊಡುವ ಪದಗಳೇ. ನೀವು ಈ ಅಕ್ಷರಗಳಿಗೆ ಹೊಂದುವಂತೆ ಅಕ್ಷರ ಪಟ್ಟಿಯಿಂದ ಜೋಡಿ ಅಕ್ಷರ ಆಯ್ದು ತುಂಬಿ.

1	ದ	ನ	ಹ		6
ಉದಾ:	ಧ	ನ	ಹ		
2	ಬ			ಣ	7
	ಬ			ಣ	
3		ರಿ		ರ	8
		ರಿ		ರ	
4	ಗಾ			ಲೆ	9
	ಗಾ			ಲೆ	
5	ಮ		ಮ		10
	ಮ		ಮ		

ಅಕ್ಷರ ಪಟ್ಟಿ

ದ	ಧ
ಣ	ನ
ಜ	ಝು
ಣ	ನ
ಣೆ	ನೆ
ಕ	ಖ
ಕ	ಖ
ಬ	ಭ
ಣಿ	ನಿ
ನ	ಣ

ಚೂರು-ಮರಿ

ಯಮಳ ಅವಿಭಾಜ್ಯ ಸಂಖ್ಯೆ

ಯಾವುದೇ ಒಂದು ಸಂಖ್ಯೆ 1 ಹಾಗೂ ಅದೇ ಸಂಖ್ಯೆಯನ್ನು ಹೊರತುಪಡಿಸಿ ಬೇರಾವ ಸಂಖ್ಯೆಯಿಂದಲೂ ಭಾಗವಾಗದಿದ್ದರೆ ಆ ಸಂಖ್ಯೆಗೆ ಅವಿಭಾಜ್ಯ ಸಂಖ್ಯೆ ಎನ್ನುವರು.
ಉದಾ: 3,5,7,11,13....ಇಂಥ ಸಂಖ್ಯೆ ಸರಣಿಯಲ್ಲಿ ಜೊತೆ ಜೊತೆಯಾಗಿರುವ ಎರಡು ಸಂಖ್ಯೆಗಳಿಗೆ(ನಡುವೆ ಒಂದು ಸಂಖ್ಯೆ ಅಂತರ) ಯಮಳ ಅವಿಭಾಜ್ಯ ಸಂಖ್ಯೆ ಎನ್ನುವರು.
ಉದಾ: 3.5, 5.7, 11.13..ಹೀಗೆ ಅಂತಹ ಎರಡು ದೊಡ್ಡ ಸಂಖ್ಯೆ ಇಲ್ಲಿವೆ ನೋಡಿ:
999999999959
999999999961 –ಯಮಳ ಅವಿಭಾಜ್ಯ ಸಂಖ್ಯೆಗಳು

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಕುಂದ ಹರಿ ಮರ
ಕಾರ ರಣ ವರು

ಅಕ್ಷರ ಪಟ್ಟಿ

ಣ	ಳು	ವಿ	ಣ	ಸು	ದೇ
ಹೂ	ಅ	ಮು	ಲ	ಜಿ	ಣ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಕಾಗದಗ 2.ಕಮರುಗು 3.ಗುಮಾನಿನಿ 4.ಶಹರಳು 5.ಸವಾರಿಧಿ 6.ನೆಗಡಿಗೆ

ಜೋಡಿ ಪದ ಆಟ: 1.ಸರತಿ:ಸಮಿತಿ 2.ಸವಾರ;ಸರ್ದಾರ 3.ವಚನ:ವಜನ 4.ನಾಯಕ:ನಾವಿಕ 5.ಮಯೂರ:ಮಸೂರ 6.ಕಪಿಲೆ:ಕಡಲೆ 7.ಜಪಾನ:ಜವಾನ 8.ಹಳಸು:ಹಲಸು 9.ಮನನ:ಮದನ 10.ನಗರ:ನಶ್ವರ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬಾಕ್ಸಿಂಗ್: ಚಿನ್ನದ ಸಾಧನೆ

ಬೆಂಗಳೂರು: ಬೆಂಗಳೂರಿನ ಸಹೋದರಿಯರಾದ ಅಮೂಲ್ಯ ಮತ್ತು ಅನನ್ಯಾ ಅವರು ಖೇಲೊ ಇಂಡಿಯಾ ಆರ್‌ಇಸಿ ಸೌದರ್ನ್ ಟ್ಯಾಲೆಂಟ್ ಹಂಟ್ ಓಪನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಯೂತ್ ವಿಮೆನ್ ವಿಭಾಗದಲ್ಲಿ ಅಮೂಲ್ಯ (70 ಕೆಜಿ) ಮತ್ತು ಸಬ್ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಅನನ್ಯಾ (58ರಿಂದ 61 ಕೆಜಿ) ಚಿನ್ನದ ಸಾಧನೆ ಮಾಡಿದ್ದಾರೆ.

ಅವರಿಗೆ ಕ್ಯಾಪ್ಟನ್ ಚಂದ್ರಶೇಖರ್ ಮಾರ್ಗದರ್ಶನ ನೀಡುತ್ತಿದ್ದಾರೆ.

ಚೆಸ್: ಅಗ್ರಸ್ಥಾನದಲ್ಲಿ ಪರ್ಹಾಮ್

'ಡ್ರಾ' ಪಂದ್ಯದಲ್ಲಿ ಭಾರತದ ಮೂವರು

ಪ್ರಾಗ್ (ಪಿಟಿಐ): ಭಾರತದ ಮೂವರು ಪ್ರಮುಖ ಆಟಗಾರರಾದ– ಆರ್. ಪ್ರಜ್ಞಾನಂದ, ಡಿ.ಗುಕೇಶ್ ಮತ್ತು ವಿದಿತ್ ಗುಜರಾತಿ ಅವರು ಪ್ರಾಗ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಪೂರ್ಣ ಪಾಯಿಂಟ್ ಪಡೆಯಲು ವಿಫಲರಾದರು. ಮೂವರೂ ಶನಿವಾರ ತಮ್ಮ ತಮ್ಮ ಎದುರಾಳಿಗಳ ಜೊತೆ ಡ್ರಾ ಮಾಡಿಕೊಂಡರು. ಈ ಸುತ್ತಿನ ಇತರ ಪಂದ್ಯಗಳೂ ಡ್ರಾ ಆಗಿದ್ದು ವಿಶೇಷ.

ಪ್ರಜ್ಞಾನಂದ

ಡಿ.ಗುಕೇಶ್

ಬೆನ್ನುಬೆನ್ನಿಗೆ ಎರಡು ಪಂದ್ಯ ಗಳನ್ನು ಸೋತಿದ್ದ ಪ್ರಜ್ಞಾನಂದ ಅವರು ಸ್ಥಳೀಯ ಆಟಗಾರ ಗುಯೆನ್ ಥಾಯಿ ದೈ ವಾನ್ ಜೊತೆ 40 ನಡೆಗಳ ನಂತರ 'ಡ್ರಾ' ಮಾಡಿಕೊಂಡು ಅರ್ಧ ಪಾಯಿಂಟ್ ಗಳಿಸಿ ನಿಟ್ಟುಸಿರಿಟ್ಟರು.

ದೊಮ್ಮರಾಜು ಗುಕೇಶ್ ಕೂಡ ಎಚ್ಚರಿಕೆಯ ಆಟವಾಡಿ ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೊವ್ ಅವರಿಗೆ ಗೆಲುವಿನ ಅವಕಾಶ ನೀಡದೇ ಅರ್ಧ ಪಾಯಿಂಟ್ ಪಡೆದರು. ವಿದಿತ್ ಗುಜರಾತಿ, ಪೋಲೆಂಡ್‌ನ ಮಾಥ್ಯೂಸ್ ಬಾರ್ಟೆಲ್ ಜೊತೆ 'ಶಾಂತಿ ಒಪ್ಪಂದಕ್ಕೆ' ಸಹಿ ಹಾಕಿದರು.

10 ಆಟಗಾರರ ಈ ಟೂರ್ನಿಯ ಇತರ ಎರಡು ಪಂದ್ಯಗಳಲ್ಲೂ ನಿರ್ಣಾಯಕ ಫಲಿತಾಂಶ ಬರಲಿಲ್ಲ. ಪರ್ಹಾಮ್ ಮಘಸೂಡ್ಲು (ಇರಾನ್) ಅವರು ಝೆಕ್ ರಿಪಬ್ಲಿಕ್‌ನ ಅಗ್ರ ಆಟಗಾರ ಡೇವಿಡ್ ನವಾರ ಜೊತೆ ಡ್ರಾ ಮಾಡಿಕೊಂಡರೆ, ರುಮೇನಿಯಾದ ರಿಚಾರ್ಡ್ ರ್‍ಯಾಪೋರ್ಟ್, ಜರ್ಮನಿಯ ವಿನ್ಸೆಂಟ್ ಕೀಮರ್ ಜೊತೆ 'ಡ್ರಾ' ಮಾಡಿಕೊಂಡರು. ಹೀಗಾಗಿ ಅಗ್ರಸ್ಥಾನ ಸೇರಿದಂತೆ ಉಳಿದ ಸ್ಥಾನಗಳು ಶುಕ್ರವಾರದ ರೀತಿಯಲ್ಲೇ ಮುಂದುವರಿದವು. ಅಬ್ದುಸತ್ತಾರೋವ್ ಮತ್ತು ಮಘಸೂಡ್ಲು (ತಲಾ 3 ಪಾಯಿಂಟ್ಸ್) ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಗುಕೇಶ್ ಮತ್ತು ರ್‍ಯಾಪೋರ್ಟ್ (ತಲಾ 2.5 ಪಾಯಿಂಟ್ಸ್) ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಇದೇ ವೇಳೆ ಭಾರತದ ಅಗ್ರಕ್ರಮಾಂಕದ ಆಟಗಾರನ ಸ್ಥಾನಕ್ಕೆ ಪೈಪೋಟಿ ಮುಂದುವರಿದಿದೆ. ಚೀನಾದಲ್ಲಿ ನಡೆಯುತ್ತಿರುವ ಶೆನ್‌ಝೆನ್ ಮಾಸ್ಟರ್ಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಅರ್ಜುನ್ ಇರಿಗೇಶಿ, ಷಿಯಾಂಗ್ಜಿ ಬು ಅವರಿಗೆ ಸೋತ ಕಾರಣ ವಿಶ್ವನಾಥನ್ ಆನಂದ್ ಭಾರತದ ಅಗ್ರಮಾನ್ಯ ಆಟಗಾರ ಪಟ್ಟವನ್ನು ಮರಳಿ ಪಡೆದಿದ್ದಾರೆ.



ಸೆಮಿಫೈನಲ್: ಮುಂಬೈ ತಂಡದ ವಿರುದ್ಧ ಅಲ್ಪಮೊತ್ತಕ್ಕೆ ಕುಸಿದ ತಮಿಳುನಾಡು

ರಣಜಿ: ತುಷಾರ್, ಠಾಕೂರ್ ದರ್ಬಾರ್

ಮುಂಬೈ (ಪಿಟಿಐ): ತುಷಾರ್ ದೇಶಪಾಂಡೆ (24ಕ್ಕೆ3) ಮತ್ತು ಶಾರ್ದೂಲ್ ಠಾಕೂರ್ (48ಕ್ಕೆ2) ಅವರ ಅಮೋಘ ಬೌಲಿಂಗ್‌ನಿಂದಾಗಿ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಸೆಮಿ ಫೈನಲ್‌ನಲ್ಲಿ ಮುಂಬೈ ತಂಡವು ಮೊದಲ ದಿನದ ಗೌರವ ಗಳಿಸಿತು.

ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ ಶನಿವಾರ ಆರಂಭವಾದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ಮಾಡಿದ ತಮಿಳುನಾಡು ತಂಡವು 64.1 ಓವರ್‌ಗಳಲ್ಲಿ 146 ರನ್‌ಗಳ ಅಲ್ಪಮೊತ್ತ ಗಳಿಸಿತು. ವಿಜಯಶಂಕರ್ (44 ರನ್) ಮತ್ತು ವಾಷಿಂಗ್ಟನ್ ಸುಂದರ್ (43 ರನ್) ಅವರಿಬ್ಬರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ವಿಫಲರಾದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ತಮಿಳುನಾಡು ತಂಡದ ನಾಯಕ ಬಿ. ಸಾಯಿಕಿಶೋರ್ ನಿರ್ಧಾರವು ಫಲ ನೀಡಲಿಲ್ಲ. ಮುಂಬೈ ತಂಡದ ತುಷಾರ್ ಮತ್ತು ಶಾರ್ದೂಲ್ ಅವರ ಸ್ವಿಂಗ್ ದಾಳಿಯ ಮುಂದೆ ತತ್ತರಿಸಿತು.

ಇದಕ್ಕುತ್ತರವಾಗಿ ಮುಂಬೈ ತಂಡದ ಇನಿಂಗ್ಸ್ ಆರಂಭಿಸಿದ್ದು, ಆಘಾತ ಅನುಭವಿಸಿದೆ. ದಿನದಾಟದ ಮುಕ್ತಾಯಕ್ಕೆ 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 45 ರನ್ ಗಳಿಸಿದೆ. ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಆರಂಭಿಕ ಬ್ಯಾಟರ್ ಪೃಥ್ವಿ ಶಾ (5 ರನ್) ಅವರು ಕುಲದೀಪ್ ಸೇನ್ ಎಸೆತವನ್ನು ಆಡುವ ಭರದಲ್ಲಿ ಇಂದ್ರಜೀತ್‌ಗೆ ಕ್ಯಾಚಿತ್ತರು.

ಇದಾಗಿ 12 ಓವರ್‌ಗಳಾದ ನಂತರ ಸಾಯಿಕಿಶೋರ್ ಬೌಲಿಂಗ್‌ನಲ್ಲಿ ಮುಂಬೈನ ಭುಪೇನ್ ಲಾಲ್ವಾನಿ (15) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಸಂಕ್ಷಿಪ್ತ ಸ್ಕೋರ್: ಬಾಂದ್ರಾ–ಕುರ್ಲಾ ಕಾಂಪ್ಲೆಂಕ್ಸ್, ಮುಂಬೈ: ಮೊದಲ ಇನಿಂಗ್ಸ್: ತಮಿಳುನಾಡು: 64.1 ಓವರ್‌ಗಳಲ್ಲಿ 146 (ವಿಜಯಶಂಕರ್ 44, ವಾಷಿಂಗ್ಟನ್ ಸುಂದರ್ 43, ಶಾರ್ದೂಲ್ ಠಾಕೂರ್ 48ಕ್ಕೆ2, ತುಷಾರ್ ದೇಶಪಾಂಡೆ 24ಕ್ಕೆ3, ತನುಷ್ ಕೋಟ್ಯಾನ್ 10ಕ್ಕೆ2) ಮುಂಬೈ: 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 45 (ಭುಪೇನ್ ಲಾಲ್ವಾನಿ 15, ಮುಷೀರ್ ಖಾನ್ ಔಟಾಗದೆ 24, ಕುಲದೀಪ್ ಸೇನ್ 25ಕ್ಕೆ1, ಸಾಯಿ ಕಿಶೋರ್ 3ಕ್ಕೆ1)

ಮುಂಬೈ ತಂಡದ ವೇಗಿ ತುಷಾರ್ ದೇಶಪಾಂಡೆ –ಪಿಟಿಐ ಚಿತ್ರ

ಖಾನ್ 'ಆವೇಶ'ಕ್ಕೆ ವಿದರ್ಭ ತತ್ತರ

ನಾಗ್ಪುರ (ಪಿಟಿಐ): ಇನ್ನೊಂದು ಸೆಮಿಫೈನಲ್‌ನಲ್ಲಿ ಮಧ್ಯಪ್ರದೇಶದ ವೇಗಿ ಆವೇಶ್ ಖಾನ್ ಅವರ (49ಕ್ಕೆ4) ಅವರ ದಾಳಿಯ ಮುಂದೆ ಆತಿಥೇಯ ವಿದರ್ಭ ತಂಡವು ಸಾಧಾರಣ ಮೊತ್ತಕ್ಕೆ ಕುಸಿಯಿತು.

ಇಲ್ಲಿಯ ಸಿವಿಲ್ ಲೈನ್ಸ್ ಮೈದಾನದಲ್ಲಿ ಟಾಸ್ ಗೆದ್ದ ವಿದರ್ಭ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ತಂಡದಲ್ಲಿರುವ ಕರ್ನಾಟಕದ ಕರುಣ್ ನಾಯರ್ (63; 105ಎ, 4X9) ಅವರು ಅರ್ಧಶತಕ ಗಳಿಸಿದರು. ವಿದರ್ಭ 56.4 ಓವರ್‌ಗಳಲ್ಲಿ 170 ರನ್ ಗಳಿಸಿತು.

ಇದಕ್ಕುತ್ತರವಾಗಿ ಮಧ್ಯಪ್ರದೇಶ ತಂಡವು ದಿನದಾಟದ ಮುಕ್ತಾಯಕ್ಕೆ 20 ಓವರ್‌ಗಳಲ್ಲಿ 1 ವಿಕೆಟ್‌ಗೆ 47 ರನ್ ಗಳಿಸಿತು. ಹಿಮಾಂಶು ಮಂತ್ರಿ (ಔಟಾಗದೆ 26) ಮತ್ತು ಹರ್ಷ ಗೌಳಿ (ಬ್ಯಾಟಿಂಗ್ 10) ಕ್ರೀಸ್‌ನಲ್ಲಿದ್ದಾರೆ.

ಆರಂಭಿಕ ಬ್ಯಾಟರ್ ಯಶ್ ದುಬೆ ಅವರ ವಿಕೆಟ್ ಅನುಭವಿ ವೇಗಿ ಉಮೇಶ್ ಯಾದವ್ ಅವರ ಖಾತೆ ಸೇರಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: 56.4 ಓವರ್‌ಗಳಲ್ಲಿ 170 (ಅಥರ್ವ್ ತೈಡೆ 39, ಕರುಣ್ ನಾಯರ್ 63, ಆವೇಶ್ ಖಾನ್ 49ಕ್ಕೆ4, ಕುಲವಂತ್ ಕೆಜ್ರೊಲಿಯಾ 38ಕ್ಕೆ2, ವೆಂಕಟೇಶ್ ಅಯ್ಯರ್ 28ಕ್ಕೆ2) ಮಧ್ಯಪ್ರದೇಶ: 20 ಓವರ್‌ಗಳಲ್ಲಿ 1 ವಿಕೆಟ್‌ಗೆ 47 (ಹಿಮಾಂಶು ಮಂತ್ರಿ 26, ಹರ್ಷ ಗೌಳಿ ಔಟಾಗದೆ 10, ಯಶ್ ದುಬೆ 11, ಉಮೇಶ್ ಯಾದವ್ 18ಕ್ಕೆ1)



EV Charging Station Tariff Rate for the month of February 2024

Particulars	CCS/ CHAdeMO (25kW) Cost in INR/kWh	GB /T (15kW) Cost in INR/kWh	IEC 60309 (3.3kW) Cost in INR/kWh
Energy Charge	5.84	5.17	5.03
Service Charge	1.30	1.30	1.30
CGST @ 9% on Service Charge	0.12	0.12	0.12
SGST @ 9% on Service Charge	0.12	0.12	0.12
TOTAL	7.38	6.71	6.57